
ಹೊಸಕೆರೆ ಚಿದಂಬರಯ್ಯ ವಿರಚಿತ

ಭಕ್ತಿಗೀತಾವಳಿ



ಸಂಪಾದಕರು

ಪ್ರೊ|| ಜಿ. ಅಶ್ವತ್ಥನಾರಾಯಣ

ಪ್ರಕಾಶಕರು:

ಹೊಸಕೆರೆ ಚಿದಂಬರಯ್ಯ ಸಂಸ್ಮರಣ ಸಮಿತಿ ಟ್ರಸ್ಟ್

ಬೆಂಗಳೂರು

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ಚಾಮರಾಜಪೇಟೆ, ಬೆಂಗಳೂರು

ಮತ್ತು

ಹೊಸಕೆರೆ ಚಿದಂಬರಯ್ಯ ಸಂಸ್ಮರಣ ಸಮಿತಿ ಟ್ರಸ್ಟ್

ಬನಶಂಕರಿ 3ನೆಯ ಹಂತ, ಕತ್ರಿಗುಪ್ಪೆ, ಬೆಂಗಳೂರು – 85

ಹೊಸಕೆರೆ ಚಿದಂಬರಯ್ಯನವರ 74ನೆಯ ಪುಣ್ಯದಿನ ಸ್ಮರಣೆ

ಗ್ರಂಥಬಿಡುಗಡೆ ಮತ್ತು ವಿಶೇಷೋಪನ್ಯಾಸ ಸಮಾರಂಭ

ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು

ದಿನಾಂಕ: 28-04-2012 ಶನಿವಾರ **ಸಮಯ:** ಸಂಜೆ 6 ಗಂಟೆ

ವಿಶೇಷ ಉಪನ್ಯಾಸ

ಹೊಸಕೆರೆ ಚಿದಂಬರಯ್ಯನವರ ಕೃತಿಗಳು – ಮರುಚಿಂತನೆ

ಉಪನ್ಯಾಸಕರು

ಶ್ರೀ ಹರಿಹರಪ್ರಿಯ, ಖ್ಯಾತ ಸಾಹಿತಿಗಳು ಮತ್ತು ಚಿಂತಕರು

ಹೊಸಕೆರೆ ಚಿದಂಬರಯ್ಯ ವಿರಚಿತ

'ಭಕ್ತ ಗೀತಾವಳಿ' ಸ್ವತಂತ್ರ ಕನ್ನಡ ಕೀರ್ತನೆಗಳು

ಲೋಕಾರ್ಪಣೆ: **ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್**

ಕುಲಪತಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು

ಮುಖ್ಯ ಅತಿಥಿ:

ಪ್ರೊ. ಜಿ. ಅಶ್ವತ್ಥನಾರಾಯಣ, ಸಂಪಾದಕರು, ಭಕ್ತಿಗೀತಾವಳಿ

ಅಧ್ಯಕ್ಷತೆ:

ಶ್ರೀ ಜಿ.ಎನ್. ಲಕ್ಷ್ಮೀನಾರಾಯಣರಾವ್

ಅಧ್ಯಕ್ಷರು, ಹೊಸಕೆರೆ ಚಿದಂಬರಯ್ಯ ಸಂಸ್ಮರಣ ಸಮಿತಿ ಟ್ರಸ್ಟ್, ಬೆಂಗಳೂರು

ಹೊಸಕೆರೆ ಚಿದಂಬರಯ್ಯನವರ ಕೀರ್ತನೆಗಳ ಗಾಯನ

ಹೊಸಕೆರ ಚಿದಂಬಯ್ಯನವರ ಕುಟುಂಬದ ಕಲಾವಿದರು

ಸರ್ವರಿಗೂ ಆದರದ ಸ್ವಾಗತ

ಎಚ್.ಡಿ. ರಮೇಶ್
ಪ್ರಧಾನ ಕಾರ್ಯದರ್ಶಿ
ಹೊಸಕೆರೆ ಚಿದಂಬರಯ್ಯ ಸಂಸ್ಮರಣ ಸಮಿತಿ ಟ್ರಸ್ಟ್

ಪ್ರೊ. ವೈ.ಎಸ್. ಸಿದ್ದೇಗೌಡ
ಕುಲಸಚಿವರು
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ಹೊಸಕೆರೆ ಚಿದಂಬರಯ್ಯ ವಿರಚಿತ

ಭಕ್ತಿ ಗೀತಾವಳಿ

(ಕನ್ನಡ ಕೀರ್ತನೆಗಳು)

ಸಂಪಾದಕರು:
ಪ್ರೊ॥ ಜಿ. ಅಶ್ವತ್ಥನಾರಾಯಣ
ನಿವೃತ್ತ ಕನ್ನಡ ಪ್ರಾಧ್ಯಾಪಕರು

ಪ್ರಕಾಶಕರು:
ಹೊಸಕೆರೆ ಚಿದಂಬರಯ್ಯ ಸಂಸ್ಮರಣ ಸಮಿತಿ ಟ್ರಸ್ಟ್
"ಶ್ರೀನಿಧಿ, ೧೧೭, ೪ನೇ ಬ್ಲಾಕ್, ೩ನೇ ಘಟ್ಟ,
ಬನಶಂಕರಿ ೩ನೇ ಹಂತ, ಕತ್ರಿಗುಪ್ಪೆ, ಬೆಂಗಳೂರು-೮೫.

೨೦೧೨

BHAKTHI GEETHAVALI-Kannada Keerthanegalu:
By `Karnataka Kaviratna' Sri Hosakere Chidambaraiah,
Edited by: Prof. G. Aswathanarayana, # 95, 34th 'B' Cross,
16th Main, 4th 'T' Block, Jayanagar, Bangalore-560 041.
Published by: Hosakere Chidambaraiah Sumsmarana Samithi
Trust,"Srinidhi", 117, 4th Block, 3rd Phase, BSK III Stage,
Kattriguppe, Bangalore-560 085. Pages: xxxii + 168.
Size: 1/8 Demy; Paper: Maplitho 70 gsm .

First Edition: 1919. Revised Second Edition: 2012.

 Rs. 100/-

Printed at: **XPRESS PRINTZONE,** No. 62, 6th Cross,
Krishna Road, C.T. Bed, BSK II Stage, Bangalore-560 070.
Ph: 080-2671 3020 / 94480 86811

ಭಕ್ತಿಗೀತಾವಳಿ (ಕನ್ನಡ ಕೀರ್ತನೆಗಳು): ಲೇ: ಹೊಸಕೆರೆ ಚಿದಂಬರಯ್ಯ
ಸಂಪಾದಕ: ಪ್ರೊ. ಜಿ. ಅಶ್ವತ್ಥನಾರಾಯಣ, ಬೆಂಗಳೂರು

ಪುಟಗಳು: xxxii + ೧೬೮
ಕಾಗದ: ಮ್ಯಾಪ್ಲಿಥೋ ೭೦ ಜಿಎಸ್ಎಂ.

ಪ್ರಥಮ ಮುದ್ರಣ : ೧೯೧೯
ದ್ವಿತೀಯ ಮುದ್ರಣ (ಪರಿಷ್ಕೃತ) : ೨೦೧೨

ಬೆಲೆ: ರೂ. ೧೦೦/-

ಪ್ರಕಾಶಕರು:
ಹೊಸಕೆರೆ ಚಿದಂಬರಯ್ಯ ಸಂಸ್ಮರಣ ಸಮಿತಿ ಟ್ರಸ್ಟ್
"ಶ್ರೀನಿಧಿ, ೧೧೭, ೪ನೇ ಬ್ಲಾಕ್, ೩ನೇ ಘಟ್ಟ,
ಬನಶಂಕರಿ ೩ನೇ ಹಂತ, ಕತ್ರಿಗುಪ್ಪೆ, ಬೆಂಗಳೂರು-೮೫.

ಮುದ್ರಕರು:
ಎಕ್ಸ್‌ಪ್ರೆಸ್ ಪ್ರಿಂಟ್‌ಝೋನ್
ನಂ. ೬೨, ೬ನೇ ಅಡ್ಡರಸ್ತೆ, ಸಿ.ಟಿ. ಬೆಡ್, ಬನಶಂಕರಿ ೨ನೇ ಹಂತ
ಬೆಂಗಳೂರು-೭೦. ದೂ: ೦೮೦-೨೬೭೧ ೩೦೨೦ / ೯೪೪೮೦-೮೬೮೧೧

ಪರಿವಿಡಿ

I.	ಲೇಖಕರ ವಿಜ್ಞಾಪನೆ	.....	iv
II.	ಮುನ್ನುಡಿ	.....	vi
III.	ಸಂಪಾದಕರ ನುಡಿ	.....	ix
IV.	ಪ್ರಕಾಶಕರ ಮಾತು	.....	xxiii
V.	ಅರ್ಪಣೆ	.....	xxv
VI.	ವಿಷಯಾನುಸಾರ ಕೀರ್ತನೆಗಳ ಸೂಚಿ	.....	xxvii
VII.	ಕೀರ್ತನೆಗಳು	.....	೧–೧೬೦
VIII.	ಅನುಬಂಧಗಳು		
	೧. ಹೊಸಕೆರೆ ಚಿದಂಬರಯ್ಯ ಕೃತಿಸೂಚಿ	.....	೧೬೧–೧೬೩
	೨. ಕೀರ್ತನೆಗಳ ಅಕಾರಾದಿ	.....	೧೬೪–೧೬೮

[illegible] 11-2-2021 [illegible]

ಲೇಖಕರ ವಿಜ್ಞಾಪನೆ

(ಹೊಸಕೆರೆ ಚಿದಂಬರಯ್ಯನವರು ಮೊದಲ ಮುದ್ರಣಕ್ಕೆ ಬರೆದಿದ್ದು)

ಮನುಷ್ಯರಲ್ಲಿ ಪ್ರೇಮಸ್ವಭಾವವೂ ಇತರ ಸುಗುಣಗಳೂ ಎಷ್ಟರಮಟ್ಟಿಗೆ ಇರುವವೋ ಸುಖವು ಅಷ್ಟರಮಟ್ಟಿಗೆ ಮಾತ್ರ ತೋರುವದೆಂದು ಎಲ್ಲರೂ ಒಪ್ಪಿಕೊಳ್ಳಬೇಕು. ಇವು ಮನುಷ್ಯನಲ್ಲಿ ಬೀಜರೂಪದಲ್ಲಿದ್ದೇ ಇರುವುವು. ಯಾರಲ್ಲಿ ಇವು ಹೆಚ್ಚಾಗಿವೆಯೋ ಅವರ ಸಹವಾಸದಿಂದ ಯಾವನು ಇವುಗಳನ್ನು ತನ್ನಲ್ಲಿ ಎಷ್ಟು ಹೆಚ್ಚಾಗಿ ಬೆಳೆಸಿಕೊಳ್ಳುವನೊ ಅವನು ಅಷ್ಟು ಹೆಚ್ಚಾಗಿ ಸುಖವನ್ನು ಅನುಭವಿಸುವನು. ಭಗವಂತನು ಪ್ರೇಮಸ್ವರೂಪನೇ ಆಗಿಯೂ ಸಕಲಕಲ್ಯಾಣ ಗುಣಗಳ ಮೂರ್ತಿಯೇ ಆಗಿಯೂ ಇರುವನೆಂದು ಮಹಾಮಹಾಜ್ಞಾನಿಗಳು ಹೇಳುವರು. ಆದುದರಿಂದ ಪ್ರತಿಯೊಬ್ಬನೂ ಪ್ರತಿದಿನವೂ ಸ್ವಲ್ಪ ಹೊತ್ತಾದರೂ ಆ ಪರಮಾತ್ಮನ ಚಿಂತನೆಯಲ್ಲಿ ಮನಸ್ಸನ್ನು ಮುಳುಗಿಸಿ ಅದರ ಸಂಬಂಧವನ್ನು ಬೆಳೆಸಿಕೊಳ್ಳುವದು ಅಗತ್ಯವಾಗಿರುವದು. ಇದಕ್ಕೆ ಗಾನವೂ ಬಹು ಉತ್ತಮವಾದ ಸಾಧನ. ಪ್ರೇಮ ಮತ್ತು ಇತರ ಸುಗುಣಗಳಂತೆ ಗಾನವು ಎಲ್ಲರಲ್ಲಿಯೂ ಬೀಜರೂಪದಲ್ಲಿದ್ದೇ ಇರುವದು.

"ಶಿಶುರ್ವೇತ್ತಿ ಪಶುರ್ವೇತ್ತಿ ವೇತ್ತಿ ಗಾನರಸಂ ಫಣಿಃ" ಎಂದು ಒಬ್ಬ ಕವಿಯು ಹೇಳಿರುವನು. ಹಾಡು ಕೇಳಿದರೆ ಅಳುವ ಮಕ್ಕಳು ಕೂಡ ಸುಮ್ಮನಾಗುವವು; ದನಕರುಗಳು ಹುಲ್ಲುಕಡ್ಡಿಯನ್ನು ಕಡಿದರೆ **'ಕಟಕ್'** ಎಂದು ಶಬ್ದವಾಗಿ ಗಾನದ ಒಂದು ಅಲೆ ತಮ್ಮ ಭಾಗಕ್ಕೆಲ್ಲಿ ಕಡಿಮೆಯಾದೀತೋ ಎಂದು ಬಾಯಲ್ಲಿ ಹುಲ್ಲನ್ನು ಸುಮ್ಮನೆ ಕಚ್ಚಿಕೊಂಡೇ ಕಿವಿಗಳನ್ನು ನೆಟ್ಟಗೆ ಮಾಡಿಕೊಂಡು ಗಾನವನ್ನು ಕೇಳುವವು. **'ಹಾವೆಂದರೆ ಹರನಡುಗಿದ'** ಎಂಬಷ್ಟು ಅತ್ಯುಗ್ರವಾದ ಘಟಸರ್ಪವೂ ಕೂಡ ಹಾಡಿನ ಸದ್ದು ಕೇಳಿದಾಗ ತನ್ನ ಕ್ರೂರ ಸ್ವಭಾವವನ್ನೆಲ್ಲಾ ಮರೆತು ಶಾಂತವಾಗಿ ಹೆಡೆಯನ್ನು ಬಿಟ್ಟುಕೊಂಡು ಆಡುತ್ತಾ ಆನಂದವನ್ನು ಅನುಭವಿಸುವದು. ಇನ್ನು ಗಾನವು ಮನುಷ್ಯರಿಗೆ ಆನಂದವನ್ನು ಉಂಟುಮಾಡುವದು ಎಂಬುದರಲ್ಲಿ ಸಂಶಯವೇನು? ಆದುದರಿಂದ ಗಾನರೂಪದಲ್ಲಿ ಭಕ್ತಿಜ್ಞಾನ ವೈರಾಗ್ಯ ಪ್ರಧಾನವಾದ ಪರಮಾತ್ಮನ ಗುಣಗಳೂ, ಲೀಲೆಗಳೂ, ಸರ್ವದೇವತಾಸ್ವರೂಪವೂ ವಾಚಕರಲ್ಲಿ ಬಿಂಬಿಸಿ ಮನಸ್ಸು ತನ್ಮಯವಾಗಿ, ಹೃದಯದಲ್ಲಿ ಬತ್ತಿಕೊಂಡು ಎಲ್ಲಿಯೋ ತಳಕ್ಕೆ ಹತ್ತಿಕೊಂಡುಹೋಗಿರುವ ಆನಂದರಸವು ಉಕ್ಕಿ ಹೊರಸೂಸಲೆಂದು ನನಗೆ ತಿಳಿದಮಟ್ಟಿಗೆ ಈ ಗ್ರಂಥವನ್ನು ರಚಿಸಿರುವೆನು.

ನನ್ನ ಮಿತ್ರರಾದ ಸಂಗೀತಗಾರರಿಂದ ಈ ಹಾಡುಗಳಿಗೆಲ್ಲಾ ಸ್ವರಗಳನ್ನು ಹಾಕಿಸಬಹುದಾಗಿತ್ತಾದರೂ, ಅದು ಪಂಡಿತರಂಜನೆ ಮಾತ್ರ ಆಗುವದೆಂದು ಯೋಚಿಸಿ, ಆದಷ್ಟು ಸುಲಭವಾಗಿ ಧಾಟಿ ಗೊತ್ತಾಗುವಂತೆ ಹಾಡುಗಳ ಮೇಲೆ ಆ ಧಾಟಿಯಲ್ಲಿ ಪ್ರಸಿದ್ಧವಾದ ಹಾಡಿನ ಪಲ್ಲವಿಯ ಭಾಗವನ್ನು ಸೂಚಿಸಿರುವೆನಲ್ಲದೆ ಒಡಿಸಿ ಹೇಳಬೇಕಾದ ಮಾತುಗಳನ್ನು ದಪ್ಪವಾದ ಅಕ್ಷರಗಳಿಂದಲೂ, ಹೆಚ್ಚು ಹೊತ್ತು ರಾಗವನ್ನೆಳೆಯುವ ಕಡೆಗಳನ್ನು ಒಂದೊಂದು ಅಡ್ಡಗೀಟುಗಳಿಂದಲೂ ತೋರಿಸಿರುವೆನು. ಸ್ತ್ರೀಯರು ಹಾಡಿಕೊಳ್ಳುವಾಗ ಮಾಡಿಕೊಳ್ಳಬೇಕಾದ ಅರ್ಥಾನುಸಂಧಾನಕ್ಕೆ ಒಪ್ಪುವಂತೆ ಕೆಲವು ಕಡೆಗಳಲ್ಲಿ ಬೇರೆ ಮಾತುಗಳನ್ನು ಜೋಡಿಸಿ ಟಿಪ್ಪಣಿಯಲ್ಲಿ ಕೊಟ್ಟಿರುವೆನು. ಉಳಿದ ಕಡೆಗಳಲ್ಲೆಲ್ಲಾ ಸ್ತ್ರೀಯರಾಗಲಿ ಪುರುಷರಾಗಲಿ ಯಾರು ಹೇಳಿಕೊಂಡರೂ ಒಪ್ಪುವಂತೆ ಇರುವವು. ಅಭಿಜ್ಞರು ಇದರ ಲೋಪದೋಷಗಳನ್ನು ದಯವಿಟ್ಟು ಸೂಚಿಸಿದರೆ ಕೃತಜ್ಞತೆಯಿಂದ ತಿದ್ದಿಕೊಳ್ಳುವೆನು.

ಕನ್ನಡಭಾಷೆಯನ್ನು ಬೆಳಸಿ ಕನ್ನಡನಾಡಿನ ಸೇವೆಯನ್ನು ಮಾಡಬೇಕೆಂಬ ಉದಾರಬುದ್ಧಿಯಿಂದ ಇದನ್ನು ತಮ್ಮದಾಗಿ ಮಾಡಿಕೊಂಡು ಇದಕ್ಕೆ ಸುಂದರವಾದ ಚಿತ್ರಗಳನ್ನು ಜೋಡಿಸಿ ಅಂದವಾದ ಅಕ್ಷರಗಳಿಂದ ಮುದ್ದಾಗಿ ಮುದ್ರಿಸಿ, ಪ್ರಕಾಶಮಾಡಿದ ಬೆಂಗಳೂರು ಬಿ.ಬಿ.ಡಿ. ಪವರ್ ಪ್ರೆಸ್ ಪ್ರೊಪ್ರೈಟರ್ ಮ॥ ವಾಜಪೇಯಂ ವೆಂಕಟಸುಬ್ಬಯ್ಯನವರ ಉಪಕಾರವು ಚಿರಸ್ಮರಣೀಯವಾಗಿದೆ.

ಸಿದ್ಧಾರ್ಥಿ ಸಂ॥ ವೈಶಾಖ
ಬೆಂಗಳೂರು
ಮೇ, ೧೯೧೯

ಚಿದಂಬರಯ್ಯ

ಮುನ್ನುಡಿ

ಕನ್ನಡ ಭಾಷೆ ಮತ್ತು ಸಾಹಿತ್ಯದ ಸಂರಕ್ಷಣೆ-ಸಂವರ್ಧನೆಗಳಿಗೋಸ್ಕರ ತಮ್ಮ ಜೀವಮಾನವನ್ನೇ ಮುಡುಪಾಗಿಟ್ಟು, ಸತತವಾಗಿ ಆ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿ ಪ್ರಖ್ಯಾತನಾಮರಾದ ಹೊಸಕೆರೆ ಚಿದಂಬರಯ್ಯನವರು ತಮ್ಮ ಉಪಾಸ್ಯ ವಿಷಯದ ಬಗ್ಗೆ ಭಕ್ತಿ-ಶ್ರದ್ಧೆಯಿಂದ ಕೂಡಿ ಬರೆದಿರುವ ಸುಂದರವಾದ ಕೃತಿ ಇದು. ಇದರ ವಿಷಯ, ಪವಿತ್ರವಾದ ದೇವತಾಸ್ತುತಿಗಳು. ಲೇಖಕರು ನಮ್ಮ ಅಣ್ಣನವರಿಗೆ ಬೀಗರಾದ ವಿದ್ವಾನ್ ಎಚ್. ಅನಂತಮೂರ್ತಿಗಳ ಪೂಜ್ಯ ತಂದೆಯವರು. ಗ್ರಂಥವು ಯಾರಿಗೆ ಅರ್ಪಿತವಾಗಿದೆಯೋ ಅವರು ನನ್ನ ಪ್ರೀತಿ, ವಿಶ್ವಾಸಗಳಿಗೆ ಪಾತ್ರರಾಗಿರುವ ಚಿರಂಜೀವಿಗಳು. ಈ ಕಾರಣದಿಂದ ಈ ಸದ್ಗ್ರಂಥಕ್ಕೆ ನಲ್ನುಡಿಯನ್ನು ಬರೆಯುವುದು ನನಗೆ ಅತ್ಯಂತ ಸಂತೋಷದ ವಿಷಯವಾಗಿದೆ.

ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಭಕ್ತಿ ಸಾಹಿತ್ಯ, ಶೃಂಗಾರ ಸಾಹಿತ್ಯ – ಇವೆರಡು ಪ್ರಕಾರಗಳಿಗಿರುವ ಜನವಶೀಕರಣಶಕ್ತಿ ಇನ್ಯಾವ ಸಾಹಿತ್ಯ ಪ್ರಕಾರಕ್ಕೂ ಇಲ್ಲವೆಂದು ಹೇಳಬಹುದು. ಸ್ವಯಂ ಉದ್ದಾಮ ಕವಿಯೂ, ಶ್ರೇಷ್ಠರಾಜನೂ ಆಗಿದ್ದ ಭೋಜರಾಜನು –

ಲಾವಣ್ಯಮೇವ ವಪುಷಿ ಸ್ವದತೇಽಂಗನಾನಾಂ ।
ಶೃಂಗಾರ ಏವ ಹೃದಿ ಮಾನವತೋ ಜನಸ್ಯ ॥

ಎಂದು ರಸಗಳಲ್ಲಿ ಶೃಂಗಾರವನ್ನು ಸಿಂಹಾಸನದಲ್ಲಿ ಕುಳ್ಳಿರಿಸಿರುವುದು ಒಂದು ವರ್ಗದ ಕಾವ್ಯಾಸ್ವಾದನರಸಿಕರ ರಂಜನೆಗೆ ಮಾತ್ರ. ಶೃಂಗಾರದ ವಶೀಕರಣಶಕ್ತಿ ಸಾರ್ವತ್ರಿಕವಲ್ಲ. ಬಾಲಕರಿಗೆ, ವೃದ್ಧರಿಗೆ, ರೋಗಿಗಳಿಗೆ, ವಿರಕ್ತರಿಗೆ ಅದೆಂದಿಗೂ ರುಚಿಸದು. ಭಕ್ತಿಯು ರಸವಾಗುವುದೆಂದು ಶ್ರೀ ಮಧುಸೂದನ ಸರಸ್ವತಿಗಳು ತಮ್ಮ 'ಭಕ್ತಿರಸಾಯನ' ಗ್ರಂಥದಲ್ಲಿ ಸ್ಥಾಪಿಸಿದ್ದಾರೆ. ಭಕ್ತಿಯ ಪರಿಧಿ ಮಿತವಲ್ಲ. ಅದು ಸರ್ವರನ್ನೂ ಒಲಿಸಬಲ್ಲುದು. ಈ ಭಕ್ತಿ ಸಾಹಿತ್ಯವು ಗೇಯರೂಪದಲ್ಲಿದ್ದು, ಅದಕ್ಕೆ ಮಧುರವಾದ ಶಾಸ್ತ್ರೀಯ ಸಂಗೀತದ ಕವಚವನ್ನು ತೊಡಿಸಿದರೆ, ಅದರ ವಶೀಕರಣ ಶಕ್ತಿ ಇಮ್ಮಡಿಯಾಗುತ್ತದೆ. ಇದಕ್ಕೆ ಸಾಹಿತ್ಯ ರಚನಾಶಕ್ತಿಯ ಜೊತೆಗೆ ವಿಪುಲವಾದ ಸಂಗೀತಶಾಸ್ತ್ರವೂ ಇರಬೇಕು. ಆಗ ಅದು ಸಹೃದಯ ಹೃದಯವನ್ನು ಕರಗಿಸಿ, ಏಕಧಾರೆಯನ್ನಾಗಿಸಬಲ್ಲುದು.

ಪ್ರಸ್ತುತ ಗ್ರಂಥ, ವಿಶ್ವಚೈತನ್ಯದ ಮೂರ್ತರೂಪಗಳಾದ ಅನೇಕ ದೇವತೆಗಳ

೧೫೨ ಸ್ತುತಿಗಳನ್ನೊಳಗೊಂಡಿದೆ. ಪ್ರಾಚೀನವೆನಿಸಿದ ಉಪಾಸನಾಮಾರ್ಗವು ನಮ್ಮ ಕಾಲದ ವೈಜ್ಞಾನಿಕ ಮನೋಧರ್ಮ, ತಾಂತ್ರಿಕ ಪರಿಕರಗಳು, ಯುಗಧರ್ಮದ ಒತ್ತಡ – ಇವೆಲ್ಲವನ್ನೂ ಗಮನಿಸಿ ಜನಸಾಮಾನ್ಯರಿಗೆ ರುಚಿಸಬೇಕೆಂದರೆ ಮತ್ತು ಅಧ್ಯಾತ್ಮಿಕವಾದ ಆಸಕ್ತಿ–ಪ್ರಸಕ್ತಿಗಳಿದ್ದವರಿಗೆ ನೆರವಾಗಬೇಕೆಂದರೆ, ಇಂಥ ದೇವತೆಗಳ ಮಾನಸ ಆರಾಧನೆ ಸುಲಭವಾದ ಒಂದು ದಾರಿ. ಶಾಂತಿ–ಸುಖಗಳು ಬದುಕಿನಲ್ಲಿ ಬೇರೂರಬೇಕೆಂದರೆ, ಹೃದಯವು ಇಂಥ ಸಾಕಾರಮೂರ್ತಿಗಳನ್ನು ಕಲ್ಪಿಸಿಕೊಂಡು, ಅವುಗಳ ಆಲಂಬನೆಯನ್ನು ಪಡೆದುಕೊಳ್ಳುವುದು ಅಗತ್ಯವೆನಿಸುತ್ತದೆ. ಪ್ರಸ್ತುತ ಗ್ರಂಥದಲ್ಲಿ ಗಣಪತಿಯೇ ಮೊದಲಾದ ಹಲವು ದೇವತೆಗಳ ಎಣಿಕೆಯಿದ್ದರೂ, ಕವಿಯ ದೃಷ್ಟಿಯಲ್ಲಿ ಇವೆಲ್ಲವೂ ನಿರ್ಗುಣ ಬ್ರಹ್ಮತತ್ವದ ಕಾರಣಿಕ ಅಭಿವ್ಯಕ್ತಿಗಳಷ್ಟೇ. ಸಾಮಾನ್ಯ ಜನರು ಈ ಉಪಾಸನಾಮಾರ್ಗವನ್ನು ಅವಲಂಬಿಸಿ ಅಧ್ಯಾತ್ಮ ಮಾರ್ಗದಲ್ಲಿ ಮುಂದುವರಿಯುವುದು ಸುಲಭವಾಗುತ್ತದೆ. ಉದ್ದಕ್ಕೂ ಅದ್ವೈತ ಸಿದ್ಧಾಂತವನ್ನೇ ಊರುಗೋಲಾಗಿ ಹಿಡಿದು ಭಕ್ತಿಮಾರ್ಗದ ಸಹಕಾರವನ್ನು ಪಡೆದುಕೊಂಡು ಗ್ರಂಥಕರ್ತರು ಕೃತಕೃತ್ಯರಾಗಿದ್ದಾರೆ. ಸಾಧಕರ ಅಂತರಂಗಕ್ಕೆ ಇದು ಸ್ವಾಭಾವಿಕವಾಗಿಯೇ ಪ್ರಿಯವೆನಿಸುತ್ತದೆ. ಈ ಮಾರ್ಗಕ್ಕೆ ಅವರ ಬದುಕಿನಲ್ಲಿ ಬೆಳಕನ್ನೂ, ಒಲವನ್ನೂ, ಬಲವನ್ನೂ ಮೂಡಿಸುವ ಶಕ್ತಿ ಇದೆ.

ಪೂಜ್ಯ ಲೇಖಕರ ವಿಜ್ಞಾಪನೆಯಲ್ಲಿ ಭಕ್ತಿಸಿದ್ಧಾಂತದ ಮೇಲೆ ಅವರು ಬೀರಿರುವ ಬೆಳಕನ್ನು ಕುರಿತು ಉಲ್ಲೇಖಿಸಲೇಬೇಕು. ಅವರ ಮಾತು ಇದು:

> "ಭಗವಂತನು ಪ್ರೇಮಸ್ವರೂಪನೇ ಆಗಿಯೂ, ಸಕಲ ಕಲ್ಯಾಣಗುಣಗಳ ಮೂರ್ತಿಯೇ ಆಗಿಯೂ ಇರುವನು. ಆದ್ದರಿಂದ ಪ್ರತಿಯೊಬ್ಬನೂ ಪ್ರತಿದಿನವೂ ಸ್ವಲ್ಪ ಹೊತ್ತಾದರೂ ಆ ಪರಮಾತ್ಮನ ಚಿಂತನೆಯಲ್ಲಿ ಮನಸ್ಸನ್ನು ಮುಳುಗಿಸಿ, ಅದರ ಸಂಬಂಧವನ್ನು ಬೆಳೆಸಿಕೊಳ್ಳುವುದು ಅಗತ್ಯವಾಗಿರುವುದು".

ಈ ರೀತಿ ದೇವತಾಸ್ತುತಿಗಳ ಮಹತ್ವವನ್ನು ಬಹಳ ಸಮೀಚೀನವಾದ ವಾದಗಳ ಮೂಲಕ ತರ್ಕಬದ್ಧವಾಗಿ ಮನವರಿಕೆ ಮಾಡಿಕೊಟ್ಟಿದ್ದಾರೆ. ದೇವತೆಗಳ ಬಗ್ಗೆ ಉಕ್ಕಿ ಹರಿಯುತ್ತಿರುವ ಭಕ್ತಿಯೂ ಅದಕ್ಕೆ ತಕ್ಕಂತೆ ಅವರು ನಡೆಸಿಕೊಂಡ ಪುಣ್ಯಜೀವನವೂ ಹೃದಯಸ್ಪರ್ಶಿಯೂ ಅನುಕರಣೀಯವೂ ಆಗಿದ್ದಿತು. (ನೋಡಿ. ಸಂಪಾದಕರ ನುಡಿ–ಪುಟ iv)

ದೇವತಾಸ್ತುತಿ ಹೊರಹೊಮ್ಮಿ ಹರಿಯುವುದು ವ್ಯಕ್ತಿಯ ಪಾಂಡಿತ್ಯದಿಂದಲ್ಲ;

ಹೃದಯ ತುಂಬಿದ ನಿರ್ಮಲ ಭಕ್ತಿಭಾವದಿಂದ. ಈ ಭಕ್ತಿಗೀತೆಗಳು ಗೇಯ ಪ್ರಕಾರವೂ ಆಗಿದ್ದು, ವಿವಿಧ ರೀತಿಯಿಂದ ಉಪಕಾರವಾಗುತ್ತವೆ. ಏಕೆಂದರೆ ಸಂಗೀತವು ಸಾಹಿತ್ಯಶೈಲಿಗೆ ಅವರ್ಣನೀಯವಾದ ಒಂದು ಸೊಬಗನ್ನು ಒದಗಿಸುತ್ತದೆ.

'ಸಂಪಾದಕರ ನುಡಿ'ಯಲ್ಲಿ ಪ್ರೊ॥ ಜಿ. ಅಶ್ವತ್ಥನಾರಾಯಣ ಅವರು ಪೂಜ್ಯ ಚಿದಂಬರಯ್ಯನವರ ಬಗ್ಗೆ ಸವಿಸ್ತಾರವಾದ ಲೇಖನವನ್ನು ಬರೆದಿದ್ದಾರೆ. ಅವರ ವಿಶುದ್ಧ ಹಾಗೂ ಪುಣ್ಯಜೀವನ, ಅವರ ಸಾರಸ್ವತ ಸಾಧನೆ, ಅವರ ಕೃತಿಗಳ ಸಂಕ್ಷಿಪ್ತ ಪರಿಚಯ, ಅವರ ತಾತ್ತ್ವಿಕ ನೋಟ, ಇತ್ಯಾದಿ ಇತ್ಯಾದಿ. ಹೀಗಾಗಿ ಸಂಪಾದಕರ ನುಡಿ ಒಂದು ಮೌಲಿಕ ಲೇಖನವಾಗಿದೆ. ಕನ್ನಡ ಸಾಹಿತ್ಯ ಚರಿತ್ರೆಗೆ ಅಮೂಲ್ಯ ಆಕರವಾಗಿದೆ. ಇಂತಹ ಜ್ಞಾನನಿಧಿಗಳು ಈ ಕೃತಿಗೆ ಸಂಪಾದಕರಾಗಿ ದೊರೆತದ್ದು ಪ್ರಕಾಶಕರ ಹಾಗೂ ವಾಚಕರ ಪುಣ್ಯ. ಆದ್ದರಿಂದ ಒಳಗಿರುವ ಸ್ತೋತ್ರಗಳನ್ನು ಓದುವ ಮೊದಲಿಗೆ ಓದುಗರು ಸಂಪಾದಕರ ನುಡಿಯನ್ನು ಓದುವುದು ಒಳ್ಳೆಯದು. ಅವರ ವಿದ್ವನ್ನಿಷ್ಠೆಗೂ, ಉನ್ನತ ಸಂಸ್ಕಾರಕ್ಕೂ ಇದೊಂದು ಅವಿಸ್ಮರಣೀಯ ನಿದರ್ಶನ.

ಈ ಗ್ರಂಥದ ಮೊದಲ ಮುದ್ರಣದ ಪ್ರತಿಗಳು ಸಿಕ್ಕದೆ ಸಹೃದಯ ವಾಚಕರು ಪೇಚಾಡುತ್ತಿದ್ದಾಗ, 'ಹೊಸಕೆರೆ ಚಿದಂಬರಯ್ಯ ಸಂಸ್ಮರಣ ಟ್ರಸ್ಟ್' ಸ್ಥಾಪಿಸಿ ತನ್ಮೂಲಕ ಅದರ ಪುನರ್ಮುದ್ರಣಕ್ಕೆ ವ್ಯವಸ್ಥೆ ಮಾಡಿರುವ ಎಲ್ಲರಿಗೂ ಸಹೃದಯವಾಚಕ ವೃಂದ ಕೃತಜ್ಞತಾಭರಿತ ಹೃದಯದಿಂದ ಕೂಡಿದೆ. ಅದರಲ್ಲಿಯೂ ಹೊಸಕೆರೆ ಚಿದಂಬರಯ್ಯನವರ ಮೊಮ್ಮಗನ ಮಗಳಾದ ಡಾ. ಜಯಂತಿ ಹಾಗೂ ಅವರ ಪತಿ ಡಾ॥ ಟಿ.ಎಲ್. ಸತೀಶ್ ಅವರ ಔದಾರ್ಯ ಮತ್ತು ಉತ್ಸಾಹ ಅನುಕರಣೀಯ. ಅವರೆಲ್ಲರಿಗೂ ವಾಚಕರ ಪರವಾಗಿ ಅಭಿನಂದನೆಗಳು.

ಮುದ್ರಣ ಸುಂದರವೂ, ನಿರ್ದುಷ್ಟವಾಗಿಯೂ ಮೂಡಿಬಂದಿದೆ. ಇದಕ್ಕಾಗಿ ಎಕ್ಸ್‌ಪ್ರೆಸ್ ಪ್ರಿಂಟ್‌ಝೋನ್ ಅವರಿಗೆ ಅಭಿನಂದನೆಗಳು.

ಈ ಗ್ರಂಥಕ್ಕೆ ಯಶಸ್ಸು ದೊರೆಯಲಿ ಎಂದು ಪರಮಾತ್ಮನಲ್ಲಿ ಪ್ರಾರ್ಥಿಸುತ್ತೇನೆ.

ವಿದ್ಯಾಸಾಗರ
ಪ್ರೊ॥ ಟಿ.ಎಸ್. ಕೃಷ್ಣಮೂರ್ತಿ

ಬೆಂಗಳೂರು
ನಂದನ ಸಂವತ್ಸರದ
ಚೈತ್ರ-ಶುಕ್ಲ-ಪ್ರತಿಪತ್
೨೩-೩-೨೦೧೨

ಸಂಪಾದಕರ ನುಡಿ

ಹೊಸಕೆರೆ ಚಿದಂಬರಯ್ಯನವರು ನವೋದಯ ಕನ್ನಡ ಸಾಹಿತ್ಯದಲ್ಲಿ ಕಂಡುಬರುವ ಅದ್ವೈತ ವಿದ್ವಾಂಸರು ಮತ್ತು ಕಾವ್ಯ, ನಾಟಕ, ಪ್ರಬಂಧ, ಜೀವನಚರಿತ್ರೆ, ಕೀರ್ತನೆ, ಹರಿಕಥೆ ಮೊದಲಾದ ನಾನಾ ಸಾಹಿತ್ಯ ಪ್ರಕಾರಗಳಲ್ಲಿ ಶ್ರೇಷ್ಠ ಕೃತಿಗಳನ್ನು ರಚಿಸಿರುವ ಬಹುಮುಖಿ ಸಾಹಿತಿಗಳು. ನೂರಕ್ಕೂ ಹೆಚ್ಚಿನ ಕೃತಿಗಳನ್ನು ೨೦ನೇ ಶತಮಾನದ ಪ್ರಾರಂಭದಲ್ಲಿ ರಚಿಸಿದ್ದಾರೆ. 'ಕರ್ಣಾಟಕ ಕವಿರತ್ನ'ರೆಂದು ಬಿರುದಾಂಕಿತರಾಗಿದ್ದಾರೆ.

ಆಧುನಿಕ ಕನ್ನಡ ಗದ್ಯಸಾಹಿತ್ಯ ನಿರ್ಮಾಪಕರಲ್ಲಿ ಒಬ್ಬರಾದ ಹೊಸಕೆರೆ ಚಿದಂಬರಯ್ಯನವರು, ಕನ್ನಡ ಕೀರ್ತನಸಾಹಿತ್ಯಕ್ಕೆ ನೀಡಿರುವ ಕೊಡುಗೆ ಅಪೂರ್ವವಾದುದು. ಕೀರ್ತನಕಂಠಾಭರಣ ಮತ್ತು ಭಕ್ತಿ ಗೀತಾವಳಿ–(ಕೀರ್ತನೆಗಳ ಸಂಗ್ರಹ), ಮನಸ್ಸಿಗುಪದೇಶ (ಸಾಂಗತ್ಯ) ಅವರ ಅದ್ವಿತೀಯ ಗ್ರಂಥಗಳಾಗಿವೆ. ಕೀರ್ತನ ಸಾಹಿತ್ಯಕ್ಕೆ ಚಿದಂಬರಯ್ಯ ನೀಡಿರುವ ನೂತನ ಕೊಡುಗೆಯಾಗಿದೆ.

"ಕರ್ನಾಟಕದಲ್ಲಿ ನಾನು ಕಂಡ ಪವಿತ್ರ ಜೀವಿಗಳಲ್ಲಿ ಇವರೊಬ್ಬರು" ಎಂದು ಪಂಡಿತ ತಾರಾನಾಥರಿಂದ ಪ್ರಶಂಸಿಸಲ್ಪಟ್ಟ ಹೊಸಕೆರೆ ಚಿದಂಬರಯ್ಯನವರು ೨೮ನೇ ಡಿಸೆಂಬರ್ ೧೮೭೦ರಲ್ಲಿ ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಹೊಸಕೆರೆಯ ಶ್ರೀ ಶೇಷಗಿರಿಯಪ್ಪ, ಶ್ರೀಮತಿ ಪುಟ್ಟನರಸಮ್ಮ ದಂಪತಿಗಳಿಗೆ ಹಿರಿಯೂರಿನಲ್ಲಿ ಹಿರಿಯ ಮಗನಾಗಿ ಜನಿಸಿದರು. ಬಾಲ್ಯದ ವಿದ್ಯಾಭ್ಯಾಸ ತುಮಕೂರು, ಬೆಂಗಳೂರಿನಲ್ಲಿ ಆಯಿತು. ಮೈಸೂರು ಅಪ್ಪರ್ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಇವರು ಕಡೂರು, ದಾವಣಗೆರೆಗಳಲ್ಲಿ ಸರ್ಕಾರಿ ಶಾಲೆಯ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. ನಿವೃತ್ತರಾದ ಮೇಲೆ ಧಾರವಾಡದ ದೇಶೀಯ ವಿದ್ಯಾಶಾಲೆಯಲ್ಲೂ ಸೇವೆ ಸಲ್ಲಿಸಿದ್ದಾರೆ.

ಅಧ್ಯಾಪಕರಾಗಿದ್ದಾಗ ಪ್ರಸಿದ್ಧ ವಿದ್ವಾಂಸರಾಗಿದ್ದ ಮತ್ತು ವೈರಾಗ್ಯಶಾಲಿಗಳಾಗಿದ್ದು, ಪೀಠಾಧಿಪತಿಗಳಾದ ಕುರ್ತುಕೋಟಿ ಭಾಗವತರ ಪ್ರಭಾವಕ್ಕೆ ಒಳಗಾಗಿ ಅವರ ಸೇವೆ ಮಾಡಿದರು. ಗೋಂದಾವಳಿ ಮಹಾರಾಜರಿಂದ ಸ್ಫೂರ್ತಿ ಪಡೆದರು. ೫ ವರ್ಷಗಳ ಕಾಲ ಕುರ್ತುಕೋಟಿಯವರ ಶಿಷ್ಯರಾಗಿದ್ದು ಅನಂತರ ಬೆಂಗಳೂರಿಗೆ ಬಂದು ನೆಲೆಸಿದರು. ಗ್ರಂಥರಚನೆ, ಪ್ರವಚನ, ಅಧ್ಯಯನ, ಸತ್ಪುರುಷರ ಸಂದರ್ಶನ ಮೊದಲಾದವುಗಳಲ್ಲಿ ನಿರತರಾಗಿದ್ದ ಅವರು ಸುಮಾರು ಅರ್ಧ ಶತಮಾನದ ಕಾಲ ಕನ್ನಡಸಾಹಿತ್ಯ ಸೇವೆ ಮಾಡಿದ್ದಾರೆ. ತಮ್ಮ ಬದುಕಿನ ಅಂತ್ಯಕಾಲದಲ್ಲಿ

ಪ್ರಶಾಂತ ಜೀವನ ಬಯಸಿ ತಿರುಮಕೂಡಲು ನರಸೀಪುರದ ಕಪಿಲಾ ನದೀತೀರದಲ್ಲಿ ಭಕ್ತೆಯೊಬ್ಬರ ನಿವಾಸದಲ್ಲಿ ವೈರಾಗ್ಯಜೀವಿಯಾಗಿ, ಸತ್ಕಾಲಕ್ಷೇಪ, ಧಾರ್ಮಿಕ ಚಿಂತನ, ಪ್ರವಚನಗಳಲ್ಲಿ ನಿರತರಾಗಿದ್ದು, ೧೯ನೇ ಏಪ್ರಿಲ್ ೧೯೩೮ರಲ್ಲಿ ಬ್ರಹ್ಮೀಭೂತರಾದರು.

ಹೊಸಕೆರೆ ಚಿದಂಬರಯ್ಯನವರು ವೈವಿಧ್ಯಮಯ ಕೊಡುಗೆಗಳನ್ನು ಕನ್ನಡಕ್ಕೆ ಕೊಟ್ಟಿದ್ದಾರೆ. ಆಲೂರು ವೆಂಕಟರಾಯರು, ದೇವುಡು ನರಸಿಂಹಶಾಸ್ತ್ರಿಗಳು ಮೊದಲಾದ ಗೀತಾ ಸಾಹಿತಿಗಳಂತೆ ಗೀತಾ ಗ್ರಂಥರಚನೆ, ಗೀತಾಪ್ರಚಾರ, ಗೀತೋಪನ್ಯಾಸಗಳ ಮೂಲಕ ಅನುಪಮ ಸೇವೆ ಸಲ್ಲಿಸಿದ್ದಾರೆ. ಅವರ ಭಗವದ್ಗೀತಾ ಸಾರವಿಚಾರ, ಗೀತಾರ್ಥಚಂದ್ರಿಕೆ, ಗೀತೆಯ ಕೈಗನ್ನಡಿ ಪ್ರಸಿದ್ಧ ಗ್ರಂಥಗಳಾಗಿವೆ. ಕೃಷ್ಣಮಹೇಶ್ವರಿ ನಾಟಕ ಮೈಸೂರು ರಾಜರ ಇತಿಹಾಸದ ಬಗ್ಗೆ ಸಂಸರಿಗಿಂತ ಮುಂಚೆಯೇ ರಚಿಸಿದ ಕನ್ನಡದ ಮೊದಲನೇ ಮೈಸೂರು ಇತಿಹಾಸದ ನಾಟಕವಾಗಿದೆ. ಭರತಖಂಡದ ಜೀವಜ್ಯೋತಿಗಳು ಎಂಬ ಜೀವನಚರಿತ್ರೆಗಳ ಗ್ರಂಥ ಹಲವಾರು ಮುದ್ರಣಗಳನ್ನು ಕಂಡಿದೆ. ಹಲವಾರು ಬಾರಿ ಪಠ್ಯವಾಗಿದೆ. ಟೀಕೆಗಳನ್ನು ಸ್ತೋತ್ರಗಳನ್ನು ರಚಿಸಿರುವ ಹೊಸಕೆರೆ ಚಿದಂಬರಯ್ಯನವರು ಕನ್ನಡ ಕೀರ್ತನ ಸಾಹಿತ್ಯಕ್ಕೆ ನೀಡಿದ ಕೊಡುಗೆ ವಿಶಿಷ್ಟವಾಗಿದೆ.

ಕನ್ನಡ ಸಾಹಿತ್ಯದಲ್ಲಿ ಕೀರ್ತನ ಸಾಹಿತ್ಯ, ಶರಣರಿಂದ ಮೊದಲಿಗೆ ರಚಿತವಾದರೂ ಅನಂತರ ಹರಿದಾಸರ ಕಾಲಕ್ಕೆ ಕನ್ನಡ ಸಾಹಿತ್ಯದ ವಿಶೇಷ ಪ್ರಕಾರವಾಯಿತು. ಎಷ್ಟರಮಟ್ಟಿಗೆ ಎಂದರೆ ಕೀರ್ತನಸಾಹಿತ್ಯ ಎಂದರೆ ಹರಿದಾಸರು ರಚಿಸಿದ್ದು, ಮಾಧ್ವ ಸಿದ್ಧಾಂತಕ್ಕೆ ಸಂಬಂಧಿಸಿದ್ದು ಎಂದಾಗಿಬಿಟ್ಟಿತ್ತು. ಆದರೆ ೧೭-೧೮ ಶತಮಾನಗಳಲ್ಲಿ ಮತ್ತು ಅಲ್ಲಿಂದೀಚೆಗೆ, ಅದ್ವೈತ ಹರಿದಾಸರು, ವಿಶಿಷ್ಟಾದ್ವೈತ ಹರಿದಾಸರು ರಚಿಸಿದ ಕೀರ್ತನೆಗಳೂ ದಾಸಸಾಹಿತ್ಯ ಎಂದು ಪರಿಗಣಿತವಾಗಿದೆ. ಅದ್ವೈತ ಕೀರ್ತನ ಸಾಹಿತ್ಯದ ಇತಿಹಾಸವನ್ನು ಎಂ.ವಿ. ಸೀತಾರಾಮಯ್ಯನವರೂ, ವಿಶಿಷ್ಟಾದ್ವೈತ ಕೀರ್ತನ ಸಾಹಿತ್ಯದ ಇತಿಹಾಸವನ್ನು ಕುರಿತು ಡಾ. ನಾ. ಗೀತಾಚಾರ್ಯರು ಬರೆದಿದ್ದಾರೆ. ಆದರೆ ಅದ್ವೈತ ಹರಿದಾಸ ಸಾಹಿತ್ಯಕ್ಕೆ ಹೊಸಕೆರೆ ಚಿದಂಬರಯ್ಯ ಅವರು ನೀಡಿದ ಕೊಡುಗೆಗಳನ್ನು ವಿಶೇಷವಾಗಿ ಯಾರೂ ಗುರುತಿಸಿಲ್ಲ.

ಅದ್ವೈತ ಕೀರ್ತನಕಾರರು ಕನ್ನಡದಲ್ಲಿ ಅನೇಕರು ಆಗಿಹೋಗಿದ್ದಾರೆ. ಹೊಸಕೆರೆ ಚಿದಂಬರಯ್ಯನವರ ಜೀವಿತಾವಧಿಯಲ್ಲಿ ಅದ್ವೈತ ಕೀರ್ತನಕಾರರು ಹಲವರಿದ್ದರು. ಕೆಲ್ಲಂಗೆರೆ ತಿಮ್ಮಪ್ಪದಾಸರು ಅನೇಕ ಹರಿಕಥೆಗಳನ್ನು ಮಾಡಿದ್ದಾರೆ. ಸುರಗಿರೀಶ, ಸುರಶೈಲವಾಸ, ಸಹ್ಯಾದ್ರಿವಿಹಾರ ಅಂಕಿತಗಳಲ್ಲಿ ಕೀರ್ತನೆಗಳನ್ನು

ರಚಿಸಿದ್ದಾರೆ. ಚಿಕ್ಕನಾಯ್ಕನಹಳ್ಳಿಯ ತಿಮ್ಮಪ್ಪದಾಸರು ಇನ್ನೋರ್ವ ಅದ್ವೈತ ಹರಿದಾಸರು. ಎಚ್.ವಿ.ಸೀ.ಯವರು 'ಅರ್ಚನ ಕೀರ್ತನ ಗ್ರಂಥ'ದಲ್ಲಿ ಇವರ ಕೀರ್ತನಗಳನ್ನು ಸಂಗ್ರಹಿಸಿದ್ದಾರೆ. ಅನಕೃ ಅವರ ತಾತ ಕೃಷ್ಣಪ್ಪ ಯೋಗಿಗಳು, ವೇದಾಂತಂ ಶಿವರಾಮ ಶಾಸ್ತ್ರಿಗಳು ಮೊದಲಾದ ಅನೇಕ ಅದ್ವೈತ ಕೀರ್ತನಕಾರರು ಚಿದಂಬರಯ್ಯನವರ ಸಮಕಾಲೀನರಾಗಿದ್ದರು.

ಚಿದಂಬರಯ್ಯನವರು ೧೯೧೯ರಲ್ಲಿ ಬೆಂಗಳೂರಿಗೆ ಬಂದಾಗ ಕೊಪ್ಪಳದ ಜಯರಾಮಾಚಾರ್ಯರೆಂಬ ಪ್ರಸಿದ್ಧ ದೇಶಾಭಿಮಾನಿ ಕೀರ್ತನಕಾರರು ಕೀರ್ತನಕಾರರ ಸಮ್ಮೇಳನವೊಂದನ್ನು ಬೆಂಗಳೂರಿನಲ್ಲಿ ಏರ್ಪಡಿಸಿದ್ದರು. ಆಗ ಆ ಕೈಂಕರ್ಯದಲ್ಲಿ ಚಿದಂಬರಯ್ಯನವರು ಸಕ್ರಿಯರಾಗಿ, ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದ್ದರು. ಕೀರ್ತನ ಕಲೆಯಿಂದ ಪ್ರಭಾವಿತರಾದ ಚಿದಂಬರಯ್ಯನವರು ಹರಿಕಥೆಗಳನ್ನು, ಹರಿಕೀರ್ತನೆಗಳನ್ನು ರಚಿಸಿದರು. 'ಭಕ್ತಬಂಧು' ಮಾಸಪತ್ರಿಕೆ ಆರಂಭಿಸಿದರು. ರಾಮಾಯಣ, ಭಾರತ, ಭಾಗವತ ಸತ್ಪುರುಷರ ಹರಿಕಥೆಗಳನ್ನು ರಚಿಸುವ ಸಂದರ್ಭದಲ್ಲಿ ಅನೇಕ ಕೀರ್ತನೆಗಳನ್ನೂ ರಚಿಸಿದರು. 'ಕೀರ್ತನ ಕಂಠಾಭರಣ' ಎಂಬ ೫ ಭಾಗಗಳ ೪೮ ಹರಿಕಥೆಗಳ ಬೃಹದ್ಗ್ರಂಥವನ್ನೇ ೧೯೩೨ರ ವೇಳೆಗೆ ಸಮಗ್ರವಾಗಿ ಪ್ರಕಟಿಸಿದರು. ಮೊದಲಿನಿಂದಲೂ ಪದ್ಯರಚನೆಯಲ್ಲಿ ಹಾಡುಗಳ ರಚನೆಯಲ್ಲಿ ವಿಶೇಷ ಆಸಕ್ತಿ ಚಿದಂಬರಯ್ಯನವರಿಗಿತ್ತು. ಅವರ 'ಸುಶೀಲಾ ಪರಿಣಯ' ನಾಟಕದಲ್ಲಿ ಬಸವಪ್ಪ ಶಾಸ್ತ್ರಿಗಳು ಶಾಕುಂತಲಕ್ಕೆ ರಚಿಸಿದ ಮಾದರಿಯಲ್ಲಿ ಅನೇಕ ಹಾಡುಗಳನ್ನು ಚಿದಂಬರಯ್ಯನವರು ರಚಿಸಿದ್ದಾರೆ. ಇದಲ್ಲದೆ, ದೇವತಾ ಸ್ತೋತ್ರರೂಪವಾದ ಸುಮಾರು ೧೫೦ಕ್ಕೂ ಹೆಚ್ಚಿನ ಕೀರ್ತನೆಗಳನ್ನು 'ಭಕ್ತಿಗೀತಾವಳಿ' ಎಂಬ ಕನ್ನಡ ಕೀರ್ತನೆಗಳ ಗ್ರಂಥವನ್ನು ೧೯೧೯ರ ವೇಳೆಗೆ ಪ್ರಕಟಿಸಿದರು. ಜನರಲ್ಲಿ ಧಾರ್ಮಿಕ ಪ್ರಭಾವನೆ ಉಂಟುಮಾಡಲು ಈ ಕೀರ್ತನೆಗಳನ್ನು ರಚಿಸಿದ್ದಾರೆ.

ತಮ್ಮ ವಿಜ್ಞಾಪನೆಯಲ್ಲಿ ಈ ಗ್ರಂಥರಚನೆ ಬಗ್ಗೆ ಹೇಳಿರುವ ಮಾತುಗಳಿವು:

> **"ಗಾನರೂಪದಲ್ಲಿ ಭಕ್ತಿಜ್ಞಾನವೈರಾಗ್ಯ ಪ್ರಧಾನವಾದ ಪರಮಾತ್ಮನ ಗುಣಗಳೂ, ಲೀಲೆಗಳೂ ಸರ್ವದೇವತಾರೂಪವೂ ಬಿಂಬಿಸಿ ಮನಸ್ಸನ್ನು ತನ್ಮಯವಾಗಿ ಹೃದಯದಲ್ಲಿ ಬತ್ತಿಕೊಂಡು ಎಲ್ಲಿಯೋ ತಳಕ್ಕೆ ಹತ್ತಿಕೊಂಡು ಹೋಗಿರುವ ಆನಂದರಸವು ಉಕ್ಕಿ ಹೊರಸೂಸಲೆಂದು ನನಗೆ ತಿಳಿದಮಟ್ಟಿಗೆ ಈ ಗ್ರಂಥವನ್ನು ರಚಿಸಿರುವೆ".**

ಅದ್ವೈತ ಕೀರ್ತನಕಾರರೆಲ್ಲ ಬಹುಮಟ್ಟಿಗೆ ಭಾಗವತ ಸಂಪ್ರದಾಯಸ್ಥರು. ಹರಿಹರ ಭೇದವನ್ನು ಎಣಿಸದವರು. ಬಹುದೇವತಾರಾಧಕರು. ಹಾಗಾಗಿ ವಿವಿಧ ದೇವಿ-ದೇವರ ಸ್ತೋತ್ರಗಳನ್ನು ರಚಿಸಿರುವುದನ್ನು ಕಾಣುತ್ತೇವೆ. ಹೊಸಕೆರೆ ಚಿದಂಬರಯ್ಯನವರು ಭಾಗವತಪಂಥದವರೇ ಆಗಿದ್ದಾರೆ. ಇವರ ಭಕ್ತಿಗೀತಾವಳಿ'ಯಲ್ಲಿ ಬಹುದೇವತಾಸ್ತೋತ್ರಗಳನ್ನು ಗುರುತಿಸಬಹುದು.

ಭಕ್ತಿಗೀತಾವಳಿ'ಯಲ್ಲಿ ಗಣಪತಿ, ಶಾರದಾ, ಗುರು, ಕೃಷ್ಣ, ಲಕ್ಷ್ಮೀ, ರಾಮ, ಮಾರುತಿ, ಶಿವ, ಗೌರಿ, ಗಂಗಾ, ಸೂರ್ಯ, ದತ್ತಾತ್ರೇಯರಿಗೆ ಸಂಬಂಧಿಸಿದ ಕೀರ್ತನೆಗಳನ್ನು ರಚಿಸಿದ್ದಾರೆ. ಅದಲ್ಲದೆ, ಮನಸ್ಸಿಗೆ ಉಪದೇಶವೆಂಬ ನೀತಿಬೋಧೆಯ, ಆತ್ಮೋದ್ಧಾರದ ಕೀರ್ತನೆಗಳನ್ನು ರಚಿಸಿದ್ದಾರೆ.

ಚಿದಂಬರಯ್ಯನವರ ದೃಷ್ಟಿ ಸದಾ ಜನಸಾಮಾನ್ಯರತ್ತ ಇತ್ತು. ಅವರು ರಚಿಸಿರುವ ಕೃತಿಗಳಲ್ಲಿ ಬಹುತೇಕ ಜನಸಾಮಾನ್ಯರಿಗಾಗಿಯೇ ರಚಿಸಿದವುಗಳಾಗಿವೆ. ಸಂಸ್ಕೃತ ಗ್ರಂಥಗಳನ್ನು ಅನುವಾದಿಸಿದ್ದಾರೆ; ವಿದ್ಯಾರ್ಥಿಗಳಿಗೆ ಅನೇಕ ಜೀವನಚರಿತ್ರೆ, ಶಿಕ್ಷಣ ಗ್ರಂಥಗಳನ್ನು ಬರೆದಿದ್ದಾರೆ. ಸಾಮಾನ್ಯರ ಮನರಂಜನೆಗಾಗಿ ನಾಟಕ, ಕಥೆ, ಕಾದಂಬರಿಗಳನ್ನು ರಚಿಸಿದ್ದಾರೆ. ಮಧ್ಯಮ ವರ್ಗದ ಮಹಿಳೆಯರು, ಧಾರ್ಮಿಕ ಮನೋಭಾವದ ಗೃಹಸ್ಥರು ಹಾಡಿಕೊಳ್ಳಲು, ಭಜನಾಮಂದಿರಗಳಲ್ಲಿ ಹಾಡಲು ಬರೆದಿರುವ ಕೀರ್ತನೆಗಳಿವು. ಕೆಲವು ಕೀರ್ತನೆಗಳು ಅವರು ಹರಿಕಥೆ, ನಾಟಕಗಳಲ್ಲಿ ಆಯಾ ಪಾತ್ರಗಳಿಗಾಗಿ ಬರೆದ ಹಾಡುಗಳಾದರೂ ಅವು ದೇವತಾಸ್ತುತಿಗಳಾದ್ದರಿಂದ ಈ ಸಂಗ್ರಹದಲ್ಲಿ ಸೇರಿಸಲಾಗಿದೆ. ಮಹಿಳೆಯರು ಈ ಹಾಡುಗಳನ್ನು ನಿತ್ಯದ ಜೀವನದಲ್ಲಿ ಹಾಡಿಕೊಳ್ಳಲು ಸಂಪ್ರದಾಯದ ಹಾಡುಗಳಂತೆ ಬಳಸಿಕೊಳ್ಳುವುದು ಅವರ ಆಶಯವಾಗಿತ್ತು. ಅದಕ್ಕೆ ಪುರುಷರು ಹಾಡುವ ಸಂದರ್ಭದ ಹಾಡುಗಳಲ್ಲಿ ಉಚಿತವಾದ ಕಡೆಗಳಲ್ಲಿ ಪಾಠಾಂತರಗಳನ್ನು ಕೊಟ್ಟಿದ್ದಾರೆ. ಇದು ಅವರ ರಚನೆಗಳ ವಿಶೇಷವೂ ಹೌದು. ಉದಾಹರಣೆಗೆ, 'ದಯಮಾಡಿ ಕೊಡೋ ಎನ್ನಿಷ್ಟವ' ಎಂಬ ಕೀರ್ತನೆಯಲ್ಲಿ **"ಸತಿಸುತರಾ** ಬಲೆಯೆಂಬುವಾ । ಅತಿಕಷ್ಟದಿ । ಸಿಲ್ಕಿರದೆ । ಹಿತವನ್ನು ಮಾ । ಡುವ ಸಾಧುಸಂ । ಗತಿಯಲ್ಲಿಯೇ ಇಡು' ಎಂಬಲ್ಲಿ **'ಸತಿಸುತರಾ'** ಎಂಬುದಕ್ಕೆ ಸ್ತ್ರೀಯರು **'ಸುತಸುತೆಯರ'** ಎಂದು ಹೇಳಿಕೊಳ್ಳಬೇಕು ಎಂದು ಪಾಠಾಂತರ ಕೊಟ್ಟಿದ್ದಾರೆ.

ನಮ್ಮಲ್ಲಿ ಕೀರ್ತನಕಾರರು ಯಾರೂ ಪುರುಷರು ಹಾಡುವ ಕೀರ್ತನೆಗಳನ್ನು ಸ್ತ್ರೀಯರು ಹಾಡುವಾಗ ಕೀರ್ತನೆಯ ಸಾಲುಗಳೆಲ್ಲವೂ ಸ್ತ್ರೀಯರಿಗೆ ಅನ್ವಯಿಸುತ್ತದೆಯೇ ಎಂಬುದನ್ನು ಚಿಂತಿಸಿಲ್ಲ. ಹೊಸಕೆರೆ ಚಿದಂಬರಯ್ಯನವರಂತೆ

ಪಾಠಾಂತರಗಳನ್ನು ಕೊಟ್ಟಿಲ್ಲ. ಮಹಿಳೆಯರ ಬಗ್ಗೆ ಚಿದಂಬರಯ್ಯನವರಿಗಿದ್ದ ವಿಶೇಷ ಕಾಳಜಿಗೆ ಇದೊಂದು ನಿದರ್ಶನವಾಗಿದೆ. ಮಹಿಳೆಯರು ಬಿಡುವಿನ ವೇಳೆಯಲ್ಲಿ ಹಾಡಿಕೊಳ್ಳಲೆಂದೇ ಆದಿ ಶಂಕರಾಚಾರ್ಯರ ಜೀವನಚರಿತ್ರೆಯನ್ನು ಗೋವಿನ ಹಾಡಿನ ಮಟ್ಟಿನಲ್ಲಿ ರಚಿಸಿದ್ದಾರೆ.

ನಾಟಕಗಳಲ್ಲಿ ಹರಿಕಥೆಗಳಲ್ಲಿರುವ ದೇವತಾಸ್ತುತಿಯ ಕೀರ್ತನೆಗಳನ್ನು 'ಭಕ್ತಿಗೀತಾವಳಿ'ಯಲ್ಲಿ ಪ್ರಕಟಿಸಿದ್ದಾಗ, ಕೀರ್ತನೆಗಳಿಗೆ ನಾಟಕ–ಹರಿಕಥೆ ಕಥಾಸಂದರ್ಭಕ್ಕೆ ಒಪ್ಪುವಂತಹ ಆದರೆ ಸ್ವತಂತ್ರವಾಗಿ ದೇವತಾಸ್ತುತಿಯನ್ನು ಮಾಡುವ ಕಾಲಕ್ಕೆ ಅನಗತ್ಯವಾದ ಹಾಡಿನ ಸಾಲುಗಳನ್ನು ಬಿಟ್ಟು ಹಾಡಲು ಅನುಕೂಲವಾಗುವಂತೆ ಆ ಚರಣಗಳನ್ನು ದಪ್ಪಕ್ಷರಗಳಲ್ಲಿ ಮುದ್ರಿಸಿದ್ದಾರೆ. 'ನಾಮಭಿಕ್ಷವೀಯೋ ಪ್ರೇಮದಿ ರಾಮ' ಎಂಬ ಕೀರ್ತನೆಯನ್ನು ನಿದರ್ಶನಕ್ಕೆ ಗಮನಿಸಬಹುದು.

ರಾಗವಿನ್ಯಾಸಕ್ಕೆ ತಕ್ಕಂತೆ ಅಕ್ಷರಗಳನ್ನು ಅತಿ ದೀರ್ಘವಾಗಿ ಎಳೆಯಬೇಕೆಂದು ಸೂಚಿಸಲು ಚಿಕ್ಕಗೆರೆ (–) ಹಾಕಿದ್ದಾರೆ. ರಾಗ–ತಾಳಗಳನ್ನು ಪ್ರತಿ ಕೀರ್ತನೆಗಳಲ್ಲಿ ಸೂಚಿಸಿರುವ ಜೊತೆಗೆ ಧಾಟಿಗಳನ್ನು ಸೂಚಿಸಿದ್ದಾರೆ. ಈ ಧಾಟಿಗಳನ್ನು ಕಂಡಾಗ, ಹೊಸಕೆರೆ ಚಿದಂಬರಯ್ಯನವರಿಗೆ ೨೦ನೇ ಶತಮಾನದ ಪ್ರಾರಂಭದಲ್ಲಿ ನಮ್ಮ ನಾಡಿನಲ್ಲಿ ಜನಪ್ರಿಯವಾಗಿದ್ದ ತೆಲುಗು, ಮರಾಠಿ ಹಾಡುಗಳು ಯಾವುವು, ಆಗಿನ ನಾಟಕ ಕಂಪನಿಗಳ ಪ್ರಸಿದ್ಧ ಮಟ್ಟುಗಳು ಯಾವುವು ಎಂಬುದು ತಿಳಿದಿತ್ತು ಎಂಬುದು ಅರಿವಾಗುತ್ತದೆ. ಈ ಧಾಟಿಗಳ ಮೂಲ ಯಾವುದೆಂದು ತಿಳಿಯುವ ಅಗತ್ಯವಿದೆ.

ಚಿದಂಬರಯ್ಯನವರಿಗೆ ಸಾಕಷ್ಟು ಸಂಗೀತದ ಪರಿಚಯವಿದ್ದರೂ, ಆ ಬಗ್ಗೆ ಪಾಂಡಿತ್ಯವಿರಲಿಲ್ಲ. ಅದಕ್ಕಾಗಿ ಸಂಗೀತ ವಿದ್ವಾಂಸರ ನೆರವನ್ನು ಪಡೆಯುತ್ತಿದ್ದರು. ಅವರ ಉಪಕಾರವನ್ನು ನೆನೆಯುತ್ತಿದ್ದರು. 'ಕೀರ್ತನ ಕಂಠಾಭರಣ'ದಲ್ಲಿ ಒಂದೆಡೆ (ಪೀಠಿಕೆ ರಾಮಾಯಣ ಭಾಗ–೧) ಹೀಗೆ ಹೇಳಿದ್ದಾರೆ:

> "ಗಾನಶಾಸ್ತ್ರದ ಪರಿಚಯವಿಲ್ಲದ ನನಗೆ, ಶ್ರೀಯುತ ಅರಸೀಕೆರೆ ರಾಮಣ್ಣನವರು ತಮ್ಮ ತಂದೆಯವರಾದ ಅರಸೀಕೆರೆ ತಿಮ್ಮಪ್ಪದಾಸರ ಸಂಗ್ರಹದಲ್ಲಿದ್ದ ಕಾಲೋಚಿತವಾದ ಮಟ್ಟುಗಳನ್ನು ಕೊಟ್ಟಿದ್ದಲ್ಲದೆ ನಾನು ಅನೇಕ ಕಡೆ ಆ ಮಟ್ಟುಗಳಲ್ಲಿ ಪದಗಳನ್ನು ಮಾಡಿದ ಮೇಲೆ ಅವುಗಳ ಹೊಂದಿಕೆಯನ್ನು ಮತ್ತೊಮ್ಮೆ ನೋಡಿ ರಾಗ–ತಾಳಗಳನ್ನು ಗೊತ್ತುಮಾಡಿಕೊಟ್ಟು ಉಪಕಾರ ಮಾಡಿರುತ್ತಾರೆ."

ಕೀರ್ತನಕಾರರಾಗಿ ಅಮೋಘ ಕೀರ್ತನೆಗಳನ್ನು ರಚಿಸಿ ಕನ್ನಡ ನಾಡಿನ ಪ್ರಮುಖ ಅದ್ವೈತ ಕೀರ್ತನಕಾರರಲ್ಲಿ ಒಬ್ಬರಾಗಿದ್ದಾರೆ. ನಮ್ಮ ನಾಡಿನ ಬಹುಮಂದಿ ಸಂಗೀತಗಾರರು, ಗಾಯಕರು 'ಹಾಡಿದ್ದೇ ಹಾಡೊ ಕಿಸಬಾಯಿದಾಸ' ಎಂಬ ಗಾದೆಯಂತೆ ಕೇವಲ ತಾವು ಕಲಿತಷ್ಟೇ ಕೀರ್ತನೆಗಳನ್ನು ಜೀವಮಾನದ ಉದ್ದಕ್ಕೂ ಹಾಡುವುದರ ಜೊತೆಗೆ ಹಿಂದಿನ ತಲೆಮಾರುಗಳಲ್ಲಿ ಅನೇಕ ಪ್ರತಿಭಾವಂತ ಕೀರ್ತನಕಾರರು ರಚಿಸಿದ ಕೀರ್ತನೆಗಳನ್ನು ಹಾಡಿ ಪ್ರಚಾರಕ್ಕೆ ತರುವುದು ಅಗತ್ಯವಿದೆ. ಆ ಮೂಲಕ ನಾಡಿನ ಕೀರ್ತನ ಸಂಪತ್ತನ್ನು ಜನಮಾನಸದಲ್ಲಿ ಉಳಿಸುವುದು ಅವರ ಕರ್ತವ್ಯವಾಗಿದೆ. ಈ ದಿಸೆಯಲ್ಲಿ 'ಭಕ್ತಿಗೀತಾವಳಿ' ಗ್ರಂಥ ಒಂದು ಶ್ರೇಷ್ಠ ಕೊಡುಗೆಯಾಗಿದೆ.

ಭಕ್ತಿಗೀತಾವಳಿಯಲ್ಲಿ ಕೀರ್ತನೆಗಳಿಗೆ ಅಳವಡಿಸಿರುವ ಕೆಲ ರಾಗಗಳ ಪಟ್ಟಿ

೧. ಹಿಂದೂಸ್ತಾನಿ ತೋಡಿ
೨. ಕಾನಡಾ
೩. ಯಮುನಾ ಕಲ್ಯಾಣಿ
೪. ಜಂಗಲ್
೫. ಖರಹರಪ್ರಿಯ
೬. ಬೇಹಾಗ್
೭. ಕಲ್ಯಾಣಿ
೮. ಸೌರಾಷ್ಟ್ರ
೯. ಕೇದಾರಗೌಳ
೧೦. ಸುರಟಿ
೧೧. ಹಮೀರ ಕಲ್ಯಾಣಿ
೧೨. ಪುನ್ನಾಗವರಾಳಿ
೧೩. ಆನಂದಭೈರವಿ
೧೪. ಭೈರವಿ
೧೫. ಜುಂಜೂಟಿ
೧೬. ಮೋಹನ
೧೭. ಪೀಲು
೧೮. ಕೀರವಾಣಿ
೧೯. ಹಿಂದೂಸ್ತಾನಿ ಕಾಪಿ
೨೦. ಶಂಕರಾಭರಣ
೨೧. ಖರಹರಪ್ರಿಯ
೨೨. ಕಾಂಬೋಜಿ
೨೩. ಕಮಾಚ್
೨೪. ಮುಖಾರಿ
೨೫. ಕಾಪಿ
೨೬. ಜನರಂಜನಿ

೨೭. ಸರಸ್ವತೀ ಮನೋಹರಿ
೨೮. ಚಕ್ರವಾಕ
೨೯. ಬಂಗಾಳ
೩೦. ಶ್ರೀರಂಜನಿ
೩೧. ನಾಯಕಿ
೩೨. ಬಿಲಹರಿ
೩೩. ಸಹನ
೩೪. ರೇಗುಪ್ತಿ
೩೫. ದೇಶಿ ಕಾಪಿ
೩೬. ಅಠಾಣ
೩೭. ಸಿಂಧುಮಂದಾರಿ
೩೮. ನವರಸ ಕನ್ನಡ
೩೯. ಮಲಯಮಾರುತ
೪೦. ಶ್ರೀರಾಗ
೪೧. ಸಾವೇರಿ
೪೨. ಯದುಕುಲ ಕಾಂಭೋಜಿ
೪೩. ತೋಡಿ
೪೪. ಬೇಗಡೆ
೪೫. ಗರುಡಧ್ವನಿ
೪೬. ಹಂಸಧ್ವನಿ
೪೭. ಕೋಲಾಹಲ
೪೮. ಪೂರ್ಣಚಂದ್ರಿಕಾ
೪೯. ಪುಷ್ಪತಿಲಕ
೫೦. ಕಾಪೀ ನಾರಾಯಣಿ
೫೧. ದರ್ಬಾರ್
೫೨. ಕುಂತಲವರಾಳಿ
೫೩. ಪೂರ್ವೀಕಲ್ಯಾಣಿ
೫೪. ದೇಶೀ ತೋಡಿ
೫೫. ಧನಾಶ್ರೀ
೫೬. ಲತಾಂಗಿ
೫೭. ರಾಮಪ್ರಿಯ
೫೮. ನಾಟಿಕುರಂಜಿ

ಅಂಕಿತ ವಿಚಾರ

ಕೀರ್ತನ ಸಾಹಿತ್ಯದ ಪ್ರಮುಖ ಲಕ್ಷಣಗಳಲ್ಲಿ ಒಂದೆಂದರೆ ಕೊನೆಯಲ್ಲಿ 'ಅಂಕಿತ' ಇರುತ್ತದೆ. ಈ ಅಂಕಿತ ಕೀರ್ತನ ರಚನಕಾರರಿಗೆ ಹಲವು ರೀತಿಯಲ್ಲಿ ಲಭ್ಯವಾಗುತ್ತದೆ. ಕೆಲವರಿಗೆ ಗುರುಗಳಿಂದ ಅಂಕಿತೋಪದೇಶವಾಗುತ್ತದೆ. ಇನ್ನು ಕೆಲವರಿಗೆ 'ಸ್ವಪ್ನಾಂಕಿತ' ದೊರೆಯುತ್ತದೆ. ಮತ್ತೆ ಕೆಲವರು ತಮ್ಮ ಆರಾಧ್ಯ ದೈವವನ್ನೇ ಅಂಕಿತ ಮಾಡಿಕೊಳ್ಳುತ್ತಾರೆ. ಹಲವರು ಅಂಕಿತವಿಲ್ಲದೆ ಕೀರ್ತನೆಗಳನ್ನು ರಚಿಸಿದ್ದಾರೆ. ಆದರೆ ಸಾಮಾನ್ಯವಾಗಿ ಕೀರ್ತನೆಗೆ ಪಲ್ಲವಿ ಇರುವಂತೆ ಅಂಕಿತ ಇದ್ದೇಇರುತ್ತದೆ. ಶರಣರು, ದಾಸರ ಕೀರ್ತನೆಗಳು ಇದಕ್ಕೆ ಸಾಕ್ಷಿ. ಹೊಸಕೆರೆ ಚಿದಂಬರಯ್ಯನವರು

ಶರಣರ ಹಾಗೆ 'ಕೂಡಲಸಂಗಮದೇವ', 'ರಾಮನಾಥಾ', 'ಚೆನ್ನಮಲ್ಲಿಕಾರ್ಜುನ' ಇತ್ಯಾದಿ ರೀತಿಯಲ್ಲಿ ಇಷ್ಟದೇವತೆಯ ಅಂಕಿತವನ್ನು ಇಟ್ಟುಕೊಂಡವರಲ್ಲ. ಹರಿದಾಸರಂತೆ, ಪುರಂದರವಿಠಲ, ಗೋಪಾಲವಿಠಲ, ಶ್ರೀಕೃಷ್ಣ ಇತ್ಯಾದಿ ಬಗೆಯಲ್ಲಿ ಗುರುವಿನಿಂದ ಅಂಕಿತ ದೀಕ್ಷೆ ಪಡೆದವರಲ್ಲ. ಅಥವಾ ವಿಜಯವಿಠ್ಠಲರಂತೆ ಸ್ವಪ್ನಾಂಕಿತ ಹೊಂದಿದವರಲ್ಲ.

ಚಿದಂಬರಯ್ಯ ಅವರ ಅಂಕಿತ 'ಚಿತ್'. ಅದ್ವೈತ ಸಿದ್ಧಾಂತನಿಷ್ಠರಾಗಿ ಜ್ಞಾನಮಾರ್ಗಿ ಗಳಾದ್ದರಿಂದ ಅದಕ್ಕಾಗಿ ಇಟ್ಟುಕೊಂಡ ಅಂಕಿತ 'ಚಿತ್' ಎನ್ನಬಹುದು. ಆದರೆ ಏಕೆ ಈ ಅಂಕಿತ ಇಟ್ಟುಕೊಂಡರು ಎಂಬ ಬಗ್ಗೆ ಖಚಿತವಾಗಿ ಹೇಳುವಂತಿಲ್ಲ. ಆದರೆ ಅವರು ಈ ಅಂಕಿತವನ್ನು ಮೂಲರೂಪದಲ್ಲಿಟ್ಟುಕೊಂಡಿಲ್ಲ. ಅದನ್ನು ಸಮಾಸ ಪದದ ರೂಪದಲ್ಲಿ ಬಳಸಿದ್ದಾರೆ. ಅವರು ಅಂಕಿತವಿಲ್ಲದೆ ಬರೆದ ಕೀರ್ತನೆಗಳಿದ್ದರೂ ಅವು ಹೆಚ್ಚಿಲ್ಲ ಮತ್ತು ದಾಸ ಸಾಹಿತ್ಯದ ಕೀರ್ತನೆಗಳ ಲಕ್ಷಣಾನುಸಾರ, ಪಲ್ಲವಿ, ಅನುಪಲ್ಲವಿ, ಬೆಸ ಸಂಖ್ಯೆಗಳಲ್ಲಿ ಚರಣಗಳ ರಚನೆ (೩, ೫, ೭ ಇತ್ಯಾದಿ) ಅಂಕಿತ ಅವರ ಕೀರ್ತನೆಗಳಲ್ಲಿ ಕಂಡುಬರುತ್ತದೆ.

ಹೊಸಕೆರೆ ಚಿದಂಬರಯ್ಯನವರು ಬಳಸಿದ ಅಂಕಿತ ಪದರೂಪಗಳು ಸುಮಾರು ೩೦ ಇವೆ:

೧. ಚಿದ್ಘನ ೨. ಚಿದ್ರತ್ನ ೩. ಚಿಚ್ಛಕ್ತಿ ೪. ಚಿನ್ಮಯ (ಚಿನುವಾಯ) ೫. ಚಿನ್ಮಯೆ ೬. ಚಿದ್ವಿಲಾಸ ೭. ಚಿತ್ಸ್ವಭಾವ ೮. ಚಿಚ್ಛರೀರ ೯. ಚಿದ್ರೂಪ ೧೦. ಚಿದ್ರೂಪೆ ೧೧. ಚಿದ್ವಿಶೇಷ ೧೨. ಚಿತ್ಕಳೆ ೧೩. ಚಿತ್ಸುಖ ೧೪. ಚಿತ್ಸ್ವರೂಪೆ ೧೫. ಚಿತ್ಸ್ವರೂಪ ೧೬. ಚಿದಾಕಾರ ೧೭. ಚಿದ್ವಿಶೇಷ ೧೮. ಚಿತ್ಪ್ರಭಾವ ೧೯. ಚಿದ್ವಿಹೀನ ೨೦. ಚಿದ್ವೇಷ ೨೧. ಚಿದ್ರೂಪಾನಂದ ೨೨. ಚಿದ್ರೂಪಿಣಿ ೨೩. ಚಿದ್ವಿನೋದ ೨೪. ಚಿದೇಕರಸ ೨೫. ಚಿಜ್ಜ್ಯೋತಿ ೨೬. ಚಿನ್ಮಯಮೂರುತಿ ೨೭. ಚಿನ್ಮಯಾಂಗಿ ೨೮. ಚಿದಂಬರ ೨೯. ಚಿನ್ಮಯಸ್ವರೂಪ ೩೦. ಚಿದ್ವೈಭವ.

ಈ ಎಲ್ಲಾ ಪದಗಳಲ್ಲಿ ಮೂಲಪದ 'ಚಿತ್' ಆಗಿದೆ ಎಂಬುದು ಗಮನಾರ್ಹ.

ಕೀರ್ತನೆಗಳ ಸೇರ್ಪಡೆ

ಹೊಸಕೆರೆ ಚಿದಂಬರಯ್ಯನವರು 'ಭಕ್ತಿಗೀತಾವಳಿ'ಯಲ್ಲಿ ೧೪೭ ಕೀರ್ತನೆಗಳನ್ನು ಪ್ರಕಟಿಸಿದ್ದರು. ಈಗ ಅವರ 'ಕೀರ್ತನ ಕಂಠಾಭರಣ' (೪೮ ಹರಿಕಥೆಗಳ ಸಂಗ್ರಹ) ಗ್ರಂಥದಿಂದ ಈ ಕೆಳಕಂಡ ಕೀರ್ತನೆಗಳನ್ನು ಆಯ್ದು ಸೇರಿಸಿದ್ದೇನೆ. 'ಕೀರ್ತನ ಕಂಠಾಭರಣ'ಕ್ಕೆ ಮೊದಲು 'ಭಕ್ತಿಗೀತಾವಳಿ' ರಚಿಸಿದ್ದರು.

(೧೯೧೯). ಹಾಗಾಗಿ ಇದರ ಹಲವಾರು ಕೀರ್ತನೆಗಳನ್ನು 'ಕೀರ್ತನ ಕಂಠಾಭರಣ'ದಲ್ಲಿ ಸೇರಿಸಿದ್ದರು. ಭಕ್ತಿಗೀತಾವಳಿ ದೇವತಾ ಪ್ರಾರ್ಥನಾ ರೂಪದ ಕೀರ್ತನೆಗಳ ಸಂಗ್ರಹವಾದ್ದರಿಂದ ಅದೇ ಮಾದರಿಯ ಈ ಕೆಳಕಂಡ ಕೀರ್ತನೆಗಳನ್ನು ಇಲ್ಲಿ ಸೇರಿಸಲಾಗಿದೆ.

೧. ಜೋಜೋಜೋ ನೀಲಮೇಘ ಸಂಕಾಶ (ರಾಮಾಯಣ, ಕೀರ್ತನ ಕಂಠಾಭರಣ, ಪು.೧೭) ಶ್ರೀರಾಮ.

೨. ಶ್ರೀಶೈಲಸಾಧನೆ (ಕೀರ್ತನ ಕಂಠಾಭರಣ, ಪು.೧೭)

೩. ಯಾರಿಗೆ ಹೇಳಲಿ ಗೋಳ (ಕೀ.ಕಂ. ರಾಮಾಯಣ ಪು. ೧೨)

೪. ಎಷ್ಟು ಸುಂದರ ಎಷ್ಟು ಬಂಧುರ, (ರಾಮಾಯಣ, ಕೀ.ಕಂ. ಪು. ೩೭)

೫. ಶಂಭೋ ಗಿರಿಜಾರಮಣ (ಶಿವ, ಸುಶೀಲಾ ಪರಿಣಯ ನಾಟಕ – ೧೮೯೯, ಪು. ೫೪)

೬. ಅವತರಿಸುವನು (ರಾಮಾಯಣ, ಕೀ. ಕಂ. ಪು. ೧) ಕೃಷ್ಣ

೭. ಬಂದನೇ? ಭಗವಂತನು (ರಾಮಾಯಣ, ಕೀ.ಕಂ. ಪು. ೧೧೮) ಕೃಷ್ಣ

೮. ಜಯಜಯದೇವಾಧಿದೇವ (ಭಾಗವತ ಕೀ.ಕಂ. ಪು. ೭೭, ಶ್ರೀಕೃಷ್ಣ)

೯. ಕೇಶವಾ ಮಾಧವಾ ಪಾಲಿಸೈ (ಭಾಗವತ, ಕೀ.ಕಂ. ಪು. ೫೬. ಕೃಷ್ಣ)

೧೦. ಏನಿದಚ್ಚರಿಯೋ (ವಂಶಸ್ಥರಲ್ಲಿ ಬಳಕೆಯಾದ ಹಾಡು)

೧೧. ಗರುಡಗಮನ (ವಂಶಸ್ಥರಲ್ಲಿ ಬಳಕೆಯಾದ ಹಾಡು)

ಧಾಟಿಗಳ ಸೂಚನೆ

ಹೊಸಕೆರೆ ಚಿದಂಬರಯ್ಯನವರು ಪ್ರತಿ ಕೀರ್ತನೆಗಳೂ ಸಾಮಾನ್ಯವಾಗಿ ರಾಗ–ತಾಳಗಳನ್ನು; ಅದರ ಜತೆಗೆ ಧಾಟಿಗಳನ್ನು ಸೂಚಿಸಿದ್ದಾರೆ. ಈ ಧಾಟಿಗಳು ಅವರ ಕಾಲದಲ್ಲಿ ಪ್ರಸಿದ್ಧವಾಗಿ ಪ್ರಚಾರದಲ್ಲಿದ್ದ ಧಾಟಿಗಳಾಗಿವೆ. ಚಿದಂಬರಯ್ಯನವರಿಗೆ ಸಂಸ್ಕೃತ, ಕನ್ನಡ, ತೆಲುಗು, ಮರಾಠಿ ಭಾಷೆಗಳ ಪರಿಚಯವಿದ್ದುದರಿಂದ, ಆ ಭಾಷೆಗಳ ಹಾಡುಗಳ ಧಾಟಿಗಳನ್ನು ಕೊಟ್ಟಿದ್ದಾರೆ.

ಮತ್ತು ಆ ಕಾಲದ ಪ್ರಸಿದ್ಧ ಕಂಪನಿ ನಾಟಕಗಳನ್ನು ಅವರು ನೋಡಿದ್ದರು. ಅವುಗಳ ಹಾಡುಗಳು ಜನಪ್ರಿಯವಾಗಿ ಜನರ ಬಾಯಲ್ಲಿ ಗುನುಗುಡುತ್ತಿದ್ದುದನ್ನು ಕೇಳಿದ್ದರು. ಹಾಗಾಗಿ ಆ ಕಂಪನಿ ನಾಟಕಗಳ ಜನಪ್ರಿಯ ಹಾಡುಗಳ ಧಾಟಿಗಳನ್ನು ಬಳಸಿಕೊಂಡಿದ್ದಾರೆ. ತೆಲುಗು ಕೀರ್ತನೆಗಳ ಧಾಟಿಗಳನ್ನು ಹೆಚ್ಚಾಗಿ ಬಳಸಿಕೊಂಡಿದ್ದಾರೆ. ಅದರಲ್ಲೂ ವಾಗ್ಗೇಯಕಾರ ಶ್ರೀ ತ್ಯಾಗರಾಜರ ಕೀರ್ತನೆಗಳ ಬಗ್ಗೆ ಅವರೊಲವು ಸಾಕಷ್ಟು ಇದ್ದಂತೆ ಇದೆ. ಚಿದಂಬರಯ್ಯನವರು ಉಲ್ಲೇಖಿಸಿರುವ ಧಾಟಿಗಳು ಯಾವ ನಾಟಕ/ ಯಾವ ವಾಗ್ಗೇಯಕಾರರರ ರಚನೆಗಳು ಎಂಬುದನ್ನು ಶೋಧಿಸಬೇಕಾಗಿದೆ. ಇದರಿಂದ ೧೯೦೦-೧೯೨೦ರ ಅವಧಿಯಲ್ಲಿ ನಮ್ಮಲ್ಲಿ ಜನಪ್ರಿಯವಾಗಿದ್ದ ಕೀರ್ತನೆಗಳು ಯಾವುವು ಎಂಬುದು ತಿಳಿಯುತ್ತದೆ.

ಜನಸಾಮಾನ್ಯರಲ್ಲಿ ಎಷ್ಟೋ ಜನ ಧಾಟಿಗಳನ್ನು ಅನುಸರಿಸಿ ಹಾಡುಗಳನ್ನು ಹಾಡುವವರು ಇದ್ದಾರೆ. ಹಿಂದೆಯೂ ಇದ್ದರು. ಚಿದಂಬರಯ್ಯನವರು ಇಂಥವುಗಳನ್ನು ಗಮನಿಸಿ ಸರಳವಾದ-ಜನಪ್ರಿಯವಾದ ಹಾಡುಗಳ ಧಾಟಿಗಳನ್ನು ತಮ್ಮ ರಚನೆಗಳಿಗೆ ಸೂಚಿಸಿದ್ದಾರೆ. ಶಾಸ್ತ್ರೀಯ ಸಂಗೀತ ಕಲಿತವರಿಗೆ ರಾಗ-ತಾಳಗಳ ಸೂಚನೆ ಸಾಕು. ಧಾಟಿಯ ಅಗತ್ಯವಿಲ್ಲ. ಆದಕಾರಣ, ಪಂಡಿತ-ಪಾಮರರಿಬ್ಬರಿಗೂ ಉಪಯುಕ್ತವಾಗುವಂತೆ ರಾಗ-ತಾಳ-ಧಾಟಿಗಳನ್ನು ಕೊಟ್ಟಿದ್ದಾರೆ.

ಚಿದಂಬರಯ್ಯನವರ ಹಾಡುಗಳಲ್ಲಿ ಕೆಲವಕ್ಕೆ ರಾಗ-ತಾಳ-ಧಾಟಿ ದೊರಕಿಲ್ಲ. ಉಳಿದ ಕೀರ್ತನೆಗಳಿಗೆ ಸೂಚಿಸಿದ್ದಾರೆ. ಆ ಪೈಕಿ ಕೆಲವನ್ನು ಇಲ್ಲಿ ನಿದರ್ಶನಕ್ಕಾಗಿ ಪಟ್ಟಿ ಮಾಡಿದೆ.

ಸಂಸ್ಕೃತ ಕೀರ್ತನೆಗಳ ಧಾಟಿಗಳು: ಶ್ರೀ ಗಿರಿಸುತೇ ಕಲ್ಯಾಣಿ ತ್ವಂ ಕೃಪಯಾ (ಕೀ. ೧೩); ಶಂಭೋ ಕಲ್ಯಾಣಮೂರ್ತೇ (ಕೀ.೩೧); ನಮೋಸ್ತ ಭಾನವೇ (ಕೀ. ೩೮); ಅಂಗಜವಾದಹರ ತವಜಯ ಮಂಗಳಂ (ಕೀ. ೩೯) ಇತ್ಯಾದಿ.

ತೆಲುಗು ಕೀರ್ತನೆಗಳ ಧಾಟಿ: ಕಮಲಾಂಬ ನಾ ಚಿಂತದೀರ್ಚವಮ್ಮಾ (ಕೀ.೨); ನೀನಾಯಮರೂಪಮುಲಕು (ಕೀ.೮); ಪರಮುಲಸಖಿ ಬ್ರೋಚುಟನೇ (ಕೀ.೨೧); ಪೋರಾದುರಾನೀಂಜನೇತ್ರ ಸೀತಾಪತೇ ನಾಯನಸುವಾ (ಕೀ.೪೫) ಇತ್ಯಾದಿ.

ಮರಾಠಿ ಕೀರ್ತನೆಗಳ ಧಾಟಿ: ತುಮಬಿನಮೇಂಕೇನಕಬರಲೇ (ಕೀ. ೪); ಬಸರಿ ಬಜಾಯಿ ನಂದಲಾಲ (ಕೀ.೧೧); ಗುರುಕೃಪಾಂಜನ ಪ್ರಾಯೋರೇಭಾಯಿ

(ಕೀ.೨೦); ಭಜಭಜಭವಜಲಧಿವಾಝು (ಕೀ.೬೨); ಘುರಿ ಘಂಟಕೀ ಪಟಖೋಲರೆ (ಕೀ. ೬೯) ಇತ್ಯಾದಿ.

ಕನ್ನಡ ಕೀರ್ತನೆಗಳ ಧಾಟಿ: ನಂಬಿದೆ ನಂಬಿಕೆ ಅಂಬುಜಾಕ್ಷನೆ ನಿನ್ನ (ಕೀ. ೫); ಧನ್ಯನಾದೆನುಡುಪಿ ಕೃಷ್ಣನ (ಕೀ.೬); ಪಾಲಿಸ್ಯೆ ಶ್ರೀ ಶಾರದೇ ಸತತಂ (ಕೀ. ೯); ಭಾರತಿ ಭಕುತಿಯನು ಕರುಣಿಸು (ಕೀ. ೧೦); ಮನುಜಶರೀರವಿದೇನು ಸುಖ (ಕೀ. ೧೫); ರಂಗ ನಿನ್ನ ಕೊಂಡಾಡುವ ಮಂಗಳಾತ್ಮಕ (ಕೀ. ೧೭); ಪಿಡಿಯೆನ್ನ ಕಯ್ಯ ರಂಗಯ್ಯ (ಕೀ. ೧೮) ಇತ್ಯಾದಿ.

ಕನ್ನಡ ನಾಟಕಗಳ ಹಾಡುಗಳ ಧಾಟಿ: ನವಮಲ್ಲಿಕಾದಿಪೂಗಳಿಗೆ (ಕೀ. ೧೬); ಎಂದಿಗಹುದೊ ತಂದೆಯೇ ನಿನ್ನ ಸದರುಶನ (ಕೀ. ೩೬); ಅರಳಿದ ಮಲ್ಲಿಗೆ ಪರಿಮಳ ಬಂದಲ್ಲಿ (ಕೀ. ೫೩); ಇಂದುವದನೆ ಕುಂದರದನೆ (ಕೀ. ೧೨೩); ಇತ್ಯಾದಿ.

ಪರಿಷ್ಕರಣ ವಿಚಾರ:

ಹೊಸಕೆರೆ ಚಿದಂಬರಯ್ಯನವರು ಒಂದೂ ತಪ್ಪಿಲ್ಲದೆ ಗ್ರಂಥಗಳನ್ನು ಪ್ರಕಟಿಸಬೇಕೆಂಬ ಧ್ಯೇಯವುಳ್ಳವರಾಗಿದ್ದರು. ಅವರ ಬಹುತೇಕ ಗ್ರಂಥಗಳು ಅಚ್ಚಿನ ತಪ್ಪುಗಳೇ ಇಲ್ಲವೆಂಬಂತೆ ಇವೆ. ಆದರೆ ಬಹುಶಃ ಕೀರ್ತನ ಗ್ರಂಥವಾದ್ದರಿಂದ ಒಂದೊಂದು ಅಕ್ಷರದ ಮೇಲೂ ನಿಗಾ ಇಡಬೇಕಾದ ಕಾರಣ, ಸಾಕಷ್ಟು ತಪ್ಪುಗಳಿದ್ದುದನ್ನು ಅವರೇ ನೋಡಿ ೩ ಪುಟಗಳಷ್ಟು ತಪ್ಪುಗಳ ಒಪ್ಪೋಲೆ ಕೊಟ್ಟಿದ್ದಾರೆ. ಇಷ್ಟೊಂದು ತಪ್ಪುಗಳನ್ನು ಅವರ ಯಾವ ಗ್ರಂಥಗಳಲ್ಲೂ ಕಂಡುಬರುವುದಿಲ್ಲ. ಬಹುಶಃ ಈ ಪ್ರತಿ ಅಚ್ಚಾದಾಗ ಯಾರೋ ಬೇರೆಯವರು ಕರಡು ತಿದ್ದಿದ್ದು ಗ್ರಂಥ ಅಚ್ಚಾದ ಮೇಲೆ ಚಿದಂಬರಯ್ಯನವರ ಗಮನಕ್ಕೆ ಬಂದು ಒಪ್ಪೋಲೆ ಹಾಕಿರುವ ಸಾಧ್ಯತೆಗಳಿವೆ. ಆ ತಪ್ಪುಗಳನ್ನೆಲ್ಲಾ ಈ ಪರಿಷ್ಕೃತ-ವಿಸ್ತೃತ ಆವೃತ್ತಿಯಲ್ಲಿ ಸರಿಪಡಿಸಲಾಗಿದೆ.

೨. ಹಳೆಯ ಕಾಲದ ಉದ್ದ ಗೀಟು(।) ಗಳನ್ನು ಹಾಕಿ ಉದ್ದಕ್ಕೂ ಗದ್ಯದಂತೆ ಪದ್ಯಗ್ರಂಥಗಳು ಪ್ರಕಟವಾಗುತ್ತಿದ್ದವು. (ಬಹುಶಃ ಆಗ ಕಾಗದದ ಅಭಾವ ಅಥವಾ ಪುಟಗಳ ಸಂಖ್ಯೆ ನಿಯಂತ್ರಿಸಲು ಮತ್ತು ಆ ಕಾಲಕ್ಕೆ ಮುದ್ರಣ ಸೌಕರ್ಯ ಅಷ್ಟಾಗಿ ಇರಲಿಲ್ಲ ಎಂದೆನ್ನಿಸುತ್ತದೆ). ಅದರಂತೆಯೇ 'ಭಕ್ತಿಗೀತಾವಳಿ'ಯ

ಕೀರ್ತನೆಗಳು ಸಾಲಾಗಿ ಗದ್ಯದಂತೆ ಅಚ್ಚಾಗಿದ್ದವು. ಅವುಗಳನ್ನು ಈ ಪರಿಷ್ಕೃತ ಆವೃತ್ತಿಯಲ್ಲಿ ಪಲ್ಲವಿ, ಅನುಪಲ್ಲವಿ, ಚರಣಗಳನ್ನಾಗಿ ಪ್ರತ್ಯೇಕಿಸಿ ಕೊಟ್ಟಿದೆ. ಇದರಿಂದ ಕೀರ್ತನೆಗಳ ಸ್ವರೂಪ ತಿಳಿಯುವುದಲ್ಲದೆ ಹಾಡುಗಾರರಿಗೆ ಸೌಕರ್ಯವಾಗುತ್ತದೆ.

೩. ಪ್ರತಿ ಕೀರ್ತನೆಗೂ ಮೊದಲ ಸಾಲನ್ನು ಶೀರ್ಷಿಕೆಯಾಗಿ ಕೊಡಲಾಗಿದೆ. ಇದರಿಂದ ಕೀರ್ತನೆಯನ್ನು ಗುರ್ತಿಸಲು ಸಾಧ್ಯವಾಗುತ್ತದೆ.

೪. ಪ್ರತಿ ಕೀರ್ತನೆಯಲ್ಲಿರುವ ಚಿದಂಬರಯ್ಯನವರ ಅಂಕಿತವಾದ 'ಚಿತ್'ದಿಂದ ಸಮಾಸ ಪದರೂಪಗಳನ್ನು ದಪ್ಪಕ್ಷರದಲ್ಲಿ ಕಾಣಿಸಿದೆ. ಇದರಿಂದ ಅಂಕಿತವನ್ನು ಸುಲಭವಾಗಿ ಗುರ್ತಿಸಬಹುದು.

೫. ಬೇಕಾದ ಕೀರ್ತನೆಯನ್ನು ಹುಡುಕಿಕೊಳ್ಳಲು ಎಲ್ಲಾ ಕೀರ್ತನೆಗಳ ವಿಷಯಾನುಸಾರ ಸೂಚಿಯನ್ನು ಪ್ರಾರಂಭದಲ್ಲೂ ಕೀರ್ತನೆಗಳ ಅಕಾರಾದಿ ಪಟ್ಟಿಯನ್ನು ಅನುಬಂಧದಲ್ಲಿಯೂ ಕೊಟ್ಟಿದೆ.

೬. ಪ್ರಥಮ ಮುದ್ರಣದಲ್ಲಿ ಕೀರ್ತನೆಗಳಲ್ಲಿ ಪದಗಳನ್ನು ಅಲ್ಲಲ್ಲಿ ಹಾಡುವವರ ದೃಷ್ಟಿಯಿಂದ ಪದಗಳನ್ನು ಒಡೆದುಕೊಟ್ಟಿದೆ. ಓದುಗರಿಗೆ ಸಾಹಿತ್ಯದ ದೃಷ್ಟಿಯಿಂದ ಅರ್ಥಹೀನವಾಗಿ ವಿಕಾರಪದಗಳಾಗಿ ಕಾಣಿಸುತ್ತವೆ. ಅಂಥ ಕಡೆಗಳಲ್ಲಿ ಪದಗಳನ್ನು ಅರ್ಥಪೂರ್ಣವಾಗಿ ಸೇರಿಸಿದೆ.

೭. ಆಯಾ ಹರಿಕಥಾ ಸಂದರ್ಭಗಳಲ್ಲಿ, ನಾಟಕ ಸಂದರ್ಭಗಳಲ್ಲಿ ರಚಿತವಾದ ಕೀರ್ತನೆಗಳನ್ನು ಪ್ರತ್ಯೇಕವಾಗಿ ಹಾಡುವಾಗ ಕೆಲವು ಚರಣಗಳ ಅಗತ್ಯವಿರುವುದಿಲ್ಲ. ಅಂಥ ಸಾಲುಗಳನ್ನು ಚಿದಂಬರಯ್ಯನವರು ದಪ್ಪಕ್ಷರಗಳಲ್ಲಿ ಕೊಟ್ಟಿದ್ದಾರೆ. ಅವುಗಳನ್ನು ನಿಬದ್ಧ ಚರಣಗಳಾಗಿ ವಿಂಗಡಿಸಿ ಹಾಗೇ ಉಳಿಸಿಕೊಳ್ಳಲಾಗಿದೆ.

೮. ಹಾಗೆಯೇ ಸ್ತ್ರೀಯರು ಹಾಡಿಕೊಳ್ಳುವಾಗ ಪುರುಷರಿಗೆ ಅನ್ವಯಿಸುವ ಕೆಲವು ಪದಗಳಿಗೆ ಪಾಠಾಂತರವನ್ನು ಟಿಪ್ಪಣಿಯಾಗಿ ಕೊಟ್ಟಿದ್ದಾರೆ. ಅವುಗಳನ್ನು ಹಾಗೆಯೇ ಉಳಿಸಿಕೊಂಡಿದೆ.

೯. ಪ್ರತಿ ಮಟ್ಟನ್ನೂ '...... ಎಂಬಂತೆ' ಎಂಬ ಮಾತಿನಿಂದ ಸೂಚಿಸಿದ್ದಾರೆ. ಉದಾ: 'ಇಂದುವದನೆ ಕುಂದರದನೆ' ಎಂಬಂತೆ. ಎಲ್ಲಾ ಮಟ್ಟುಗಳನ್ನೂ 'ಧಾಟಿ: ಇಂದುವದನೆ ಕುಂದರದನೆ' ಎಂದು ಮಾರ್ಪಡಿಸಿದೆ.

೧೦. ಹೆಚ್ಚು ಹೊತ್ತು ರಾಗವನ್ನು ಎಳೆಯುವ ಕಡೆಗಳಲ್ಲಿ ಒಂದೊಂದು ಅಡ್ಡಗೀಟುಗಳನ್ನು ಉಳಿಸಿದ್ದಾರೆ. ಅವುಗಳನ್ನು ಹಾಗೆಯೇ ಉಳಿಸಿಕೊಂಡಿದೆ.

೧೧. ಪ್ರತಿ ಕೀರ್ತನೆ ಮುಕ್ತಾಯವಾದುದು ತಿಳಿಯಲು ಒಂದು ಮುಕ್ತಾಯದ ಚಿಹ್ನೆ (***) ಹಾಕಿದೆ. ಮೂಲಪ್ರತಿಯಲ್ಲಿ ಮುಕ್ತಾಯದ ಚಿಹ್ನೆ ಇಲ್ಲ.

೧೨. ಚರಣಗಳ ಸಾಲುಗಳ ಅಂತ್ಯದಲ್ಲಿ ಅರೆಮುಕ್ತಾಯದ ಚಿಹ್ನೆ (।) ಗೀಟು ಮುಕ್ತಾಯದ ಚಿಹ್ನೆ (॥) ಗೀಟುಗಳನ್ನು ಏಕಪ್ರಕಾರವಾಗಿ ಎಲ್ಲಾ ಕಡೆ ಹಾಕಿದೆ.

೧೨. ಪರಿಪೂರ್ಣವಾದ ಕೀರ್ತನೆಯ ಚರಣಗಳನ್ನು ಪ್ರಾಸಾನುಸಾರ ವಾಗಿ ಪ್ರತಿ ಸಾಲನ್ನು ಪ್ರತ್ಯೇಕಿಸಲಾಗಿದೆ. ಕೆಲವು ಚರಣಗಳಲ್ಲಿ ಒಂದೆರಡು ಕಡೆ ಆದಿಪ್ರಾಸ ತಪ್ಪಿದೆ. ಆ ಸಾಲುಗಳನ್ನು ತಿದ್ದಲು ಹೋಗಿಲ್ಲ. ಹಾಗೇ ಇಟ್ಟಿದೆ. ಉದಾ: ಕೀರ್ತನೆ ೮೬ರಲ್ಲಿ ೩ನೇ ಚರಣ ಹೀಗಿದೆ:

ನಿನ್ನಯ ಮಾನಸದಲ್ಲಿ ಶ್ರೀರಾಮನು ।
ಉಲ್ಲಾಸದೊಳು ಶೋಭಿಸುತಿರ್ಪನು ।
ಎನ್ನ ಮಾನಸದಲ್ಲಿ ನೀನೆ ನಿಲ್ಲು ಚಿನ್ಮಯ

ಆದಿಪ್ರಾಸವನ್ನು ಕಾಯ್ದುಕೊಳ್ಳುವ ದೃಷ್ಟಿಯಿಂದ 'ಉಲ್ಲಾಸದೊಳು' ಬದಲಿಗೆ 'ಚೆನ್ನಾಗಿ ತಾ' ಎಂಬ ಪಾಠವನ್ನು ಇಲ್ಲಿ ಬಳಸಬಹುದು. ಆದರೆ ಮೂಲ ಪಾಠ ಹಾಗೇ ಇರಲಿ ಎಂದು ಯಥಾಸ್ಥಿತಿ ಉಳಿಸಿಕೊಂಡು ಬರಲಾಗಿದೆ.

೧೩. ಸಾಮಾನ್ಯವಾಗಿ ಕೀರ್ತನೆಗಳಲ್ಲಿ ಚರಣ ಸಂಖ್ಯೆಗಳು ಬಿಡಿ ಸಂಖ್ಯೆಗಳಲ್ಲಿ ೩, ೫, ೭, ೯. ೧೧ ಇತ್ಯಾದಿ ಬರುತ್ತವೆ. ಆದರೆ ಒಂದೆರಡು ಕಡೆ ಚರಣಗಳು ಸಮಸಂಖ್ಯೆಯಲ್ಲಿವೆ. 'ಗಂಗಾ ಗಂಗಾ' ಎಂದು' (ಕೀ. ೧೨೭) ಎಂಬ ಕೀರ್ತನೆಯಲ್ಲಿ ೪ ಚರಣಗಳಿವೆ. ನಲಿದು ಪೂಜಿಪೆ ನಾನು (ಕೀರ್ತನೆ ೮೭) ದಶಾವತಾರದ ಕೀರ್ತನೆ (ಕೀ. ೩೫)ರಲ್ಲಿ ೧೦ ಚರಣಗಳಿವೆ. ಇವು ಅಪವಾದಗಳೆನ್ನಬಹುದು. ಅವುಗಳನ್ನು ತಿದ್ದದೆ ಹಾಗೇ ಉಳಿಸಿಕೊಳ್ಳಲಾಗಿದೆ. ಉಳಿದೆಲ್ಲಾ ಕೀರ್ತನೆಗಳಲ್ಲಿ ಪಲ್ಲವಿ, ಚರಣ ಸಂಖ್ಯೆ, ಪ್ರಾಸನಿಯಮ ಇತ್ಯಾದಿ ಪರಿಪಾಲನೆಯಾಗಿದೆ.

೧೪. ದಾಸಸಾಹಿತ್ಯ ಇಂದು ಅದ್ವೈತ–ದ್ವೈತ–ವಿಶಿಷ್ಟಾದ್ವೈತ

ಕೀರ್ತನೆಗಳ ಸಂಗಮವಾಗಿದೆ. ಇವು ಮೂರರಲ್ಲೂ ಅದರದೇ ವೈಶಿಷ್ಟ್ಯಗಳಿವೆ. ಭಿನ್ನ ಸಂಪ್ರದಾಯದ ಪರಂಪರೆಗಳಿವೆ. ಇವುಗಳ ತೌಲನಿಕ ಅಧ್ಯಯನ ಮಾಡುವುದು ಅಗತ್ಯವಿದೆ. ಈ ತೌಲನಿಕ ಅಧ್ಯಯನಕ್ಕೆ ಅನುಕೂಲವಾಗುವಂತೆ ಈ ಪರಿಷ್ಕೃತ ೨ನೇ ಮುದ್ರಣವನ್ನು ಸಿದ್ಧಪಡಿಸಿದೆ.

ಕೃತಜ್ಞತೆ:

'ಭಕ್ತಿಗೀತಾವಳಿ' ಗ್ರಂಥ ೧೯೧೯ರಲ್ಲಿ ಹೊಸಕೆರೆ ಚಿದಂಬರಯ್ಯನವರೇ ಬೆಂಗಳೂರಿನ ಬಿಬಿಡಿ ಪವರ್ ಪ್ರೆಸ್‌ನ ವಾಜಪೇಯಂ ವೆಂಕಟಸುಬ್ಬಯ್ಯನವರ ಮೂಲಕ ಪ್ರಕಟಿಸಿದ್ದರು. ೯೦ ವರ್ಷಗಳ ಹಿಂದೆ ಅಚ್ಚಾದ ಈ ಪ್ರತಿ ನೋಡಲೂ ಸಿಗುತ್ತಿರಲಿಲ್ಲ. ಇಂಥ ಅಲಭ್ಯ ಗ್ರಂಥದ ಪ್ರತಿ ಆಕಸ್ಮಿಕವಾಗಿ ಗ್ರಂಥಾಲಯವೊಂದರಲ್ಲಿ ದೊರೆತು ಈಗ ಪರಿಷ್ಕೃತ ಮುದ್ರಣವಾಗಿ ಪ್ರಕಟವಾಗುತ್ತಿದೆ.

ಈ ಕನ್ನಡ ಕೀರ್ತನಗ್ರಂಥವನ್ನು ಪ್ರಕಟಿಸಲು ಹೊಸಕೆರೆ ಚಿದಂಬರಯ್ಯನವರ ಮೊಮ್ಮಗನ ಮಗಳು ಡಾ. ಜಯಂತಿ ಸತೀಶ್ ದಂಪತಿಗಳು ಪ್ರಕಟಿಸಲು ಆರ್ಥಿಕ ನೆರವನ್ನು ನೀಡಲು ಮುಂದೆ ಬಂದಿರುವುದೂ, ಹೊಸಕೆರೆ ಚಿದಂಬರಯ್ಯ ಸಂಸ್ಮರಣ ಟ್ರಸ್ಟ್‌ನವರು ಗ್ರಂಥವನ್ನು ಪ್ರಕಟಿಸುತ್ತಿರುವುದು ಸಂತೋಷದ ಸಂಗತಿ ಆಗಿದೆ. ಮುಂದೆ ಚಿದಂಬರಯ್ಯನವರ ಸಮಗ್ರ ಕೃತಿಗಳೂ ಪ್ರಕಟವಾಗಲು ಟ್ರಸ್ಟಿನ ಈ ಚೊಚ್ಚಲು ಪ್ರಕಟಣೆ ಶುಭಾರಂಭವಾಗಲಿ ಎಂದು ಹಾರೈಸುತ್ತೇವೆ.

'ಭಕ್ತಿಗೀತಾವಳಿ'ಯನ್ನು ಪರಿಷ್ಕರಿಸಿ ಸಂಪಾದಿಸಿ ಕೊಡಲು ಅವಕಾಶ ನೀಡಿದ ಹೊಸಕೆರೆ ಚಿದಂಬರಯ್ಯ ಸಂಸ್ಮರಣ ಟ್ರಸ್ಟ್‌ಗೆ ನಾನು ಆಭಾರಿಯಾಗಿದ್ದೇನೆ. ಈ ಗ್ರಂಥಸಂಪಾದನೆಯ ಕಾರ್ಯದಲ್ಲಿ ಟ್ರಸ್ಟಿನ ಕಾರ್ಯಕಾರೀ ಸಮಿತಿಯವರು ಹಲವು ವಿಧಗಳಲ್ಲಿ ನೆರವಾಗಿದ್ದಾರೆ. ಅವರಿಗೆ ನನ್ನ ವಂದನೆಗಳು.

ಕನ್ನಡ ಶಾಸ್ತ್ರೀಯ ಸಂಗೀತಗಾರರು ಈ ಕೀರ್ತನೆಗಳನ್ನು ಹಾಡುವುದರ ಮೂಲಕ, ಮರೆತುಹೋದ ಕನ್ನಡ ಕೀರ್ತನ ಸಂಪತ್ತನ್ನು ನಾಡಿನ ಜನತೆಗೆ ದೊರಕಿಸುತ್ತಾರೆ ಎಂದು ನಂಬಿದ್ದೇನೆ.

ಬೆಂಗಳೂರು
೧೦-೩-೨೦೧೨

ಪ್ರೊ. ಜಿ. ಅಶ್ವತ್ಥನಾರಾಯಣ
ಸಂಪಾದಕ

ಪ್ರಕಾಶಕರ ಮಾತು

'ಹೊಸಕೆರೆ ಚಿದಂಬರಯ್ಯ ಸಂಸ್ಮರಣ ಟ್ರಸ್ಟ್' ತುಂಬು ಸಂತಸದಿಂದ ಹೊಸಕೆರೆ ಚಿದಂಬರಯ್ಯನವರು ರಚಿಸಿರುವ 'ಭಕ್ತಿಗೀತಾವಳಿ' ಕೃತಿಯನ್ನು ಓದುಗರಿಗೆ ಅರ್ಪಿಸುತ್ತಿದೆ. ಇದು ಟ್ರಸ್ಟ್ ಹೊರತರುತ್ತಿರುವ ಅವರ ಮೊದಲ ಕೃತಿ. ಬಹುಮುಖಿ ಪ್ರತಿಭೆಯ ಹೊಸಕೆರೆ ಚಿದಂಬರಯ್ಯನವರು ಅಧ್ಯಾತ್ಮವನ್ನು ಒಲಿದಿದ್ದರೂ ಅವರು ಶ್ರೇಷ್ಠ ಸಾಹಿತಿಗಳು ಆಗಿದ್ದರು ಎಂಬುದನ್ನು ಮರೆಯುವ ಹಾಗಿಲ್ಲ. ಹಾಗಾಗಿ ಹೊಸಗನ್ನಡ ಗದ್ಯನಿರ್ಮಾಣದ ಕೆಲಸದಲ್ಲಿ ತೊಡಗಿಸಿಕೊಂಡ ಗಣ್ಯರಲ್ಲಿ ಅವರೂ ಒಬ್ಬರು ಎನ್ನುವುದು ಗಮನಾರ್ಹ ಸಂಗತಿ. ಈ ದೃಷ್ಟಿಯಿಂದಲೂ ಅವರ ಕೃತಿಗಳನ್ನು ಅಧ್ಯಯನ ಮಾಡುವ ಅಗತ್ಯವಿದೆ. ಹೊಸಕೆರೆ ಚಿದಂಬರಯ್ಯನವರಿಗೆ ವಿವಿಧ ಬಗೆಯ ಸೃಜನಶೀಲ ಆಸಕ್ತಿಗಳಿದ್ದವು. ಅವರು ಕಾವ್ಯ, ನಾಟಕ, ಕಾದಂಬರಿ, ಜೀವನ ಚರಿತ್ರೆ, ಪ್ರಬಂಧ ಮುಂತಾದ ಅನೇಕ ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಇಲ್ಲಿರುವ ಕೀರ್ತನೆಗಳು ಬೇರೆ ಯಾವುದೇ ಕೀರ್ತನಕಾರರಿಗೆ ಅವರು ಹೆಗಲೆಣೆಯಾಗಿ ನಿಲ್ಲಬಲ್ಲರು ಎಂಬುದನ್ನು ಪುಷ್ಟೀಕರಿಸುತ್ತವೆ. ಹೊಸಕೆರೆ ಚಿದಂಬರಯ್ಯ ಸಂಸ್ಮರಣ ಟ್ರಸ್ಟ್ ಅವರ ಎಲ್ಲಾ ಕೃತಿಗಳನ್ನೂ ಕ್ರಮವಾಗಿ ಮರುಮುದ್ರಿಸುವ ಮತ್ತು ಅವರ ಕೃತಿಗಳ ಗಾಯನವನ್ನು, ಅವರ ಸಾಹಿತ್ಯ ಕೃತಿಗಳ ಬಗೆಗೆ ವಿಚಾರ ಸಂಕಿರಣಗಳನ್ನು ಏರ್ಪಡಿಸುವ ಧ್ಯೇಯದಿಂದ ಒಂದು ಸಮಗ್ರ ಕ್ರಿಯಾಯೋಜನೆಯನ್ನು ರೂಪಿಸಿದೆ.

ಈ ಮೂಲಕ ಹೊಸಕೆರೆ ಚಿದಂಬರಯ್ಯನವರ ಸಾಧನೆ, ಸೇವೆಗಳ ಕುರಿತು ಸಾರ್ವಜನಿಕರ ತಿಳುವಳಿಕೆಯನ್ನು ಹೆಚ್ಚಿಸಿ ಅವರಿಗೆ ಸಲ್ಲಬೇಕಾದ ಸ್ಥಾನವನ್ನು ತಂದುಕೊಡುವ ಉದ್ದೇಶವನ್ನು ಟ್ರಸ್ಟ್ ಇರಿಸಿಕೊಂಡಿದೆ. ಟ್ರಸ್ಟ್‌ನ ಸದಸ್ಯರು ಮತ್ತು ಇತರರು ಈ ಪ್ರಕಟಣೆಗೆ ಮತ್ತು ಇನ್ನಿತರ ಕಾರ್ಯಕ್ರಮಗಳಿಗೆ ಉತ್ಸಾಹಪೂರ್ಣವಾದ ಸ್ವಾಗತವನ್ನು ಕೋರಿದ್ದಾರೆ. ಇದು ನಿಜಕ್ಕೂ ಸಂತೋಷದ ವಿಷಯ. ಪ್ರಮುಖವಾಗಿ ಹೊಸಕೆರೆ ಚಿದಂಬರಯ್ಯನವರ ಕುಟುಂಬದ ಸದಸ್ಯರನ್ನು ಟ್ರಸ್ಟ್ ಈ ಸಂದರ್ಭದಲ್ಲಿ ಅಭಿನಂದಿಸುತ್ತದೆ. ಏಕೆಂದರೆ ಅವರೆಲ್ಲರೂ ಅತ್ಯುತ್ಸಾಹದಿಂದ ಈ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ. ಹೊಸಕೆರೆ ಚಿದಂಬರಯ್ಯ ಅವರ ಮೊಮ್ಮಗನ ಮಗಳಾದ ಡಾ. ಜಯಂತಿ ಹಾಗೂ ಅವರ ಪತಿ ಡಾ. ಟಿ.ಎಲ್. ಸತೀಶ್ ಅವರು ಈ ಕೃತಿಯ ಮುದ್ರಣ ವೆಚ್ಚವನ್ನು ಸಂಪೂರ್ಣವಾಗಿ ವಹಿಸಿಕೊಂಡಿದ್ದಾರೆ. ಮಿಕ್ಕ ಬಂಧುವರ್ಗದವರಿಗೆ ಒಂದು ಮಾದರಿಯನ್ನು ನಿರ್ಮಿಸಿದ್ದಾರೆ. ಅವರ ಔದಾರ್ಯಕ್ಕೆ ಟ್ರಸ್ಟ್ ಹೃತ್ಪೂರ್ವಕ ಕೃತಜ್ಞತೆಯನ್ನು ಸಲ್ಲಿಸುತ್ತದೆ.

'ಭಕ್ತಿಗೀತಾವಳಿ'ಯ ಮೊದಲ ಮುದ್ರಣದ ಪ್ರತಿಯನ್ನು ಪರಿಷ್ಕರಿಸಿ, ಉಪಯುಕ್ತ ಕೃತಿಯಾಗಿ ರೂಪಿಸುವ ಜವಾಬ್ದಾರಿಯನ್ನು ಹೊತ್ತವರು ನಮ್ಮ ನೆಚ್ಚಿನ ಪ್ರೊ. ಜಿ. ಅಶ್ವತ್ಥನಾರಾಯಣ ಅವರು. ನೇರವಾಗಿ ಹೊಸಕೆರೆ ಚಿದಂಬರಯ್ಯನವರ ಕುಟುಂಬದ ಸದಸ್ಯರಲ್ಲದಿದ್ದರೂ, ಚಿದಂಬರಯ್ಯನವರು ಕನ್ನಡಕ್ಕೆ ಮಾಡಿರುವ ಕೆಲಸವನ್ನು ಮೆಚ್ಚಿಕೊಂಡು ಅವರು ಟ್ರಸ್ಟ್‌ನ ಸದಸ್ಯರಾಗಿ, ಸಲಹೆಕಾರರಾಗಿ, ಮಾರ್ಗದರ್ಶಕರಾಗಿದ್ದಾರೆ. ಹೊಸಕೆರೆ ಚಿದಂಬರಯ್ಯನವರ ಬಗೆಗೆ ಇರುವ ಅವರ ಪ್ರೀತಿ ಗೌರವಗಳು ದೊಡ್ಡವು. ಅವರ ಶ್ರಮದಿಂದಾಗಿ ಈ ಕೃತಿ ಅಚ್ಚುಕಟ್ಟಾಗಿ ಹೊರಬಂದಿದೆ. ಅವರ ಮಾಹಿತಿಪೂರ್ಣ ವಿಶ್ಲೇಷಣೆಗಳು ಇಲ್ಲಿವೆ. ಅವರಿಗೆ ಟ್ರಸ್ಟ್ ಗೌರವಪೂರ್ವಕ ಕೃತಜ್ಞತೆಯನ್ನು ಅರ್ಪಿಸುತ್ತದೆ.

ಹೊಸಕೆರೆ ಚಿದಂಬರಯ್ಯನವರ ಕುಟುಂಬಕ್ಕೆ ಆತ್ಮೀಯರಾದ 'ವಿದ್ಯಾಸಾಗರ' ಪ್ರೊ. ಟಿ.ಎಸ್. ಕೃಷ್ಣಮೂರ್ತಿಯವರು ವಿದ್ವತ್ಪೂರ್ಣ ಮುನ್ನುಡಿಯನ್ನು ಬರೆದುಕೊಟ್ಟಿರುತ್ತಾರೆ. ಅದಕ್ಕಾಗಿ ಟ್ರಸ್ಟ್ ವಂದನೆಗಳನ್ನು ಸಲ್ಲಿಸುತ್ತದೆ.


ಈ ಕೃತಿಯನ್ನು ಅಚ್ಚುಕಟ್ಟಾಗಿ ಮುದ್ರಿಸಿರುವ 'ಎಕ್ಸ್‌ಪ್ರೆಸ್ ಪ್ರಿಂಟ್‌ಝೋನ್'ನ ಶ್ರೀ ಎಚ್.ಎಸ್. ಅಚ್ಯುತ ಅವರಿಗೆ ನಮ್ಮ ಆತ್ಮೀಯ ನೆನಕೆಗಳು ಸಲ್ಲುತ್ತವೆ.

'ಭಕ್ತಿಗೀತಾವಳಿ' ಕೃತಿಯನ್ನು ಹೊರತರುವಲ್ಲಿ ಟ್ರಸ್ಟ್‌ನ ಸದಸ್ಯರು ಹಾಗೂ ಮಿತ್ರರು ಹಲವಾರು ರೀತಿಯಲ್ಲಿ ನೆರವಾಗಿದ್ದಾರೆ. ಅವರೆಲ್ಲರಿಗೂ ಕೃತಜ್ಞತೆಗಳು. ಈ ಕೈಂಕರ್ಯದಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕರಿಸಿ ಉಪಕರಿಸಿದ ಎಲ್ಲರಿಗೂ ಕೃತಜ್ಞತೆಗಳು.

ಬೆಂಗಳೂರು
೨೬-೩-೨೦೧೨

ಅಧ್ಯಕ್ಷರು ಹಾಗೂ ಪ್ರಧಾನ ಕಾರ್ಯದರ್ಶಿ
ಹೊಸಕೆರೆ ಚಿದಂಬರಯ್ಯ ಸಂಸ್ಮರಣ ಟ್ರಸ್ಟ್,
ಬೆಂಗಳೂರು

ಅರ್ಪಣೆ



ದಿ|| ಎಚ್. ದೇವಶರ್ಮ



ಶ್ರೀಮತಿ ಎಚ್.ಡಿ. ವನಜ

ಬಾಳನುದ್ದಕ್ಕೂ ಪ್ರೀತಿ ವಾತ್ಸಲ್ಯಗಳಿಂದ
ಸಾಕಿ ಸಲಹಿ ವಿದ್ಯಾವಂತರನ್ನಾಗಿ ಮಾಡಿ
ಜೀವನದ ಹವ್ಯಾಸ–ಉದ್ಯೋಗಗಳಲ್ಲಿ
ಕಾರ್ಯನೈಪುಣ್ಯ–ಶ್ರದ್ಧಾಸಕ್ತಿ ಬೆಳೆಸಿದ
ನಮ್ಮ
ಪೂಜ್ಯ ತಂದೆ–ತಾಯಿಗಳಾದ
ದಿ|| ಎಚ್. ದೇವಶರ್ಮ – ಶ್ರೀಮತಿ ಎಚ್.ಡಿ. ವನಜ
ಇವರಿಗೆ
ಈ ಗ್ರಂಥವನ್ನು ಭಕ್ತಿಪೂರ್ವಕ ಅರ್ಪಿಸಿದ್ದೇವೆ.

ಡಾ. ಜಯಂತಿ ಸತೀಶ್
ಎಚ್.ಡಿ. ರಮೇಶ್

ವಿಷಯಾನುಸಾರ ಕೀರ್ತನೆಗಳ ಸೂಚಿ

ಭಾಗ ೧: ಗಣಪತಿ ಸಂಬಂಧವಾದ ಕೀರ್ತನೆಗಳು (೧–೮)

೧. ಶ್ರೀ ಗಿರಿಜಾತನಯಾ ೧
೨. ಲಂಬೋದರ ಅಂಬಿಕಾಕುಮಾರ ೨
೩. ಗಣಪತಿಗೆರಗುವೆ ೩
೪. ಗಿರಿಜಾತನಯ ಪರಿಹೃತಮಾಯ ೪
೫. ಪೂಜಿಸುವೆನು ನಿನ್ನ ೫
೬. ಪೊರೆವುದೆನ್ನ ೬
೭. ಆರೆನ್ನರಕ್ಷಿಸುವರು ೭
೮. ವಿಘ್ನೇಶ ವಿಘ್ನರಾಜ ೮

ಭಾಗ ೨: ಶಾರದಾ ಸಂಬಂಧವಾದ ಕೀರ್ತನೆಗಳು (೯–೧೪)

೯. ಭಾರತೀದೇವಿಗೆರಗುವೆನು ೯
೧೦. ನಿನ್ನ ನಂಬಿದೆ ಶಾರದೆ ೧೦
೧೧. ದೇವಿ ಶಾರದೆ ೧೧
೧೨. ಶರಣು ಶಾರದೆ ೧೨
೧೩. ಶಾರದಾದೇವಿ ೧೩
೧೪. ಸರಸಿಜಾಸನನ ರಾಣಿ ೧೪

ಭಾಗ ೩: ಗುರು ಸಂಬಂಧವಾದ ಕೀರ್ತನೆಗಳು (೧೫–೨೨)

೧೫. ಗುರುಚರಣಕೇಸರಿ ೧೫
೧೬. ಗುರುದೇವ ನಿನ್ನ ೧೬
೧೭. ಏನೆಂದು ವರ್ಣಿಸಲಿ ಸದ್ಗುರು ೧೭
೧೮. ನಿನಗಾರು ಸರಿಯೋ ೧೮
೧೯. ಭಕ್ತಿಭಿಕ್ಷವ ಕೊಡೊ ೨೦
೨೦. ಗುರುರಾಜ ಎನ್ನಯ ೨೨
೨೧. ಗುರುವರ ನಿನ್ನಡಿಗಳಿಗೆ ೨೩
೨೨. ಗುರುರಾಜ ಬ್ರಹ್ಮರೂಪ ೨೪

ಭಾಗ ೪: ಶ್ರೀ ಕೃಷ್ಣ ಸಂಬಂಧವಾದ ಕೀರ್ತನೆಗಳು (೨೩-೫೨)

೨೩.	ಇನ್ನ್ಯಾರಿಗೆ ನಾ ಶರಣೆನ್ನಲಿ	....	೨೫
೨೪.	ನೀ ಕೈಬಿಡೆ ಕಾಯುವರಾರು	....	೨೬
೨೫.	ಎಂದಿಗೆ ತೋರುವೆಯೋ	....	೨೭
೨೬.	ಈಗೆನಗೆ ಕಾಣಿಸು ನೀ	....	೨೮
೨೭.	ರಾಧಿಕಾ ಮನೋವಲ್ಲಭ	....	೨೯
೨೮.	ಎನಗೆ ನೀ ಗತಿ	....	೩೦
೨೯.	ಎಷ್ಟು ಹೇಳಲಿ ಕೃಷ್ಣ ನಿನ್ನಯ	....	೩೧
೩೦.	ನಿನ್ನನಾಶ್ರಯಿಸುವೆ ಗೋಕುಲೇಶ	....	೩೨
೩೧.	ಒಮ್ಮೆಯಾದರೂ ಆ ಕುಡಿ ನೋಟವು	....	೩೩
೩೨.	ಆಟಪಾಟಂಗಳ ತೋರಿಸೋ	....	೩೪
೩೩.	ವರವನನುಗ್ರಹಿಸೋ	....	೩೫
೩೪.	ಶರಣು ಶರಣು ಶರಣು ಪರಮ	....	೩೬
೩೫.	ಹಾಡಿ ಹೊಗಳಲೆಷ್ಟೋ ಸುಖವದು	....	೩೭
೩೬.	ತೋರಬಾರದೆ ಚಾರುಮುಖವ	....	೩೯
೩೭.	ಏನಿದು ಪೇಳ್ಭಕ್ತಪರಾಧೀನತೆ	....	೪೦
೩೮.	ಇದು ಚಿತ್ರವೇ ಸರಿ	....	೪೧
೩೯.	ಎಂದಿಗೆ ನಾನೀ ಸುಖವನನುಭವಿಸುವೆನೊ	....	೪೨
೪೦.	ನಿನ್ನನೊಲಿಸಿಕೊಳ್ಳಲಾರೆನೊ	....	೪೩
೪೧.	ಸರಿಯಲ್ಲವೊ ಕಣ್ಣಾಮುಚ್ಚಾಲೆಯು	....	೪೪
೪೨.	ಕಮಲಾನಾಥ ಹರಿಗೋವಿಂದ	....	೪೫
೪೩.	ಶ್ರೀಪತಿ ನೀ ಗತಿ	....	೪೭
೪೪.	ಹೊಗಳಬಲ್ಲೆನೆ ಶ್ರೀ ಕೃಷ್ಣ ನಿನ್ನ	....	೪೮
೪೫.	ಇನ್ನೆಂತು ನಾ ಪಾರಾಗುವೆ	....	೪೯
೪೬.	ನೀನೆನಗಿದನರುಹಯ್ಯ	....	೫೦
೪೭.	ಅವತರಿಸುವನು	....	೫೧
೪೮.	ಬಂದನೇ ಭಗವಂತನು	....	೫೨
೪೯.	ಏನಿದಚ್ಚರಿಯೋ ಶ್ರೀ ಹರಿ	....	೫೩
೫೦.	ಗರುಡಗಮನ	....	೫೪
೫೧.	ಜಯಜಯ ದೇವಾಧಿದೇವ	....	೫೫

೫೨. ಕೇಶವಾ ಮಾಧವಾ ಪಾಲಿಸೈ ೫೬

ಭಾಗ ೫: ಶ್ರೀ ಲಕ್ಷ್ಮೀ ಸಂಬಂಧವಾದ ಕೀರ್ತನೆಗಳು (೫೩–೫೮)

೫೩. ಪರಿಪಾಲಿಪುದೆನ್ನನು ೫೭
೫೪. ಪರಿಪೂರ್ಣವಾದ ಪ್ರೇಮದಿಂದ ೫೯
೫೫. ಮಾತೇ ಮಂಗಳಾಂಗಿ ೬೦
೫೬. ನೀನೇ ತಾಯಿ ಎನಗೆ ೬೧
೫೭. ಕಮಲಾಕ್ಷಿ ಪಾಲಿಸೆನ್ನನು ೬೨
೫೮. ಕಮಲನಯನೆ ಕಮಲಸದನೆ ೬೩

ಭಾಗ ೬: ಶ್ರೀರಾಮ ಸಂಬಂಧವಾದ ಕೀರ್ತನೆಗಳು (೫೯–೮೨)

೫೯. ಮರೆಯದೆ ಇರುವಂತೆ ಮಾಡೊ ೬೪
೬೦. ಎಷ್ಟು ದಯಾಳುವೋ ನೀನು ೬೫
೬೧. ದಾಶರಥೆ ದಯೆ ತೋರಿಸು ೬೬
೬೨. ಚರಣಯುಗವ ತೋರು ನನಗೆ ೬೭
೬೩. ದಾಶರಥೆ ರಾಮಚಂದ್ರ ೬೮
೬೪. ಕಾಯ್ವೈ ಕರುಣಾಕರ ೬೯
೬೫. ಇದು ನಿನಗುಚಿತವೆ ೭೦
೬೬. ಇದಕೆ ಸಂಶಯವಿಲ್ಲ ೭೧
೬೭. ರಾಮ ಬಾರೋ ರಘುನಂದನ ೭೩
೬೮. ಶ್ರೀರಾಮಚಂದ್ರ ದೇವ ೭೪
೬೯. ಯಾತಕುಪೇಕ್ಷೆಯ ಮಾಡುವೆ ೭೫
೭೦. ಶ್ರೀರಾಮ ರಾಕ್ಷಸ ೭೬
೭೧. ಜನಕಜಾವರಾ ೭೭
೭೨. ನಾಮಭಿಕ್ಷವೀಯೋ ೭೮
೭೩. ಮಂತ್ರವೆಂದು ಸಿದ್ಧಿಸುವದೊ ೭೯
೭೪. ಆ ರಮಣೀಯ ರೂಪ ೮೦
೭೫. ಇದಕೀಗ ನಾನೇನ ಮಾಡಲಯ್ಯ ೮೧
೭೬. ದಯಮಾಡಿ ಕೊಡೊ ಎನ್ನಿಷ್ಟವ ೮೨
೭೭. ದಾಸ್ಯವನೇ ಬೇಡುವೆ ನಿನ್ನ ೮೩

೭೮. ಚಿತ್ತದಲ್ಲಿ ನೀ ೮೪
೭೯. ಶರಣಾಗತ ಪರಿಪಾಲಕ ೮೫
೮೦. ಶ್ರೀರಾಮ ರಾಮಭದ್ರ ೮೬
೮೧. ಎಷ್ಟು ಸುಂದರ ಎಷ್ಟು ಮಧುರ ೮೭
೮೨. ಜೋಜೋಜೋ ನೀಲಮೇಘ ಸಂಕಾಶ ೮೮

ಭಾಗ ೭: ಶ್ರೀ ಮಾರುತಿ ಸಂಬಂಧವಾದ ಕೀರ್ತನೆಗಳು (೮೩–೮೯)

೮೩. ನಿನ್ನ ಶೌರ್ಯವನೇ–ನ ಹೇಳಲಿ ೮೯
೮೪. ಎಷ್ಟೆಂದು ವರ್ಣಿಸಲಿ ೯೦
೮೫. ಯಾಕೆ ನಿರ್ದಯನಾದೆ ಮಾರುತಿ ೯೧
೮೬. ಮಾರುತೀ ಪೊರೆ ನೀಂ ೯೨
೮೭. ನಲಿದು ಪೂಜಿಪೆ ನಾನು ೯೩
೮೮. ವಂದಿಪೆ ಮನದಲಿ ೯೪
೮೯. ಅಂಜನಾನಂದದಾತ ೯೫

ಭಾಗ ೮: ಶ್ರೀ ಶಿವ ಸಂಬಂಧವಾದ ಕೀರ್ತನೆಗಳು (೯೦–೧೧೬)

೯೦. ಜನ್ಮಗಳನೆನಗೆ ಕೊಡು ೯೬
೯೧. ಮನುಜನ್ಮದಲಿ ಹಾಕಿದ ಮಾತ್ರಕೇ ೯೭
೯೨. ಪ್ರಮಥ ಗಣೇಶ್ವರ ಮಹೇಶ ೯೮
೯೩. ತ್ರಿಪುರದಾಹಕವೇಷವ ೯೯
೯೪. ಶಂಕರಾ ನಿನ್ನ ಸೋಂಕಿನ ೧೦೦
೯೫. ಗಿರೀಶಾ ಗೌರೀ ಪ್ರಾಣಾಧೀಶ ೧೦೧
೯೬. ಪೊರೆ ಬೇಗ ಹರ ಈಗ ೧೦೨
೯೭. ಬಹುಚಿತ್ರವೀ ನಿನ್ನ ಮಹಿಮೆ ೧೦೩
೯೮. ಶ್ರೀ ಶಂಕರಾ ಕರುಣಾಶರಧೆ ೧೦೪
೯೯. ಎಂಥಾ ದಯಾವಂತನೊ ನೀ ೧೦೫
೧೦೦. ನೀನೆಂದು ನನ್ನ ಮುಂದೆ ೧೦೬
೧೦೧. ತಿಳಿವೆನೆಂತು ನಾ– ಚಂದ್ರಚೂಡ ನಿನ್ನ ೧೦೭
೧೦೨. ನಿನ್ನ ಬಿಟ್ಟು ೧೦೮
೧೦೩. ವರವನೆನಗಿದೊಂದನೀ ೧೦೯

೧೦೪. ತಿಳಿಯುವದಾಗದೋ ೧೧೦
೧೦೫. ಕರುಣದಿಂದೆನ್ನ ೧೧೧
೧೦೬. ಸೆರಗನೊಡ್ಡಿ ನಾನು ಬೇಡಕೊಳ್ಳುವೆನು ೧೧೨
೧೦೭. ಬೇಗ ನನ್ನ ಬಳಿಗೆ ಬಾರೊ ೧೧೩
೧೦೮. ನಿನ್ನನೇನೂ ಬೇಡುವುದಿಲ್ಲ ೧೧೪
೧೦೯. ಶಂಕರ ಚಂದ್ರಚೂಡ ೧೧೫
೧೧೦. ಕ್ಷಮಿಸೆನ್ನಯ ಅಪರಾಧವನೀಗ ೧೧೬
೧೧೧. ಗಂಗಾಧರ ಶಂಕರಹರ ೧೧೭
೧೧೨. ಶಿವ ಶಿವ ಗಿರಿಜಾ ಸಹಾಯ ೧೧೮
೧೧೩. ಈಶಾ ವಿಶ್ವೇಶ ಪೊರೆ ೧೧೯
೧೧೪. ಶ್ರೀ ಗೌರೀ ಪ್ರಾಣನಾಥ ೧೨೦
೧೧೫. ಶಂಭೋ ಗಿರಿಜಾರಮಣ ೧೨೧

ಭಾಗ ೯: ಶ್ರೀ ಗೌರೀ ಸಂಬಂಧವಾದ ಕೀರ್ತನೆಗಳು (೧೧೬–೧೨೫)

೧೧೬. ಪಾಲಿಸೆನ್ನನೀಗ ಪಾರ್ವತಿ ೧೨೨
೧೧೭. ಚರಣಯುಗವ ೧೨೩
೧೧೮. ಪೊರೆ ಕೃಪಾಕರೆ ಪಾರ್ವತಿ ೧೨೪
೧೧೯. ನೀನೆನ್ನ ಕಣ್ಮುಂದಿರುತ ೧೨೫
೧೨೦. ಸೆರಗೊಡ್ಡಿ ಬೇಡುವೆನು ೧೨೬
೧೨೧. ಎಂಥಾ ಮಹಿಮೆಯೇ ೧೨೭
೧೨೨. ನಿನಗೆ ಸಮಾನರುಂಟೆ ೧೨೮
೧೨೩. ಪಾಲಿಸೆನ್ನ ಹಿಮಗಿರೀಂದ್ರ ೧೨೯
೧೨೪. ಇದುಯೇನು ಮಹಿಮೆ ಮಾತೆ ೧೩೯
೧೨೫. ಗಿರಿರಾಜ ಪ್ರೇಮಪುತ್ರೀ ೧೩೧
೧೨೬. ಶ್ರೀಶೈಲ ಸಂಭವೆ ಸುವೈಭವೆ ೧೩೨

ಭಾಗ ೧೦: ಶ್ರೀ ಗಂಗಾ ಸಂಬಂಧವಾದ ಕೀರ್ತನೆಗಳು (೧೨೭–೧೩೧)

೧೨೭. ಗಂಗಾ ಗಂಗಾ ಎಂದು ೧೩೩
೧೨೮. ಎಂದು ನಿನ್ನ ಪಾದವನ್ನಾ ೧೩೪
೧೨೯. ಭಾಗೀರಥಿಯೆ ಬಾಗಿ ವಂದಿಸುವೆ ೧೩೫

೧೩೦. ಗಂಗಾದೇವಿ ನಮೋ ೧೩೬

೧೩೧. ಕಾಶೀಪ್ರಾಂತ ಪ್ರವಾಹೀ ೧೩೭

ಭಾಗ ೧೧: ಶ್ರೀ ದತ್ತಾತ್ರೇಯ ಸಂಬಂಧವಾದ ಕೀರ್ತನೆಗಳು (೧೩೨–೧೩೬)

೧೩೨. ಬೇಡುವೆನ್ನೈ ಶಾಂತಿಯನ್ನು ೧೩೮

೧೩೩. ಭಜಿಸುವೆನು ಸಂತತ ೧೩೯

೧೩೪. ಪಾಲಿಸೆನ್ನ ದತ್ತಮುನಿಯೆ ೧೪೦

೧೩೫. ರಾಜೇಂದ್ರ ದತ್ತದೇವನಿಗೆ ೧೪೧

೧೩೬. ಚಿತ್ತ ಜಯವನೀಯವಂಥ ೧೪೨

ಭಾಗ ೧೨: ಶ್ರೀ ಸೂರ್ಯ ಸಂಬಂಧವಾದ ಕೀರ್ತನೆಗಳು (೧೩೭–೧೪೧)

೧೩೭. ಕರುಣದಿಂದ ಪೊರೆವುದೆನ್ನ ೧೪೩

೧೩೮. ಇಷ್ಟಾರ್ಥವನು ನೀಡು ೧೪೪

೧೩೯. ಸೆರೆಗೊಡ್ಡಿ ನಾ ಶರಣೆಂಬುವೆ ೧೪೫

೧೪೦. ಆದಿತ್ಯನೆ ನಮಿಪೆ ೧೪೬

೧೪೧. ಶರಣರ ಕಾಮಧೇನು ೧೪೭

ಭಾಗ ೧೩: ಮನಸ್ಸಿಗೆ ಉಪದೇಶ ಸಂಬಂಧವಾದ ಕೀರ್ತನೆಗಳು (೧೪೨–೧೫೨)

೧೪೨. ಮನವೇ ಮನವೇ ೧೪೮

೧೪೩. ಇದು ನನ್ನದೆಂದು ನಂಬಿ ೧೪೯

೧೪೪. ಮನವೆ ನೀನು ಹೆದರಬೇಡ ೧೫೦

೧೪೫. ಹೀಗಿರು ನೀನೀಗ ಮನವೆ ೧೫೧

೧೪೬. ಕೇಳೈ ನಾ ಹೇಳುವೆ ೧೫೨

೧೪೭. ಹರಿಶರಣೆಂದೆನು ಮನವೆ ೧೫೩

೧೪೮. ನೀನೇತಕೆ ನಾನೆಂಬುವೆ ೧೫೪

೧೪೯. ಹುಡುಕಬಾರದೆ ಮೃಡನ ಪಾದವ ೧೫೫

೧೫೦. ಸಾಧಿಸು ಮನವೇ ನೀ ೧೫೬

೧೫೧. ಯಾರಿಗೆ ಹೇಳಲಿ ಗೋಳ ೧೫೭

೧೫೨. ಸಪ್ತರಾಗಮಾಲಿಕೆ ೧೫೯

* * *

ಹೊಸಕೆರೆ ಚಿದಂಬರಯ್ಯ ವಿರಚಿತ ಕೀರ್ತನೆಗಳು

ಭಕ್ತಿಗೀತಾವಳಿ

ಭಾಗ ೧:
ಗಣಪತಿ ಸಂಬಂಧವಾದ ಕೀರ್ತನೆಗಳು (೧-೮)

೧. ಶ್ರೀ ಗಿರಿಜಾತನಯಾ ಮಹೋದಯಾ

(ಧಾಟಿ: ದೇಮಲದಿವ್ಯಮತಿ । ಸರಸ್ವತಿ ।)

ರಾಗ: ಹಿಂದೂಸ್ತಾನಿ ತೋಡಿ ತಾಳ: ಏಕತಾಳ

ಶ್ರೀ ಗಿರಿಜಾತನಯಾ ಮಹೋದಯಾ ।
ಶ್ರೀ ಗಿರಿಜಾತನಯಾ ॥ ॥ ಪ ॥

ಭಾಗವತಪ್ರಿಯ । ಭೋಗಿಜನಾಶ್ರಯ ।
ಬಾಗಿ ನಮಿಸುವೆನಯ್ಯಾ । ಜೀಯಾ ॥ ॥ ಅ.ಪ. ॥

ಸುರವರಪೂಜಿತ । ವರಸಿದ್ಧಿಸಂಯುತ ।
ಶರಣಪಾಲನನಿರತ । ವಿಖ್ಯಾತಾ ॥ ॥ ೧ ॥

ಪಾಶಾಂಕುಶಧರ । ದಾಸಸಂಕಟಹರ ।
ಈಶಕುವರ ಸುಂದರ । ಸುಧೀರ ॥ ॥ ೨ ॥

ಮೋದಕ ಸಹಿತ । ಬಾಧಕರಹಿತ ।
ವೇದವಚನವಿನುತ । ಪುನೀತ ॥ ॥ ೩ ॥

ರಕ್ತಮಾಲ್ಯಾಂಬರಾ । ಸಕ್ತದೇವ ಗುರು ।
ಭಕ್ತಿದಾನಚತುರ । ದ್ವೈಮಾತುರ ॥ ॥ ೪ ॥

ಏಕವದನಗಣಾ । ನೀಕವಿಭೂಷಣ ।
ಭೀಕರರಿಪುಹರಣ । ಚಿದ್ಘನ ॥ ॥ ೫ ॥

* * *

೨. ಲಂಬೋದರ ಅಂಬಿಕಾಕುಮಾರ

(ಧಾಟಿ: ಕಮಲಾಂಬ ನಾ ಚಿಂತದೀರ್ಚವಮ್ಮ)

ರಾಗ: ಕಾನಡ ತಾಳ: ಏಕತಾಳ

ಲಂಬೋದರ । ಅಂಬಿಕಾಕುಮಾರ ।
ಶಂಭುಸಂಭವ । ನಂಬಿದೆ ನಿನ್ನ ॥ ॥ ಪ ॥

ವಿಘ್ನಾಧಿರಾಜ । ವಿಘ್ನಗಳನ್ನು ।
ಭಗ್ನವಮಾಡಿ । ಪ್ರಜ್ಞೆಯನೀಯೋ ॥ ॥ ೧ ॥

ಶುಭ್ರವಸ್ತ್ರಧರ । ಸುಭ್ರು ಎನ್ನಮನದ ।
ವಿಭ್ರಮವಕಳೆದು । ಶುಭ್ರವಾಗಿ ಮಾಡೋ ॥ ॥ ೨ ॥

ಧರಣಿಗೆ ನಾಲ್ಕು । ಪುರುಷಾರ್ಥಗಳ ।
ವರವೀಯೇ ನಾಲ್ಕು । ಕರಗಳನುಳ್ಳ ॥ ॥ ೩ ॥

ಕರಿಕರ್ಣಗಳ । ನೆರೆಬೀಸಿ ಎನ್ನ ।
ದುರಿತಕೀಟವ । ಭರದಿಂದೋಡಿಸೊ ॥ ॥ ೪ ॥

ಶಶಿವರ್ಣ ನೀ । ನೊಸೆದೆನ್ನೊಳು ।
ಅಸಮಾನವಾಗಿ । ಎಸೆವಂತೆ ಮಾಡೊ ॥ ॥ ೫ ॥

ರವಿತೇಜ ಎನ್ನ । ಕವಿದಿರುವಂಥ ।
ಭವದುಃಖತಮವ । ಜವದಿಂದ ನೀಗೋ ॥ ॥ ೬ ॥

ರತ್ನಗರ್ಭನೆ ಚಿ । ದ್ರತ್ನ ನಿನ್ನ ಪದ ।
ರತ್ನವನ್ನು ಕಾಂಬ । ಯತ್ನವನ್ನು ಗೈಸೋ ॥ ॥ ೭ ॥

* * *

೩. ಗಣಪತಿಗೆರಗುವೆ ನಾನು

(ಧಾಟಿ: ಗರಪುರನಾಯಕ ಪಾಹಿ)

ರಾಗ: ಯಮನ್ ಕಲ್ಯಾಣಿ ತಾಳ: ಚತುರಶ್ರ ಏಕತಾಳ

ಗಣಪತಿಗೆರಗುವೆ ನಾ--ನು ವಿನಯದಿ ॥ ॥ ಪ ॥

ಮೂರು ಲೋಕಕಾಧಾರನೆಂದು ನಿನ್ನ ।
ಸೇರಿದವರ ಕಾಪಾ--ಡುವ ॥ ॥ ೧ ॥

ಶರಣು ಬಂದವರ । ದುರಿತವ ನೀಗುತ ।
ಪರಮಪ್ರೀತಿಯ ತೋ--ರುವ ॥ ॥ ೨ ॥

ಇಚ್ಛಾಪೂರ್ತಿಯ । ಮಾಡಿ ಮಾಡುತಲಿ ।
ಇಚ್ಛೆಯನೆಲ್ಲಾ ನೀ--ಗುವ ॥ ॥ ೩ ॥

ಹೆಸರು ಹೇಳಿದರೆ । ಸರ್ವಸಿದ್ಧಿಗಳು ।
ವಶವಪ್ಪಂದದಿ ಮಾ--ಡುವ ॥ ॥ ೪ ॥

ಸುರನರರಿಂದಲಿ । ಪರಿಚರ್ಯೆಗೊಳ್ಳುತ ।
ವರಚಿತ್ರಪ್ರಭೆಯನು ಬೀ--ರುವ ॥ ॥ ೫ ॥

* * *

೪. ಗಿರಿಜಾತನಯ

(ಧಾಟಿ: ತುಮಬಿನಮೇಂ ಕೇನಕಬರಲೇ)

ರಾಗ: ಜಂಗಲ್ ತಾಳ: ಏಕತಾಳ

ಗಿರಿಜಾತನಯ । ಪರಿಹೃತಮಾಯ ।
ಶರಣಸಹಾಯ । ಪಾಲಿಸು ಜೀಯ ॥ ॥ ಪ ॥

ಪುರಗಳನುರುಹುವ । ಭರದಲಿಮೊದಲೇ ।
ಹರನಿಂ ಪೂಜೆಯ । ಪಡೆದಿರುವ ॥ ॥ ೧ ॥

ಬಲಿಯನು ಬಲದಿಂದ । ತುಳಿಯುವ ಕಾಲದಿ ।
ನಲವಿಂ ಹರಿಯೆ । ಸ್ತುತಿಸಿರುವ ॥ ॥ ೨ ॥

ಸುರರಿಪುಶಿರವನು । ತರಿಯುವ ಕಾಲದಿ ।
ಗಿರಿಜೆಗನುಗ್ರಹ । ತೋರಿರುವ ॥ ॥ ೩ ॥

ಲೋಕಾನೀಕವ । ಸೃಷ್ಟಿಪಕಾಲದಿ ।
ಲೋಕೇಶನು ಶರ । ಣೆಂದಿರುವ ॥ ॥ ೪ ॥

ಧರಣಿಯ ಭಾರವ । ಹೊರುವಸಮಯದಲಿ ।
ಉರಗಪತಿಯು ತಲೆ । ಬಾಗಿರುವ ॥ ॥ ೫ ॥

ಮೂರುಲೋಕಂಗಳ । ಗಾರುಗೆಡಿಸಲೆಂದು ।
ಮಾರನು ದೈನ್ಯವ । ತೋರಿರುವ ॥ ॥ ೬ ॥

ಭಕ್ತಿದಾತ ಚಿ । ದ್ಭಕ್ತಿಯೊಡೆಯನೆಂದು ।
ಭಕ್ತಿಯಿಂದೆಲ್ಲರೂ । ಸೇವಿಸುವ ॥ ॥ ೭ ॥

* * *

೫. ಪೂಜಿಸುವೆನು ನಿನ್ನ

(ಧಾಟಿ: ನಂಬಿದೆ ನಂಬಿದೆ ಅಂಬುಜಾಕ್ಷನೆ ನಿನ್ನ)

ರಾಗ: ಖರಹರಪ್ರಿಯ ತಾಳ: ತ್ರಿಶ್ರ ಛಾಪು

ಪೂಜಿಸುವೆನು ನಿನ್ನ । ಮೂಜಗದೊಡೆಯನೆ ॥ ॥ ಪ ॥

ಪೂಜಿಸಿದರೆ ವಿಘ್ನ । ರಾಜಿಯ ಕಳೆವನೆ ॥ ॥ ಅ.ಪ. ॥

ಸುರನದಿಜಲವನು । ಸುರಿಯುತ ನಿನ್ನಯ ।
ಶರಿರವ ತೊಳೆಯುವೆ । ಕರಿವರವದನನೆ ॥ ॥ ೧ ॥

ಜರತಾರಿಯುಡಿಗೆಯ । ನೆರಿಹಿಡಿದುಡಿಸುವೆ ।
ಭರದಿ ಕಿರೀಟವನು । ಶಿರದ ಮೇಲಿರಿಸುವೆ ॥ ॥ ೨ ॥

ಭಾಸುರಹಾರದಿ । ಭೂಷಣಗೊಳಿಸುವೆ ।
ಕೇಸರಿಗಂಧವ । ಪೂಸುವೆ ನಿನಗೆ ॥ ॥ ೩ ॥

ಗರಿಕೆಯ ಮುಡಿಸುವೆ । ಪರಿಮಳಧೂ--ಪವ ॥
ಹರುಷದಿ ಹಾಕುತ । ಪರಿಚರ್ಯೆ ಮಾಡುವೆ ॥ ॥ ೪ ॥

ಕಡುಬು ಕಜ್ಜಾ--ಯವ । ಎಡೆಗೆ ನಾ ಬಡಿಸುವೆ ।
ಬಿಡದೆ ಪಾನೀ--ಯವ । ಕುಡಿಸುವೆ ನಿನಗೆ ॥ ॥ ೫ ॥

ಆರತಿಯೆತ್ತುವೆ । ಕಾರುಣ್ಯಮೂರ್ತಿಗೆ ।
ಬಾರಿಬಾರಿಗೆ ನಮ । ಸ್ಕಾರವ ಹಾಕುವೆ ॥ ॥ ೬ ॥

ಅನುದಿನವೆನ್ನನೆ । ಮನೆಮಾಡಿಕೊಳ್ಳೆಂದು ।
ಮನದಲಿ ಬೇಡುವೆ । ಚಿನುಮಯ ಮೂರುತಿ ॥ ॥ ೭ ॥

* * *

೬. ಪೊರೆವುದೆನ್ನ ಕರಿವರಾನನ

(ಧಾಟಿ: ಧನ್ಯನಾದೆನುಡುಪಿಕೃಷ್ಣನ)

ರಾಗ: ಬೇಹಾಗ್ ತಾಳ: ರೂಪಕ

ಪೊರೆವುದೆನ್ನ । ಕರಿವರಾನನ । ನೀನೀಗ ಬಂದು ॥ ಪ ॥

ಪೊರೆವುದೆನ್ನ । ಕರಿವರಾನನ ।
ಹರಿಹರ ಭೂ । ಸುರವರಾರ್ಚಿತ ॥
ಶರಣು ಬಂದು । ದೈನ್ಯದಿಂದ ।
ಸೆರೆಗನೊಡ್ಡಿ । ಬೇಡಿಕೊಂಬೆ ॥ ॥ ಅ.ಪ. ॥

ಶಶಿಯ ಸೊಕ್ಕ ಮುರಿದರೇನು ।
ಕೊಸರಿಕೊಸರು ತೆನ್ನೊಳಿರುವ ॥
ಶಶಿಯಮೂಲವಾದ ಮನದ ।
ಹೆಸರನಳಿಸು ಭಲರೆ ದೇವ ॥ ॥ ೧ ॥

ಇಲಿಯು ಮನದ ವೇಷವನ್ನು ।
ತಳೆಯುತೆನ್ನೊಳಡಗಿಕೊಂಡು ॥
ಬಲಿತು ಚೇಷ್ಟೆ ಮಾಡುತಿಹುದು ।
ಎಳೆದುಕೊಂಡದನೇರು ಧೀರ ॥ ॥ ೨ ॥

ಉರಗಮುಮನವಾಗಿ ನನ್ನ ।
ಶರೀರವೆಂಬ ಹುತ್ತದಲ್ಲಿ ॥
ಮೊರೆಯುತಿರುವುದದನು ಕಟಿಗೆ ।
ಸರಿದು ಕಟ್ಟು ಚಿದ್ವಿಲಾಸ ॥ ॥ ೩ ॥

* * *

೭. ಆರೆನ್ನ ರಕ್ಷಿಸುವರು

(ಧಾಟಿ: ಕಮಲಾಂಬ ನಾ ಚಿಂತದೀರ್ಚವಮ್ಮ)

ರಾಗ: ಕಲ್ಯಾಣಿ ತಾಳ: ಆದಿತಾಳ

ಆರೆನ್ನರಕ್ಷಿಸುವರು । ನಿನ್ನೊಬ್ಬನ ಹೊರತಿ (ನ್ನಾ) ॥ ॥ ಪ ॥

ಇನ್ನಾರೆನ್ನನು ರಕ್ಷಿಸಬಲ್ಲರು ।
ನಿನ್ನಯ ಬೆಂಬಲದಿಂದೀಜಗವನು ॥
ಮುನ್ನಮಾಯೆ ತಾ ಹಡೆದಿರುವಾಗ ।
ಸನ್ನುತಮೂರುತಿ ಕೃಪಾಳು ಗಣಪತಿ ॥ ॥ ಅ.ಪ.॥

ಭೇದಾಭೇದಗಳಿಲ್ಲದೆ ಸರ್ವ ।
ಕ್ಕಾದಿಯಾಗಿ ಹೃದಯಾಂತರಾಳವನು ॥
ಮೋದದಿ ಬೆಳಗುತ ನಿರ್ವಿಕಲ್ಪದ ಸ ।
ಮಾಧಿಗೆ ನಿಲುಕುವ ನಿನ್ನಬಿಟ್ಟರಿ (ನ್ನಾ) ॥ ॥ ೧ ॥

ರವಿಶಶಿವೈಶ್ವಾನರ ಪ್ರಮುಖರಿಗೆ ।
ಸುವಿಮಲತೇಜವನಿತ್ತು ಬೆಳಗುತ ॥
ಅವಿರತತೇಜಃಪುಂಜನಾದ ನೀಂ।
ಭವದುಃಖೌಘವ ಹೋಗಿಸದಿರಲಿ (ನ್ನಾ) ॥ ॥ ೨ ॥

ನಿನ್ನಾಜ್ಞಾಬಲದಿಂದಲೆ ಭೂಮಿಯ ।
ಪನ್ನಗನಾಥನು ಹೊತ್ತುಕೊಂಡಿಹನು ॥
ನಿನ್ನಿಂದೆಲ್ಲವು ತುಂಬಿಕೊಂಡಿರುವ ।
ದಿನ್ನೆನ್ನನು ನೀಂ ಬಿಡದಿರು ಚಿನ್ಮಯ ॥ ॥ ೩ ॥

* * *

೮. ವಿಘ್ನೇಶ ವಿಘ್ನರಾಜ

(ಧಾಟಿ: ನೀನಾಮ ರೂಪಮುಲಕು)

ರಾಗ: ಸೌರಾಷ್ಟ್ರ ತಾಳ: ಏಕತಾಳ

ವಿಘ್ನೇಶ ವಿಘ್ನರಾಜ ವಿಘ್ನಹರಣ ಮಂಗಳಂ ॥ ॥ ಪ ॥

ಅಮರೇಂದ್ರ--ವಿನುತಪಾದ
ಪ್ರಮಥಾದಿ-ಗಣವಿನೋದ ॥ ॥ ೧ ॥

ದುರಿತೌಘ--ವಿಪಿನದಾವ ।
ಶರಣಾರ್ಥಿ--ಜನರಕಾವ ॥ ॥ ೨ ॥

ಭಕ್ತಿ ವಿ--ರಕ್ತಿಯೀವ ।
ಭಕ್ತೇಡ್ಯ--**ಚಿತ್ಸ್ವಭಾವ** ॥ ॥ ೩ ॥

* * *

ಭಾಗ ೨:
ಶಾರದಾ ಸಂಬಂಧವಾದ ಕೀರ್ತನೆಗಳು (೯–೧೪)

೯. ಭಾರತೀದೇವಿಗೆರಗುವೆನು

(ಧಾಟಿ: ಪಾಲಿಸೈ ಶ್ರೀ ಶಾರದೇಸತತಂ)

ರಾಗ: ಕೇದಾರ ತಾಳ: ಆದಿತಾಳ

ಭಾ–ರತೀ–ದೇ–ವಿಗೆರಗುವೆನು ।
ನಾನೀ–ಗಮುದದಿಂ ॥ ॥ ಪ॥

ಭಾ–ರತೀ–ದೇವಿಗೇ ।
ಅಪಾ–ರ ಕರುಣಾಸಾ–ರೆಗೆ ॥
ಭೂ–ರಿಬು–ದ್ಧಿ ಇತ್ತುಕಾಯ್ವ ।
ನೀ–ರೆಗೆ– ವಿಚಾರಶೀಲೆಗೆ ॥ ॥ ಅ.ಪ. ॥

ವೀಣೆಯನ್ನು ಮೀಟುತಾ ಯಾಸ್ಥಾನಗಳನರಿತು ॥
ಕ್ಷೋಣಿಯೆಲ್ಲವನೆ–ಚ್ಚರಿಸುವಾ ।
ಜಾಣೆಗಾ–ಪುಸ್ತಕಪಾಣಿಗೆ ॥ ॥ ೧ ॥

ಓ–ದುಗಾರಿಕೆ ಗಾ–ದಿದೇವತೆಯಾ–ದ ಶಾರದೆಗೆ ।
ಭೇ–ದ ಬುದ್ಧಿಯ–ನ್ನು ಕಳೆದು ।
ಮೋ–ದವೀವಾವೇ–ದ ಮಾತೆಗೆ ॥ ॥ ೨ ॥

ಬಿಂ–ಕದೊಲುಮೆಯ ತೋ–ರಿದಾ ಶ್ರೀ ।
ಶಂ–ಕರಾರ್ಚಿತೆಗೆ ॥
ಕಿಂ–ಕರರ ಮೇಲಾದರದೊಳಾ ।
ತಂ–ಕಬಿಡಿಸುವ ಚಿ–ದ್ವಿಲಾಸೆಗೆ ॥ ॥ ೩ ॥

* * *

೧೦. ನಿನ್ನ ನಂಬಿದೆ ಶಾರದೆ

(ಧಾಟಿ: ಭಾರತಿ ಭಕುತಿಯನು ಕರುಣಿಸು)

ರಾಗ: ಸುರಟಿ ತಾಳ: ಏಕತಾಳ

ನಿನ್ನ ನಂಬಿದೆ ಶಾರದೆ । ನೀನು ಪ್ರ ।
ಸನ್ನಳಾಗಬಾರದೆ ॥ ॥ ಪ ॥

ನಿನ್ನನು ಬಿಟ್ಟರೆ ಎನ್ನಯ ದುಃಖಗ ।
ಳನ್ನು ಕಳೆಯುವ । ರಿನ್ನಾರಿರುವರು ॥ ॥ ಅ.ಪ. ॥

ಹೇಳಿಕೊಳ್ಳುವೆ ತಾಯೇ । ದುಃಖವ ।
ಕೇಳೆ ಮಹಾಮಾಯೆ ॥
ಹಾಳು ವಿಷಯಗಳ । ಜಾಲದಿ ಸಿಕ್ಕಿಹ ।
ಗೋಳನು ನಾನೀಗ । ತಾಳಲಾರೆನು ಹಾಯ್ ॥ ॥ ೧ ॥

ಆಟದ ವಸ್ತುಗಳ । ಕೊಟ್ಟು ಚೆ ।
ಲ್ಲಾಟವನಾಡುವೆಯ ॥
ಸಾಟಿ ಇಲ್ಲದೀ । ಆಟ ಸಾಕುಸಾಕು ।
ಕಾಟವಕಳೆನೀಂ । ಭೇಟಿಯ ಕೊಟ್ಟು ॥ ॥ ೨ ॥

ಹರಿಹರಿಯೆನ್ನದೆ ಈ । ನಾಲಿಗೆಯ
ನರಗಳು ಸುಕ್ಕಿಹವು
ನಿರುತವು ಹರಿನಾಮ । ಭರವಸೆ ಬಿಡದಂತೆ
ಹರಸಿ ಕಾಯೆ ಚಿ । ಚ್ಛರೀರದ ತಾಯೇ ॥ ॥ ೩ ॥

* * *

೧೧. ದೇವಿ ಶಾರದೆ ದಯಮಾಡು

(ಧಾಟಿ: ಬಸರಿ ಬಜಾಯಿ ನಂದಲಾಲ)

ರಾಗ: ಅಮೀರ್ ಕಲ್ಯಾಣಿ ತಾಳ: ಏಕತಾಳ

ದೇವಿ ಶಾರದೆ ದಯಮಾ–ಡು ।
ಭಾವಶುದ್ಧಿಯನು ನೀ–ಡು ॥ ॥ ಪ ॥

ವರದಹಸ್ತವನು । ಶಿರದ ಮೇಲಿರಿಸುತ ।
ಕರುಣದಿಂದ ಕಾಪಾ–ಡು ॥ ॥ ೧ ॥

ಮರವೆ ಎಲ್ಲವನು । ಹೊರಗೆ ಹಾಕಿ ಎ ।
ನ್ನರಿವಿನೊಳಗೆ ಈಸಾ–ಡು ॥ ॥ ೨ ॥

ಮೂಢತೆಯೆಂಬಾ । ಗಾಢತಮವನು ।
ಓಡಿಸಿ ಎನ್ನೊಡನಾ–ಡು ॥ ॥ ೪ ॥

ಶರಣರನ್ನು ನೆರೆ । ಪೊರೆವಳೆ ಎನ್ನನು ।
ವರಚಿದ್ರೂಪನ ಮಾ–ಡು ॥ ॥ ೫ ॥

* * *

೧೨. ಶರಣು ಶಾರದೆ

(ಧಾಟಿ: ಏನು ಧನ್ಯಳೋ ಲಕುಮೀ)

ರಾಗ: ಪುನ್ನಾಗವರಾಳಿ ತಾಳ: ತ್ರಿಶ್ರ ಏಕತಾಳ

ಶರಣು ಶಾರದೆ । ದೇವಿ । ಕರುಣಾನೀರದೆ ॥ ॥ ಪ ॥

ಎನ್ನ ಮನವ ವೀಣೆಯಾಗಿ ।
ಮುನ್ನ ನೀನು ಮಾಡಿಕೊಂಡು ।
ಪನ್ನಗೇಂದ್ರಶಯನ ನಾಮ ।
ವನ್ನು ನಿರಂತರವು ನುಡಿಸು ॥ ॥ ೧ ॥

ಎನ್ನಮಾನಸವೆಂಬವಸ್ತ್ರ ।
ವನ್ನು ಶುದ್ಧಿ ಮಾಡಿಮಾಡಿ ॥
ಇನ್ನು ನೀನದನುಟ್ಟುಕೊಂಡು ।
ಎನ್ನನೀಗ ಧನ್ಯನ ಮಾಡು ॥ ॥ ೨ ॥

ಎನ್ನ ಹೃದಯವೆಂಬ ಕಮಲ ।
ವನ್ನು ಬಿಳಿದಮಾಡಿ ಅಲ್ಲಿ ॥
ನಿನ್ನ ಮೂರ್ತಿಯನ್ನು ನಿಲ್ಲಿಸಿ ।
ಎನ್ನಭೀಷ್ಟವ ಪೂರ್ತಿಮಾಡು ॥ ॥ ೩ ॥

ಪರಮಪಾಪಿಯಾಗಿ ಈಗ ।
ಶರಣು ಬಂದ ನನ್ನಬಿಟ್ಟು ॥
ಸುರರಪೊರೆಯೆ ಹಿರಿಯತನವೆ ।
ಸರಸಿರುಹಾಸನನಜಾಯೆ ॥ ೪ ॥

ಕೆಟ್ಟ ಮಕ್ಕಳುಂಟು ಜಗದಿ ।
ಕೆಟ್ಟತಾಯಿಯರಿರುವದುಂಟೆ ॥
ಸೃಷ್ಟಿಗೊಡೆಯನರಸಿಗುಣ ವಿ ।
ಶಿಷ್ಟಚಿದ್ವಿಶೇಷನಿಷ್ಠೆ ॥ ॥ ೫ ॥

* * *

೧೩. ಶಾರದಾದೇವಿ ಕಾಪಾಡು

(ಧಾಟಿ: ಶ್ರೀ ಗಿರಿಸುತೇ ಕಲ್ಯಾಣಿ ತ್ವಂ ಕೃಪಯಾ)

ರಾಗ: ಸುರಟಿ ತಾಳ: ಆದಿತಾಳ

ಶಾ–ರದಾ–ದೇವಿ । ಕಾಪಾ–ಡು ನೀಂ– ದಯದಿಂ ॥ ಪ ॥

ವಾ–ಣಿ–ಬ್ರ–ಹ್ಮ–ನ–ರಾಣಿ । ಭಾ–ರತಿ ॥ ಅ.ಪ. ॥

ಪಾಪಪುಣ್ಯಂಗಳ ।
ತಾ–– ಪದಿಸಿಕ್ಕಿ ನಿನ್ನ ।
ರೂಪವರಿಯದಿಹನ ॥ ॥ ೧ ॥

ಬರಿಮಾ–ತಿನ–ಸ–ಡ ।
ಗರದೊಳಿರುತ ಶ್ರೀ ।
ಹರಿಯ ನೆನೆಯದಿಹನ ॥ ॥ ೨ ॥

ಹೃದಯದೊಳಿಹ ನಿನ್ನ ।
ಪದಗಳ ಕಾಣದೆ ।
ಎದೆಗೆಟ್ಟು ಹುಡುಕುವನ ॥ ॥ ೩ ॥

ನಿನ್ನಿಂ–ದೆ–ಲ್ಲವು ।
ಎನ್ನುವದರಿಯದೆ ।
ಅನ್ಯವನರಿಯುವನ ॥ ॥ ೪ ॥

ಶೃಂ–ಗಗಿರಿಯ ಶು ।
ಭಾಂಗದ ಚಿತ್ಕಳೆ ।
ಯಿಂಗಿತವರಿಯದನ ॥ ॥ ೫ ॥

* * *

೧೪. ಸರಸಿಜಾಸನ ರಾಣಿ

(ಧಾಟಿ: ನೀನಾಮರೂಪಮುಲಕು)

ರಾಗ: ಸೌರಾಷ್ಟ್ರ ತಾಳ: ಏಕತಾಳ

ಸರಸಿಜಾ–ಸನನ ರಾಣಿ ।
ಶಾರದಾಂಬಾ ಮಂಗಳಂ ॥ ॥ ಪ ॥

ವೀಣೆಯ– ಹಿಡಿದು ದೇವ ।
ಗಾನವ–– ಮಾಡುವಂಥ ॥ ॥ ೧ ॥

ನುಡಿಗಧಿ–ದೇವಿಯಾಗಿ ।
ಜಡತೆಯ––ಕಳೆಯುವಂಥ ॥ ॥ ೨ ॥

ವಿದ್ಯಾಭಿಮಾನಿಯಾಗಿ
ಬುದ್ಧಿಯ––ನೀಯುವಂಥ ॥ ॥ ೩ ॥

ಪ್ರೇಮದಿಂದಲಿ ಭಗವ ।
ನ್ನಾಮವ–– ನುಡಿಸುವಂಥ ॥ ॥ ೪ ॥

ಭಕ್ತರಿಗೊಲಿಯುವ ಚಿ ।
ಚ್ಛಕ್ತಿಯಾ–ಗಿರುವಂಥ ॥ ॥ ೫ ॥

* * *

ಭಾಗ ೩:
ಶ್ರೀ ಗುರು ಸಂಬಂಧವಾದ ಕೀರ್ತನೆಗಳು (೧೫-೨೨)

೧೫. ಗುರುಚರಣಕೆ

(ಧಾಟಿ: ಮನುಜಶರೀರವಿದೇನು ಸುಖ)

ರಾಗ: ಆನಂದಭೈರವಿ ತಾಳ: ಆದಿತಾಳ

ಗುರುಚರಣಕೆ ಸರಿ ಇಹುದುಂಟೆ ಇದ ।
ನರಿಯದಿರಲು ಮುಕ್ತಿಯಹುದುಂಟೆ ॥ ॥ ಪ ॥

ಯಾರ ಪದಕೆಬಿದ್ದ । ವಾರಿಯೆಗಂಗೆಯೊ ।
ಯಾರ ನುಡಿಯೆ । ವೇದಸಾರವೊಮೇಣ್ ॥
ಯಾರಕಯ್ಯಲಿಮುಕ್ತಿ । ನಾರಿ ಇಹಳೋ ಆ ।
ಧೀರ ಸದ್ಗುರುಪದ । ವಾರಿಜಕೆಣೆಯುಂಟೆ ॥ ॥ ೧ ॥

ಹರಿಯೆ ಭಕ್ತರಿಗಾಗಿ । ಧರಿಸಿಹ ರೂಪವೊ ।
ಹರನೆ ತಾಳಿಹ ಅವ । ತಾರವೊ ಮೇಣ್ ॥
ಪರಮೇಷ್ಠಿಯೊ ಆ । ಪರಮಾತ್ಮನೆ ಈ ।
ಪರಿಯೊಳಿಹನೊ ಇದ । ನರಿಯುವದಾಗದು ॥ ॥ ೨ ॥

ಗುರುಕರುಣವೆ ಶ್ರೀ । ಹರಿಯನೊಲಿಸುವದು ।
ಗುರುಕರುಣವೆ ಸುಖ । ಕರವಹುದು ॥
ಗುರುಕರುಣವೆ ಭವ । ಶರಧಿಯ ಸೇತುವೆ ।
ಗುರುಕರುಣವೆ ಚಿದಾ । ಕಾರ ವಿಶೇಷವು ॥ ॥ ೩ ॥

* * *

೧೬. ಗುರುದೇವ ನಿನ್ನ

(ಧಾಟಿ: ನವಮಲ್ಲಿಕಾದಿ ಪೂಗಳಿಗೆ)

ರಾಗ: ಭೈರವಿ ತಾಳ: ರೂಪಕತಾಳ

ಗುರುದೇವ ನಿನ್ನ । ಚರಣಯುಗಕೆ । ಶರಣು ಮಾಡುವೆ ।
ಕರುಣಾ ಕಟಾಕ್ಷದಿಂದ ನೋಡು । ದೈನ್ಯದೋರುವೆ ॥ ॥ ಪ ॥

ವಿಷಯಂಗಳಾ ಸುಖವೆಂಬ ಮಹಾ । ವಿಷವ ಕಳೆಯುತ ॥
ಅಸಮಾನ ತತ್ತ್ವದಮೃತವ ತೋ । ರಿಸುತ ಪೊರೆಯುವ ॥ ॥ ೧ ॥

ಮೊರೆಯುತ್ತ ಬಂದು ಕಡಿವಹಂ । ಕಾರಸರ್ಪವ ॥
ಭರದಿಂದ ಬಡಿದು ಕೆಡಹುವಂಥ । ಗರುಡನಾಗಿಹ ॥ ॥ ೨ ॥

ಧರೆಯೆಲ್ಲ ಹುಚ್ಚರಡವಿಯೆಂದು । ತಿರುಗಿ ನೋಡದೆ ॥
ಪರಮಾತ್ಮನಲ್ಲಿ ಮನವನಿಟ್ಟು । ಹರುಷಪಡುತಿಹ ॥ ॥ ೩ ॥

ಶರಣೆಂದರವರ ಮೋಹತಮವ । ಭರದೊಳೋಡಿಸಿ ॥
ಅರಿವೆಂಬ ದೀಪವನ್ನು ಹಚ್ಚು । ತಿರುತಮೆರೆಯುವ ॥ ॥ ೪ ॥

ನರಕಕ್ಕೆ ಜಾರಿಬೀಳ್ವದೀ । ನರನು ಹಿಡಿಯುತ ।
ಪರಿಪೂರ್ಣಚಿತ್ಸ್ವರೂಪವಿತ್ತು । ಮರುಕದೋರುವ ॥ ॥ ೫ ॥

* * *

೧೭. ಏನೆಂದು ವರ್ಣಿಸಲಿ

(ಧಾಟಿ: ರಂಗ ನಿನ್ನ ಕೊಂಡಾಡುವ ಮಂಗಳಾತ್ಮರ)

ರಾಗ: ಝಂಝೂಟಿ ತಾಳ: ಏಕತಾಳ

ಏನೆಂದು ವರ್ಣಿಸಲಿ ಸದ್ಗುರು । ದೇವನೆ ನಿನ್ನ ॥
ದೀನಜನಮಂದಾರನಾಗಿಹೆ ಪಾಲಿಸೈ ಎನ್ನ ॥ ॥ ಪ ॥

ವೈಕುಂಠ ಮೊದಲಾದ ದೇವಲೋಕಗಳಿಗೆಲ್ಲಾ ।
ಏಕಚಕ್ರಾಧೀಶನಾಗಿ ಇರುವೆಯಾದರೂ ॥
ಏಕಪಾದದಷ್ಟು ಭೂಮಿ ನನ್ನದೆಂದು ನೀಂ ।
ಜೋಕೆ ಮಾಡದಿರುವೆ ಸದ್ಗುಣಾಕರನೆ ನೀನು ॥ ॥ ೧ ॥

ಮನೆಯು ರಜತಗಿರಿಯು ಬೆರಳ ಕೊನೆಯೊಳು ಕನಕಾದ್ರಿ ।
ಅಣಿಮಾದಿಸಿದ್ಧಿಗಳು ನಿನಗೆ ತೃಣವೇ ಆದರೂ ॥
ಎಣಿಸುವೆನೆಂದರೆ ಕುರುಡುಕವಡೆ ಇಲ್ಲದ ।
ಘನತೆಯನೇನೆಂದು ಪೇಳಲಿ ಅನುಪಮಮಹಿಮನೆ ॥ ॥ ೨ ॥

ಕೊಡಲೆಂದು ಕೈ ಎತ್ತೆ ನಿನ್ನ ಜಡಜಹಸ್ತದ ।
ಹಿಡಿಯಲ್ಲಿ ನವನಿಧಿಗಳೆಲ್ಲಾ ಅಡಗಿ ಇದ್ದರೂ ॥
ಬಿಡದೆ ಭೋಗಿಸುವದಕೊಂದು ಕಾಸೂ ಇಲ್ಲದ ।
ಬೆಡಗದ್ಯಾವ ಚಿದ್ವಿಲಾಸ ಮೃಡಸಮಾನನೆ ॥ ॥ ೩ ॥

* * *

೧೮. ನಿನಗಾರು ಸರಿಯೊ

(ಧಾಟಿ: ಪಿಡಿಯೆನ್ನ ಕಯ್ಯ ರಂಗಯ್ಯ)

ರಾಗ: ಭೈರವಿ ತಾಳ: ಮಿಶ್ರಛಾಪು

ನಿನಗಾರು ಸರಿಯೊ । ಸದ್ಗುರುರಾಯ ॥ ॥ ಪ ॥

ನಿನಗೆ ಸರಿಯ ಕಾಣೆ । ಘನತೆಯೊಳಗೆ ನೋಡೆ ।
ಅನಘ ಕೃಪಾಸಿಂಧು । ಅನಿಮಿತ್ತ ಬಂಧು ॥ ॥ ಅ.ಪ. ॥

ಸಾಗರವನ್ನು । ಹೋಲುವೆಯೆಂಬು ।
ದಾಗದು ಇನ್ನು । ಸಾಗರವೆಲ್ಲವ ಶೋಧಿಸಿದರೆ ಲವ ।
ಣಾಗರವಾಗಿಯೆ । ತೋರುವದೋ ಅದು ॥
ಸಾಗರದ ಪಾಡೇನು ಕಲ್ಪವು ।
ಸಾಗಿಮುಗಿಯುತ್ತಿರ್ಪ ಸಮಯದಿ ।
ಹೋಗದಂಥ ಜೇನುತುಪ್ಪದ ।
ಸಾಗರವು ನೀನಾಗಿ ತೋರುವೆ ॥ ॥ ೧ ॥

ಮೇರುಪರ್ವತವ । ಹೋಲಿಸುವದು । ಸೇರದು ದೇವ ।
ಮೇರುಪರ್ವತದ ವಿಚಾರಮಾಡಲು ।
ಮೀರಿ ಕಠಿನತೆಯ ತೋರುವದೋ ಅಲ್ಲಿ ॥
ಭೂರಿಕರುಣದಿ ತುಂಬಿ ತುಳುಕುತ ।
ಚಾರುನವನೀತವನು ಗುಣದೊಳು ।
ಮೀರಿ ಕೋಮಲವಾದ ಹೃದಯವ ।
ಧಾರಿಣಿಯೊಳಗೆ ತೋರುತಿರುವೆ ॥ ॥ ೨ ॥

ಅಮೃತಕ್ಕೆ ನಿನ್ನ । ಹೋಲಿಸುವದು । ಸಮನಲ್ಲಮುನ್ನ ।
ಅಮೃತವನುಂಡುಂಥ ಅಮರರು ಮೃತಿಯೆಂಬ-
ಅಮಿತ ದುಃಖಕೆ ಸಿಕ್ಕಿ ಭ್ರಮಿಸುತ್ತಲಿರುವರು ।

ಅಮೃತವನು ಸೋಲಿಸುತ ನಿಜವಾ ॥
ದಮೃತವಾಗಿಹ ನಿಮ್ಮ ಬೋಧೆಯು ।
ಅಮಿತ ಸೌಖ್ಯವನಿತ್ತು ಭಕ್ತರಿ ॥
ಗಮರ ಪದವಿಯ ಸೂರೆಮಾಳ್ಪುದು ॥ ॥ ೩ ॥

ಕಾಮಧೇನುವನು । ಹೋಲಿಸುವನು । ನೇಮಕ್ಕೆ ಕಿರಿದು ।
ಕಾಮಧೇನುವನೊಡೆ । ಈ ಮಹಿಯೊಳಗದು ।
ಕಾಮನೆಯನು ತಂದು । ನೇಮವ ಕೆಡಿಪುದು ।
ಕಾಮನೆಗಳೆಲ್ಲವನು ಕಳೆದು ।
ದ್ದಾಮವೈರಾಗ್ಯವನು ಹುಟ್ಟಿಸಿ ।
ಪ್ರೇಮದಿಂ ನೀನೀಗಲೇ ನಿ ।
ಷ್ಕಾಮ ತೃಪ್ತಿಯನೀವ ಚಿದ್ಘನ ॥ ॥ ೪ ॥

* * *

೧೯. ಭಕ್ತಿ ಭಿಕ್ಷವ ಕೊಡೊ

(ಧಾಟಿ: ಮನಸು ನಿಲ್ಲಿಸೊ ನಿನ್ನ ಚರಣಕಮಲದಲ್ಲಿ)

ರಾಗ: ಮೋಹನ ತಾಳ: ಅಟ್ಟತಾಳ

ಭಕ್ತಿಭಿಕ್ಷವ ಕೊಡೊ । ಮುಕ್ತಿಗೊಡೆಯನೆ ವಿ ।
ರಕ್ತ ಶಿಖಾಮಣಿಯೆ ॥ ॥ ಪ ॥

ಯುಕ್ತಿಯಿಂ ವಿಷಯಾ । ಸಕ್ತಿಯ ಕಳೆದೆನ್ನ ।
ಭಕ್ತಿಯ ಬೆಳೆಸು ಸದ್ಭಕ್ತ ಸದ್ಗುರುವರ್ಯ ॥ ॥ ಅ.ಪ. ॥

ನಿನ್ನನ್ನು ಪೂಜೆಯ ಮಾಡದೆ ಹರಿಹರ ।
ರನ್ನು ಪೂಜಿಸಲವರೊಲಿಯುವರೇ ।
ನಿನ್ನನಾಶ್ರಯಿಸದೆ ಜಪತಪ ಹೋಮಗ ।
ಳನ್ನು ಮಾಡಿದವರವು ಫಲಿಸುವವೇ ॥
ನಿನ್ನ ಮೂರ್ತಿಧ್ಯಾನವೇ ತಾ ।
ನಿನ್ನು ಸರ್ವಧ್ಯಾನಮೂಲವು ।
ನಿನ್ನನಾಮವೆ ಸರ್ವಮಂತ್ರ ಗ ।
ಳನ್ನು ಸಿದ್ಧಿಗೆ ತರುವ ಸಾಧನ ॥ ॥ ೧ ॥

ನಿನ್ನ ಕೃಪಾರಸಧಾರೆಯ ಸಂಪರ್ಕ ।
ವನ್ನು ಪಡೆಯೆ ಮುಕ್ತಿ ಸಾಮ್ರಾಜ್ಯಕೆ ।
ಇನ್ನದು ಪಟ್ಟಾಭಿಷೇಕವಾಗುವದದ ।
ನಿನ್ನೇನ ಹೇಳಲಿ ನಿನ್ನಯ ಮಹಿಮೆಯ ॥

ನಿನ್ನನುಗ್ರಹದೊಂದುಲೇಶದಿ ।
ತಣ್ಣಗಪ್ಪುದು ದೈವಕೋಪವು ।
ನಿನ್ನ ಕೋಪವ ತಡೆಯಲರಿಯರು ।
ಪನ್ನಗಾಧಿಪಶಯನ ಮುಖ್ಯರು ॥ ॥ ೨ ॥

ನಿನ್ನ ಮಂತ್ರಪ್ರಭೆಯನ್ನು ಹೇಳುವದೇನು ।
ಮನ್ನಣೆಯಿಂದದ್ದ ಜಪಿಸಿದರೆ ।
ತನ್ನ ತಿಳಿವು ಬಂದು ಮುನ್ನ ಈ ಸಂಸಾರ ।
ವೆನ್ನುವ ಜಲನಿಧಿಗೋಷ್ಪದವಪ್ಪುದು ॥
ನಿನ್ನ ಮನಸಿನ ಸಮತೆಯೇ ಜನ ।
ರನ್ನು ತಿದ್ದುತ್ತವರ ಮಾನಸ ।
ವನ್ನು ಸಮತೆಯೊಳಿಟ್ಟು ಚಿತ್ಸುಖ ।
ವನ್ನು ಸುಲಭದಿ ಸೂರೆಮಾಳ್ಪುದು ॥ ॥ ೩ ॥

* * *

೨೦. ಗುರುರಾಜ ಎನ್ನಯ

(ಧಾಟಿ: ಗುರುಕೃಪಾಂಜನ ಪಾಯೋರೇಭಾಯಿ)

ರಾಗ: ಪೀಲು ತಾಳ: ತ್ರಿಶ್ರಭಾಪು

ಗುರುರಾಜ ಎ–ನ್ನಯ । ಮರವೆಯ ಪರದೆಯ ।
ತೆರೆದುತೋರಿಸೊ ಹರಿ । ಚರಣ–ವನೀಗ ॥ ॥ ಪ ॥

ಮುಸುಕಿನೊಳಗೆ ಸಿಕ್ಕಿ । ದೆಸೆದೆಸೆಗಳ ಸುತ್ತಿ ।
ಬಸವಳಿದಿರುವೆನು । ಅಸಮಾನ ಮಹಿಮನೆ ॥ ॥ ೧ ॥

ಹುಡುಕಿಹುಡುಕಿ ನಾ । ಪೊಡವಿಯೊಳೆಲ್ಲಾ ।
ಹಿಡಿಯುತಲಿರುವೆನೊ । ಕೆಡುವ ವಿಷಯಗಳ ॥ ॥ ೨ ॥

*ಮಡದಿಮಕ್ಕಳನೆ । ಬಿಡದೆ ನಂಬಿ ನಾನು ।
ನಡುನೀರಿನೊಳು ಬಾಯ್ । ಬಿಡುತಲಿರುವೆನೊ ॥ ॥ ೩ ॥

ದಾರಿಯ ಕಾಣದೆ ಗಾರಾಗಿರುವೆನು ।
ಭೂರಿ ಕರುಣದಿಂದ ಪಾರುಮಾಡೆನ್ನ ॥ ॥ ೪ ॥

ಶರಣಜನರ ಭಯ । ಹರಣದಕ್ಷ ನೀನು ।
ತ್ವರಿತದಿ ಚಿದ್ರೂಪ । ದಿರವನು ಕಾಣಿಸೊ ॥ ॥ ೫ ॥

* * *

* ಸ್ತ್ರೀಯರು ಹಾಡುವಾಗ 'ಪಡೆದ ಮಕ್ಕಳಿಗೆ' ಎಂದು ಹೇಳಿಕೊಳ್ಳಬೇಕು.

೨೧. ಗುರುವರ ನಿನ್ನಡಿಗಳಿಗೆ

(ಧಾಟಿ: ಪರಮುಲಸಖಿ ಬ್ರೋಚುಟನೇ)

ರಾಗ: ಕೀರವಾಣಿ ತಾಳ: ರೂಪಕ

ಗುರುವರ ನಿನ್ನಡಿಗಳಿಗೆ । ಶರಣಾಗತನೈ ನಾನು ॥ ಪ ॥

ಹರಿಹರ ಭೂಸುರರೂಪ ।
ಶರಣಮೋಹ ತಿಮಿರದೀಪ ॥ ॥ ಅ. ಪ. ॥

ಧರೆಯನು ಕನ್ನಡಿಯೊಳಿಹ ಪುರವೆನುತ್ತ ತಿಳಿದದರ ।
ಇರುವಿಕೆಯ ನೆರೆನಂಬಿ ಮರುಳನಾಗಿ ಕಂಗೆಡದೆ ।
ಪರಿಪರಿಯಾದರು ತಿಳಿಯೊಳ್ಮಿರವ ವಿವಿಧವಿಷಯಗಳ ।
ನೆರೆ ಪರಮಾತ್ಮನೊಳೆಲ್ಲಾ ಬರಿದೆತೋರ್ಪುವೆಂದು ತಿಳಿವ ॥ ॥ ೧ ॥

ಮರವೆಯೆಂಬ ಗಾಢನಿದ್ರಾಭರದಿ ಮತ್ತರಾಗಿರುತ ।
ಬರಿದೆ ಕನಸಕಾಣುತಲಿ । ಕಿರಿಚಿಕೊಂಡು ಅಳುತಲಿಹ ।
ಅರಿವಪಡೆವುದ ಬಿಟ್ಟು ಪರಮದುಃಖಪಡುತಲಿಹ
ಶರಣರ ಕಿವಿಯಲಿ ತತ್ತ್ವ । ದಿರವ ಹೇಳಿಯೆಬ್ಬಿಸುವ ॥ ॥ ೨ ॥

ಮೌನವಾಗಿರುತ ತಾನು ದೀನರಾದ ಶಿಷ್ಯರನು ।
ಸಾನುರಾಗದಿಂದ ಕಂಡು ತಾನೆ ನಿಜವ ಬೋಧಿಸುತ ।
ಆನತರಾಗಿಹೆವೆಂಬ ಮಾನವರಿಗುದಾರತೆಯಿಂ ।
ಜ್ಞಾನಭಂಡಾರವನ್ನು ದಾನಮಾಳ್ಪ ಚಿತ್ಸ್ವಭಾವ ॥ ॥ ೩ ॥

* * *

೨೨. ಗುರುರಾಜ ಬ್ರಹ್ಮರೂಪ

(ಧಾಟಿ: ನೀನಾಮರೂಪಮುಲಕು)

ರಾಗ: ಸೌರಾಷ್ಟ್ರ ತಾಳ: ಏಕತಾಳ

ಗುರುರಾಜ-- ಬ್ರಹ್ಮರೂಪ ಮಹಾರಾಜ ಮಂಗಳಂ ॥ ॥ ಪ ॥

ಚರಣಾಂಬು-- ವಿಂದಸರ್ವ ।
ವರತೀರ್ಥ--ಫಲವ ಕೊಡುವ ॥ ॥ ೧ ॥

ನುಡಿಯೊಂದ--ರಿಂದ ಜನರ ।
ಜಡತೆಯ-- ಕಳೆಯುತಿರುವ ॥ ॥ ೨ ॥

ಕಾಮಗ--ಳೆಲ್ಲವನು
ಹೋಮವ । ಮಾಡುತಿರುವ ॥ ॥ ೩ ॥

ಪರಮಾತ್ಮ- ಚಿಂತನೆಯ ।
ಸ್ಥಿರವಾಗುವಂತೆಗೈವ ॥ ॥ ೪ ॥

ಭಕ್ತಿ ವಿ-ರಕ್ತಿಯೀವ ।
ಭಕ್ತೇಡ್ಯಚಿತ್ಸ್ವಭಾವ ॥ ॥ ೫ ॥

* * *

ಭಾಗ ೪:
ಶ್ರೀ ಕೃಷ್ಣ ಸಂಬಂಧವಾದ ಕೀರ್ತನೆಗಳು (೨೩–೪೮)

೨೩. ಇನ್ನ್ಯಾರಿಗೆ ನಾ ಶರಣೆನ್ನಲಿ

(ಧಾಟಿ: ಪರಿಪಾಹಿ ನಂದಗೋಪಬಾಲ)

ರಾಗ: ಹಿಂದೂಸ್ತಾನಿ ಕಾಪಿ ತಾಳ: ಚತುರಶ್ರ ಏಕತಾಳ

ಇನ್ನ್ಯಾರಿಗೆ ನಾ ಶರಣೆನ್ನಲಿ ।
ಮುರಹರನೆ ನಾ ನಿನ್ನ ಬಿಟ್ಟು ॥ ॥ ಪ ॥

ಶರೀರವನು ನಂಬಲೆ । ರುಜಿನದಿ ।
ಶರೀರ ಸೊರಗುತ ಗಾರಾಗಿ ಹೋಗುವದಿ (ನ್ಯಾ) ॥ ॥ ೧ ॥

ಮಾನಸವನು ನಂಬಲೆ । ಬಯಸುತ ।
ಮಾನಸ ಕ್ಷೀಣಿಸಿ । ಪ್ರಾಣವ ಬಿಡುವದಿ (ನ್ಯಾ) ॥ ॥ ೨ ॥

ಆಯುಷ್ಯವ ನಂಬಲೆ । ಮೃತ್ಯುವು ।
ಆಯಾಸಪಡಿಸಿ । ಬಾಯನು ಬಿಡಿಪುದಿ (ನ್ಯಾ) ॥ ॥ ೩ ॥

ನೇಮಗಳನು ನಂಬಲೆ ॥ ಕಾಮವು ।
ನೇಮವನೆಲ್ಲ ನಿ । ರ್ನಾಮ ಮಾಡುವದಿ (ನ್ಯಾ) ॥ ॥ ೪ ॥

ಕಾಂಚನವನು ನಂಬಲೆ । ಸಮಯದಿ ।
ಸಂಚಿತವೆಲ್ಲವು । ವಂಚನೆ ಮಾಡುವದಿ (ನ್ಯಾ) ॥ ॥ ೫ ॥

ಪುತ್ರಾದಿಗಳ ನಂಬಲೆ ।ಎನ್ನನು ।
ಮಿತ್ರತ್ವದಲಿ ದುಃಖ । ಪಾತ್ರನ ಮಾಡುವ (ನ್ಯಾ) ॥ ॥ ೬ ॥

ರೂಪವನೆ ನಂಬಲೆ । ಅದು ಬಹು ।
ರೂಪವಾಗುತ ಚಿ । ದ್ರೂಪವ ಮರೆಪುದಿ (ನ್ಯಾ) ॥ ॥ ೭ ॥

೨೪. ನೀ ಕೈಬಿಡೆ ಕಾಯುವರಾರು

(ಧಾಟಿ: ಪೋರಾದುರಾ ನೀರಜನೇತ್ರ)

ರಾಗ: ಶಂಕರಾಭರಣ ತಾಳ: ಮಿಶ್ರಛಾಪು

ನೀ ಕೈಬಿಡೆ ಕಾಯುವರಾರು । ಶ್ರೀ ಕೃಷ್ಣನೆ ॥ ॥ ಪ ॥

ನಿನ್ನಯ ಮಾಯೆಯಲಿ । ಇನ್ನು ನಾ ಸಿಕ್ಕಿರುತ ।
ಖಿನ್ನನಾಗಿರುತಿಹೆ । ಪನ್ನಗಶಯನನೆ ॥ ॥ ೧ ॥

ನಿನ್ನನೆ ಪೂಜಿಸುವೆ । ನಿನ್ನನೆ ಸ್ತುತಿಸುವೆ ।
ನಿನ್ನನೆ ಧ್ಯಾನಿಸುವೆ । ನಿನ್ನನೆ ಸೇವಿಸುವೆ ॥ ॥ ೨ ॥

ನೀನೆ ಎನ್ನಿಷ್ಟದೈವ । ನೀನೆನ್ನ ಕುಲದೈವ ।
ನೀನೆನ್ನ ಜೀವನವು । ನೀನೇ ಎನ್ನ ಚಿತ್ಸ್ವರೂಪ ॥ ॥ ೩ ॥

* * *

೨೫. ಎಂದಿಗೆ ತೋರುವೆಯೋ

(ಧಾಟಿ: ಇತರಮು ತಿರುಗನಯಾ)

ರಾಗ: ಶಂಕರಾಭರಣ ತಾಳ: ಏಕತಾಳ

ಎಂದಿಗೆ ತೋರುವೆಯೋ ।
ಸುಂದರರೂಪವ ಶ್ರೀಕೃಷ್ಣ ॥ ॥ ಪ ॥

ಮಂದಹಾಸದಿಂದೊಪ್ಪುವ ನಿನ್ನ ।
ಚಂದಿರನಂಥ ಅಂದದ ಮುಖವ ॥ ॥ ಅ.ಪ. ॥

ಅತಸೀಪುಷ್ಪದ ತೆರದಿಂದಿರುತ ।
ಅತಿಶಯ ಕಿರೀಟಹಾರವನಿಟ್ಟು ।
ಸತತವು ಬರ್ಹಿಯ ಮುಡಿದುಕೊಂಡು ನೀಂ ॥ ॥ ೧ ॥

ಪೀತಾಂಬರವನು ಮುದದಿಂ ಧರಿಸಿ ।
ಶ್ರೀತುಲಸಿಯ ಮಾಲೆಯನಳವಡಿಸಿ ।
ಪ್ರೀತಿಯಿಂ ರುಕ್ಮಿಣಿಯೊಡನಾಡುತ ॥ ॥ ೨ ॥

ನೀಲೋತ್ಪಲ ನಯನಂಗಳ ಬಿಟ್ಟು ।
ನೀಲಮೇಘವರ್ಣವನಿಂಬಿಟ್ಟು ।
ಶ್ರೀಲಕ್ಷ್ಮೀಯುತ ಚಿತ್ರಭೆಯನ್ನು ॥ ॥ ೩ ॥

* * *

೨೬. ಈಗೆನಗೆ ಕಾಣಿಸು ನೀ

(ಧಾಟಿ: ಶ್ರೀ ತ್ರಿಪುರಸುಂದರಿ ನಾ)

ರಾಗ: ಖರಹರಪ್ರಿಯ ತಾಳ: ರೂಪಕ

ಈ–ಗೆನಗೆ ಕಾಣಿಸು ನೀ । ಭೋಗಿಶಾಯಿಯೇ ॥ ॥ ಪ ॥

ಯೋಗಿವಂದಿತ । ಭೋಗಿಸೇವಿತ ।
ರಾಗದಿಂದ ಬೇಗಬಂದು ॥ ॥ ಅ.ಪ. ॥

ಮುನಿಗಳೆಲ್ಲ ಯತ್ನದಿಂದ ।
ಮನವ ಹಿಡಿದು ನಿಗ್ರಹಿಸಿ ।
ಅನವರತವು ಕಾಣುವಂಥ ।
ಅನಿಮಿಷನುತ ಸುಖರೂಪವ ॥ ॥ ೧ ॥

ಧರ್ಮವನ್ನು ಕಾಯಲೆಂದು ।
ಧರ್ಮಮೂರ್ತಿಯಾಗುತಲಿ ।
ಕರ್ಮಭೂಮಿಗಿಳಿದುಬಂದ ।
ಪೆರ್ಮೆಯ ನಿನ್ನವತಾರವ ॥ ॥ ೨ ॥

ಸುರರಿಗೆಲ್ಲ ಶಕ್ತಿಯನ್ನು ।
ಸುರಗುರುವಿಗೆ ಬುದ್ಧಿಯನ್ನು ॥
ಕರುಣಿಸಿ ಕಾಪಾಡುವಂಥ ।
ಪರತರವಹ ಚಿದ್ರೂಪವ ॥ ॥ ೩ ॥

* * *

೨೭. ರಾಧಿಕಾ ಮನೋವಲ್ಲಭ

(ಧಾಟಿ: ತಾಯೇ ರಾಜರಾಜೇಶ್ವರೀ)

ರಾಗ: ಕಲ್ಯಾಣಿ ತಾಳ: ಚತುರಶ್ರ ಏಕತಾಳ

ರಾಧಿಕಾ ಮನೋವಲ್ಲಭ । ವೇದ–ವೇದ್ಯನೇ ಪೊರೆ ॥ ಪ ॥

ಪರಮೇಷ್ಠಿಮುಖ್ಯರು । ಪರಿಚರ್ಯೆಗೈಯುವ ।
ಪರಮಪುರುಷ ವಿಶ್ವೋದರ ವಿಶ್ವೇಶಾ ಶ್ರೀಹರಿ ॥ ೧ ॥

ಸರ್ವಸೃಷ್ಟಿಗೆ ಆದಿ । ಸರ್ವಕ್ಕೇ ಬೀ–ಜವು ।
ಸರ್ವಾವತಾರಾಶ್ರಯ । ಸರ್ವನಿರ್ವಾಹಶೀಲನೆ ॥ ೨ ॥

ಶರಣರಮೋಹವ । ಹರಣಮಾಡುತ ।
ಕರುಣಾಕಟಾಕ್ಷದಿ । ಪರಿಪಾಲಿಸುವ **ಚಿನ್ಮಯ** ॥ ॥ ೩ ॥

* * *

೨೮. ಎನಗೆ ನೀ ಗತಿ

(ಧಾಟಿ: ತ್ರಿಪುರಸುಂದರಿ ತಾರಾಧೀಶನನಿಕಾಶಾನನೆ)

ರಾಗ: ಬೇಹಾಗ್ ತಾಳ: ರೂಪಕತಾಳ

ಎನಗೆ ನೀ ಗತಿ । ನಾ-ರಾ-ಯಣ ನಿಗಮವಿನುತ ॥ ॥ ಪ ॥

ಯೋಗಮಾರ್ಗವಡಗಿ ಹೋಗಿ ।
ಯಾಗದ ಕಲೆಯುಡುಗಿಹೋಗಿ ॥
ಭೋಗಿಜನರು ಪಾಷಂಡ ।
ರಾಗಿರುವೀಕಲಿಯಕಾಲದಿ ॥ ॥ ೧ ॥

ವರನದಿಗಳ ಮಹಿಮೆಯೆಲ್ಲ ।
ಬರಿಯ ಮಾತುಗಳಾಗಿ ಹೋಗಿ ।
ಧರಣಿಯಲ್ಲಿ ದುಷ್ಟತನವು ।
ಹರಡುತಿರ್ಪ ಸಮಯದಲ್ಲಿ ॥ ॥ ೨ ॥

ಮಂತ್ರಯಂತ್ರವೆಲ್ಲ ಹೋಗಿ ।
ಮಂತ್ರದೇವತೆ ಇಲ್ಲವಾಗಿ ।
ತಂತ್ರಬಹುಳವಾಗಿ ಕಾಲ ।
ಯಂತ್ರದಾಟ ನಡೆಯುವಾಗ ॥ ॥ ೩ ॥

ಭಕ್ತಿಭಾಗ್ಯವಿಲ್ಲದೆ ವಿ ।
ರಕ್ತಿಯನ್ನು ಪಡೆಯದೆ ॥
ಯುಕ್ತಿಮುಖ್ಯವಾದ ವಿಷಯಾ ।
ಸಕ್ತಿ ಬೆಳೆಯುತಿರ್ಪಕಾಲದಿ ॥ ॥ ೪ ॥

ನಾನುನಾನೆಂದು ಮುಂದು ।
ಗಾಣದೆ ಪಾಪವನು ಮಾಡಿ ॥
ಕ್ಷೋಣಿಯನರರೆಲ್ಲ ಚಿದ್ವಿ ।
ಹೀನರಾಗಿ ಹೋಗುವಾಗ ॥ ॥ ೫ ॥

೨೯. ಎಷ್ಟು ಹೇಳಲಿ ಕೃಷ್ಣ ನಿನ್ನಯ

(ಧಾಟಿ: ಏನು ಮಾಯಮೋ ಚೇತಿಪೋತಿವೊ)

ರಾಗ: ಕಾಂಭೋಜಿ ತಾಳ: ರೂಪಕತಾಳ

ಎಷ್ಟು ಹೇಳಲಿ ಕೃಷ್ಣ ನಿನ್ನಯ ।
ದಿಟ್ಟತನವನು । ಈಗ ॥ ॥ ಪ ॥

ಸೃಷ್ಟಿಯೊಳಗೆ ನಿನ್ನ ಸಮಾನರ ।
ನೆಷ್ಟು ಮಾತ್ರವೂ ಕಾಣಲಿಲ್ಲವೊ ॥ ॥ ಅ.ಪ. ॥

ಶಂಖಚಕ್ರಂಗಳಿಂ । ದಂಕಿತನಾಗಿಯೆ ।
ಬಿಂಕದಿ ದೇವಕಿ । ಯಂಕದೊಳಾಡುತ ॥
ಹುಂಕೃತಿಯಿಂದಲೆ । ರಾಕ್ಷಸರನು ನಿ ।
ಶ್ಯಂಕೆಯಿಂದ ನಿಗ್ರಹ ಮಾಡಿದೆ ॥ ॥ ೧ ॥

ಯಮುನೆಯ ವೇಗವ ದಮನವ ಮಾಡಿದೆ ।
ಯಮಳಾರ್ಜುನಭಂಜನನೆಂದೆನಿಸಿದೆ ॥
ಅಮಿತಶೌರ್ಯದಿ ಗಿರಿಯನೆ ಎತ್ತಿದೆ ।
ಕ್ರಮದಿಂ ಹಾವಿನ ತಲೆಯೊಳಾಡಿದೆ ॥ ॥ ೨ ॥

ಪಾರಿಜಾತಸುಮಜಾಲವ ನೀನಪ ।
ಹಾರವ ಮಾಡಿದೆ ಗೋಪಿಕಾಸ್ತ್ರೀಯರ ॥
ಸೀರೆಗಳನು ಸೂರೆ ಮಾಡಿದೆ ।
ಧೀರ ವೀರರವೀರ ಚಿನ್ಮಯ ॥ ॥ ೩ ॥

* * *

೩೦. ನಿನ್ನನಾಶ್ರಯಿಸುವೆ ಗೋಕುಲೇಶ

(ಧಾಟಿ: ಮಂಗಲಂ ತೇ ದೈವತ ನಾಮಚರಣ)

ರಾಗ: ಶಂಕರಾಭರಣ ತಾಳ: ತ್ರಿಪುಟೆ

ನಿನ್ನನಾಶ್ರಯಿಸುವೆ ಗೋಕುಲೇಶ ।
ಮನ್ನಿಸಯ್ಯ ಎನ್ನ ಶ್ರೀಶ ॥ ॥ ಪ ॥

ನಂದಗೋಪವಂಶಾಂಬುಧಿ ಚಂದ್ರ ।
ಕುಂದರದನ ಸದ್ಗುಣಗಣಸಾಂದ್ರ ।
ಜಿತದೇವೇಂದ್ರ ಕೇಳುಪೇಂದ್ರ ॥ ॥ ೧ ॥

ಧೇನುಧೂಳಿ ಧೂಸರಿತಾಂಗರಾಗ ।
ದಾನವಾರಿ ಸಂಸ್ತುತ ಭೂರಿಭೋಗ ।
ಬಾರೊ ಈಗ ಕಾಯೊ ಬೇಗ ॥ ॥ ೨ ॥

ಶಾರದೇಂದು ಸಮಮೃದು ಮಂದಹಾಸ ।
ನೀರದಾಭ ಮಂಜುಳತನುಭಾಸ ॥
ಬಾರೊ ಶ್ರೀಶ ಚಿದ್ವಿಶೇಷ ॥ ॥ ೩ ॥

* * *

೩೧. ಒಮ್ಮೆಯಾದರೂ ಆ ಕುಡಿನೋಟವು

(ಧಾಟಿ: ಶ್ರೀ ಶಂಭೋ ಕಲ್ಯಾಣಮೂರ್ತೆ)

ರಾಗ: ಸುರಟಿ - **ತಾಳ: ಚತುರಶ್ರ ಏಕತಾಳ**

ಒಮ್ಮೆಯಾದರೂ ಆ ಕುಡಿನೋಟವು ।
ಎಮ್ಮನೋಡಲಿ । ಶ್ರೀ ಹರಿ ಅದು ॥ ॥ ಪ ॥

ಚರಣವ ಬಾಯೊಳಗಿರಿಸಿಕೊಳ್ಳುತ ।
ಕಿರುನಗೆಯಿಂ ತಾಯ್ತಂದೆಗಳ ॥
ನಿರುಕಿಸಿ ನೋಡುವ ಬೆಡಗಿನ ನೋಟದ ।
ಪರಿಯತೋರುತ ॥ ॥ ೧ ॥

ಮೊಸರಿನ ಗಡಿಗೆಯೊಳಿರಿಸುತ ಕಯ್ಯನು ।
ಕೊಸರುತ ಗೋಪಿಯ ಕೈಗಳನು ॥
ದೆಸೆಗಳನೆಲ್ಲಾ ನೋಡುವ ನೋಟದ ।
ಪರಿಯ ತೋರುತ ॥ ॥ ೨ ॥

ಪ್ರಣಯ ಕಲಹದಲಿ । ಮುನಿದರಾಧೆಯ ಕೂಡೆ ।
ಸೆಣಸುತ ಆಕೆಯನಗಲುತಲೇ ॥
ಮನದೊಳು ತಡೆಯದೆ । ನೋಡಿದ **ಚಿತ್ಪ್ರಭೆ** ।
ಯಿರವ ತೋರುತ ॥ ॥ ೩ ॥

* * *

೩೨. ಆಟಪಾಟಂಗಳ ತೋರಿಸೊ

(ಧಾಟಿ: ಹಿಮಗಿರೀಂದ್ರ ಸುತಾತ್ಮಜ)

ರಾಗ: ಬೇಹಾಗ್ ತಾಳ: ಚತುರಶ್ರ ಏಕತಾಳ

ಆಟಪಾಟಂಗಳ ತೋರಿಸೊ । ನಿ(ನ್ನಾ) ॥ ॥ ಪ ॥

ಗೋಕುಲದಲ್ಲಿ ನೀ ತೋರಿದ ॥ ॥ ಅ.ಪ. ॥

ವೃಂದಾವನದಿ ರಾಧೆಗಾ ।
ನಂದವನೀಯುವಾಗ ಬಹು ।
ಚಂದ–ವಾ–ದ ವಿನೋ–ದದ ॥ ॥ ೧ ॥

ಭೂಸುರಪತ್ನಿ ಇತ್ತ ।
ಗ್ರಾಸವನುಣ್ಣುತಲಿ ಮೃದು ।
ಭಾ–ಷೆಯಿಂ–ದ ಮಾ–ತನಾ–ಡಿದ ॥ ॥ ೨ ॥

ಧೇನುಗಣವನೆಲ್ಲ ।
ಗಾನದಿ ಸೋಲಿಸುತ ।
ಪರಿಪೂ–ರ್ಣವಾ–ದ ಚಿ–ದ್ವಿಲಾ–ಸದ ॥ ॥ ೩ ॥

* * *

೩೩. ವರವನನುಗ್ರಹಿಸೊ

(ಧಾಟಿ: ಮೂರುತಿಯನು ನಿಲಿಸೊ)

ರಾಗ: ಕಾಂಭೋಜಿ ತಾಳ: ಮಿಶ್ರಛಾಪು

ವರವನನುಗ್ರಹಿಸೊ । ಶ್ರೀಹರಿಯೆನಗೆ ॥ ॥ ಪ ॥

ಗುರುಗಳೆಂದೆನ್ನದೆ । ಹಿರಿಯರೆಂದೆನ್ನದೆ ।
ಇರುವ ಅವಿನಯವು । ಕರಗಿಹೋಗುವ ಹಾಗೆ ॥ ॥ ೧ ॥

ಹೊರಹೊರಗೇ ಬಹು । ಹರಿಯುತ್ತಲಿಹಮನವು ।
ಮರೆಯದೆ ನಿನ್ನಲ್ಲಿ । ಸ್ಥಿರವಾಗಿರುವ ಹಾಗೆ ॥ ॥ ೨ ॥

ಮೋಹದಿಂದಾಗಲಿ । ಸ್ನೇಹದಿಂದಾಗಲಿ ।
ದೇಹವೆ ನಾನೆಂದು । ಊಹಿಸದಿರುವಂತೆ ॥ ॥ ೩ ॥

ಎಲ್ಲಾ ಸೃಷ್ಟಿಯನು ನಿ । ನ್ನಲ್ಲಿ ನೋಡುವ ಮತ್ತೆ ।
ಎಲ್ಲಾಬಗೆಯ ಸೃಷ್ಟಿ । ಯಲ್ಲಿ ನಿನ್ನನು ಕಾಣ್ಬ ॥ ॥ ೪ ॥

ವಿಷಯದ ಬಯಕೆಯ । ವಿಷದಂತೆ ಭಾವಿಸಿ ।
ಕೃಶವಾಗಿ ಮನವು ನಿ । ರ್ವಿಷಯವಾಗಿರುವಂತೆ ॥ ॥ ೫ ॥

* * *

೩೪. ಶರಣು ಶರಣು ಶರಣು

(ಧಾಟಿ: ರಾಮನಾಮ ಭಜಿಸಿದವರಿಗುಂಟೆ)

ರಾಗ: ಕಾನಡ ತಾಳ: ರೂಪಕ

ಶರಣು ಶರಣು ಶರಣು ಪರಮ ।
ಪುರುಷನಾದ ಶ್ರೀಹರಿ ॥ ॥ ಪ ॥

ಶರಣು ಸಂಸಾರದುಃಖವ ।
ಪರಿಹರಿಪ ಸಮರ್ಥ ನೀನೇ ॥ ॥ ಅ.ಪ. ॥

ಗುರುಗಳಿಂದ ತಿಳಿದು ನಿನ್ನ ।
ಪರಿಯನು ವೈರಾಗ್ಯದಿಂದ ॥
ಪರಮಭಕ್ತಿಯನ್ನು ಪಡೆದು ।
ವರಯತಿಗಳು ನೆನೆಯುತಿಹರು ॥ ॥ ೧ ॥

ಪ್ರಾಣವಾಯುವನ್ನು ಹಿಡಿದು ।
ಮೌನದಿಂದ ಸೃಷ್ಟಿಯೆಲ್ಲವ ॥
ಮಾಣದೆ ಲಯಮಾಡಿ ನಿನ್ನನು ।
ಕಾಣುವರಾಮುನಿಗಳೆಲ್ಲ ॥ ॥ ೨ ॥

ನನ್ನದು ನಾನೆಂಬ ಭಾವವ ।
ಕುನ್ನಿಯಂತೆ ದೂರಮಾಡಿ ॥
ತನ್ನತಾನು ಕಳೆಯಲರಿವ ।
ನಿನ್ನು ನಿನ್ನ ಚಿನ್ಮಯಾತ್ಮನ ॥ ॥ ೩ ॥

* * *

೩೫. ಹಾಡಿ ಹೊಗಳಲೆಷ್ಟೋ ಸುಖವಹುದು

(ಧಾಟಿ: ರಾಮನಾಮವನ್ನು ನೆನೆ ಮನವೇ)

ರಾಗ: ಮೋಹನ ತಾಳ: ಏಕತಾಳ

ಹಾಡಿ ಹೊಗಳಲೆಷ್ಟೋ ಸುಖವಹುದು ।
ಶ್ರೀಹರಿಯ ಲೀಲೆಯ ॥ ॥ ಪ ॥

ಗಾಢಪ್ರೇಮಗೂಡಿ ಭಜನೆ ।
ಮಾಡಿದರೆ ಕಾಪಾಡುವ ಶೌರಿಯ ॥ ॥ ಅ.ಪ. ॥

ವೇದಗಳನು ಕದ್ದುಕೊಂಡು ।
ಹೋದ ದಾನವನನು ಕೊಂದು ॥
ಮೇದಿನಿಗಾವೇದಗಳನು ।
ಸಾಧಿಸಿ ತಂದ ಮತ್ಸ್ಯವಿಲಾಸವ ॥ ॥ ೧ ॥

ಕಡಲಕಡೆವ ಮೇರುಗಿರಿಗೆ ।
ಬಿಡದೆ ತನ್ನ ಬೆನ್ನಕೊಟ್ಟು ॥
ಸಡಗರದಿಂ ಸುರರ ಪೊರೆಯೆ ।
ಪಡೆದ ಕೂರ್ಮವೇಷದ ಬೆಡಗ ॥ ॥ ೨ ॥

ಶರಧಿಯ ತಳಕಿಳಿದ ಧರೆಯ ।
ತಿರುಗಿ ಕೋರೆದಾಡೆಯಿಂದ ॥
ಕೊರೆದು ತಂದು ನೆಲೆಗೆ ನಿಲ್ಲಿಸೆ ।
ಹರಿ ವರಾಹನಾದ ಪರಿಯ ॥ ॥ ೩ ॥

ಹುಡುಗನ ಹೃದಯಕ್ಕೆ ಮೆಚ್ಚಿ ।
ಘುಡುಘುಡಿಸುತ ಕಂಬದಿಂದ ॥
ಒಡೆದುಮೂಡಿ ದುಷ್ಟದೈತ್ಯನ ।
ಬಡಿದು ನಾರಸಿಂಹನ ರೀತಿಯ ॥ ॥ ೪ ॥

ದಾನವನ್ನು ಕೊಳ್ವನೆವದಿ ।
ದಾನವೇಂದ್ರನನ್ನು ತುಳಿದು ।
ಕ್ಷೋಣಿಯೆಲ್ಲವ ಬಳಸಿಕೊಂಡ ।
ಮಾನನೀಯ ವಾಮನರೂಪವ ॥ ೫ ॥

ಧರೆಯನೆಲ್ಲ ತಿರುತಿರುಗಿ ।
ದುರುಳರಾದ ಕ್ಷತ್ರಿಯರ ॥
ಅರೆದು ತಿಕ್ಕಿಮುಕ್ಕಿದಂಥ ।
ಪರಶುರಾಮನ ಜೈತ್ರಯಾತ್ರೆಯ ॥ ॥ ೬ ॥

ಧರಣಿಗೆಲ್ಲ ಕಂಟಕನಾದ ।
ದುರುಳದಶಶಿರನನು ಕೊಂದು ॥
ಶರಣಜನರಿಗಭಯವಿತ್ತು ।
ಮೆರೆದ ರಾಮಚಂದ್ರ ಚರಿತ್ರೆಯ ॥ ॥ ೭ ॥

ನರನಿಗೆ ಸಖನೆನಿಸಿಕೊಂಡು ।
ಕುರುಕುಲವನು ಧೂಳಿಗೈಸಿ ।
ಶರಣರನುದ್ಧಾರ ಮಾಡಿದ ।
ತರುಣಕೃಷ್ಣನ್ನ ಮುದ್ದುವೇಷವ ॥ ॥ ೮ ॥

ಧರೆಯನೆಲ್ಲ ತನ್ನಂತೆ ।
ಅರಿದು ಕರುಣಾಪೂರ್ಣರಾಗಿ ॥
ಇರುವದನುಪದೇಶಮಾಡಿದ ।
ಪರಮಪೂಜ್ಯ ಬುದ್ಧನ ಬುದ್ಧಿಯು ॥ ॥ ೯ ॥

ದುರುಳರನ್ನು ಶಿಕ್ಷಿಸುತ ।
ಶರಣರನ್ನು ರಕ್ಷಿಸುತ ॥
ನೆರೆಕಲಿಮಲ್ಲನನ್ನು ಕಳೆದು ।
ಪೊರೆವ ಕಲ್ಕಿಯ ಚಿದ್ವಿಶೇಷವ ॥ ॥ ೧೦ ॥

* * *

೩೬. ತೋರಬಾರದೆ ಚಾರುಮುಖವ

(ಧಾಟಿ: ಎಂದಿಗಹುದೊ ತಂದೆಯೇ ನಿನ್ನ ಸದರುಶನ)

ರಾಗ: ಜುಂಜೂಟಿ ತಾಳ: ರೂಪಕ

ತೋರಬಾರದೆ । ಚಾರುಮುಖವ ।
ಸಾರಸಾಕ್ಷನೆ । ದೇವ ॥ ॥ ಪ ॥

ಬಾರಿಬಾರಿಗು ಹುಡುಕಿ ನಿನ್ನ ।
ದಾರಿ ಕಾಣದೆ ತೊಳಲುವೆನಯ್ಯ ॥ ॥ ಅ.ಪ. ॥

ಎಲ್ಲ ಕಡೆಯೊಳಿರುವನೆಂಬ ।
ಬಲ್ಲಜನಗಳ (ದೇವ) ॥
ಸೊಲ್ಲು ನಿಶ್ಚಯವಾಗುವದಾದರೆ ।
ಫುಲ್ಲನಾಭನೆ ಇಲ್ಲಿಯೇ ನೀನು ॥ ॥ ೧ ॥

ಹಿಂದೆ ಮುಂದೆ ಇಂದೂ ಇರುವೆ ।
ಎಂದು ಪೇಳ್ವುದು (ದೇವ) ॥
ಚಂದದಿಂದಲೊಪ್ಪುವಂತೆ ।
ಮುಂದೆ ಬಂದು ಇಂದೇ ನೀನು ॥ ॥ ೨ ॥

ಎಲ್ಲ ವಸ್ತುಗಳಲ್ಲಿಹುದನು ।
ಸುಳ್ಳಮಾಡದೆ (ದೇವ) ॥
ಉಳ್ಳ ದಯೆಯೊಳೆನ್ನ ಹೃದಯ ।
ದಲ್ಲಿ ಚಿನ್ಮಯ ರೂಪಿನಿಂದ ॥ ॥ ೩ ॥

* * *

೩೭. ಏನಿದು ಪೇಳ್ಭಕ್ತಪರಾ

(ಧಾಟಿ: ಪಾಲಿಸು ಶ್ರೀ ಪ್ರಾಲೇಯ ಪರ್ವತಬಾಲೆ)

ರಾಗ: ಖಮಾಚ್ ತಾಳ: ರೂಪಕ

ಏನಿದು ಪೇಳ್ಭಕ್ತ ಪರಾ । ಧೀನತೆ ದೇವ ॥ ॥ ಪ ॥

ಮೂರು ಲೋಕದೊಡೆಯನಾಗಿ ।
ಧಾರಿಣಿಯೊಳ್ಮೆರೆವ ನಿನಗೆ ॥ ॥ ಅ.ಪ. ॥

ಧರೆಯೊಳಗೆ ಕಬೀರಗಾಗಿ । ಪರಿಪರಿಯಾದ ।
ಪರವಸ್ತ್ರವನ್ನು ನೆಯ್ದು ।
ಪರಮಪುರುಷ ಶ್ರೀರಮೇಶ ॥ ॥ ೧ ॥

ಹರುಷದಿ ದಾಮಾಜಿಯೆಂಬ ಶರಣನಬಳಿಯೊಳ್ ।
ಪರಿಚರ್ಯೆಯನ್ನು ಗೈದ ।
ಗರುಡಧ್ವಜ ಸರಸಿಜಾಕ್ಷ ॥ ॥ ೨ ॥

ಜನಿಯೆನುತ್ತ ಹೆಸರುಪಡೆದ ವನಿತೆಗೆ ತಾನು ।
ಅನುವಿಂ ವಸ್ತ್ರಗಳನೊಗೆದ ।
ವನಜಾಯತದೀರ್ಘನಯನ ॥ ॥ ೩ ॥

ನೆರೆ ಸಜ್ಜನನೆಂಬ ಕಟುಕ । ನಂಗಡಿಯಲ್ಲಿ ।
ಭರದಿಂ ಮಾಂಸವ ಮಾರಿದ ।
ಶರದಿಂದು ಸುಮಂದಹಾಸ ॥ ॥ ೪ ॥

ಆದರದಿಂದೇಕನಾಥ । ಸಾಧುಗೃಹದೊಳು ॥
ಭೇದವಿಲ್ಲದೆ ನೀರಹೊತ್ತ ।
ಮಾಧವ ಮಧುರಿಪು ಚಿನ್ಮಯ ॥ ॥ ೫ ॥

* * *

೩೮. ಇದು ಚಿತ್ರವೇ ಸರಿ

(ಧಾಟಿ: ನಮೋಸ್ತು ಭಾನವೇ)

ರಾಗ: ಕಮಾಚ್ ತಾಳ: ರೂಪಕ

ಇದು ಚಿತ್ರವೇ ಸರಿ । ಮಧುರೇಶ ಶ್ರೀಹರಿ ॥ ॥ ಪ ॥

ವರಯತಿಗಳು ನಿನ್ನ ಹಿಡಿಯ । ಲರಿಯದಿರುತಿರೆ ।
ವರಳಕಲ್ಲಿಗೆ ಕಟ್ಟಿಬಿದ್ದ । ಪರಿಯ ನೋಡಲು ॥ ॥ ೧ ॥

ನೋಡೆ ಶಬ್ದಮೂಲ ನೀನು । ನಾಡಗೊಲ್ಲರಾ ।
ಹಾಡಿಗೆ ಮೈಮರೆಯುತಿದ್ದ ॥ ಪಾಡನೋಡಲು ॥ ॥ ೨ ॥

ಕೂದಲೆಳೆಯೊಳಬ್ಧಿ ಇರಲು । ಯಾದವನಾಗಿ ।
ಕಾದ ಬೊಗಸೆನೀರ ಸ್ನಾನ । ಗೈದರೀತಿಯ ॥ ॥ ೩ ॥

ಎಲ್ಲವನ್ನು ತಿಳಿದ ನೀನು । ಗೊಲ್ಲ ಹೆಣ್ಗಳಾ ।
ಸೊಲ್ಲಿನಿಂದ ಮಾತಕಲಿತ । ಫುಲ್ಲನಯನನೆ ॥ ॥ ೪ ॥

ಧರಣಿಗೆ ಆಧಾರನಾಗಿ । ತರುಣಿಯರುಗಳಾ ।
ಬೆರಳಹಿಡಿದು ತಪ್ಪುಹೆಜ್ಜೆ । ಇರಿಸುತಿರುವದು ॥ ॥ ೫ ॥

ನೆಲವೆ ಬಸಿರೊಳಡಗಿರಲ್ಕೆ । ಒಲಿದುಗೊಲ್ಲರಾ ।
ಲಲನೆಯರಾ ತೊಡೆಯೊಳಡಗಿ । ಮಲಗುತಿರುವದು ॥ ॥ ೬ ॥

ತಿಳಿಯೆ ಚಿದ್ರೂಪನಾಗಿ । ಬಲಿದ ಮೋಹವ ।
ತಳೆದ ಬಾಲನಂತೆ ಅಳುತ । ಮೊಲೆಯಕುಡಿವುದು ॥ ॥ ೭ ॥

* * *

೩೯. ಎಂದಿಗೆ ನಾ ನೀ ಸುಖವನನುಭವಿಸುವೆನೊ

(ಧಾಟಿ: ಅಂಗಜಮದಹರ ತವಜಯ ಮಂಗಳಂ)

ರಾಗ: ಕಮಾಚ್ ತಾಳ: ರೂಪಕ

ಎಂದಿಗೆ ನಾ ನೀ ಸುಖವನುಭವಿಸುವೆನೊ ॥ ॥ ಪ ॥

ಇಂದುವ ಮೀರಿಸಿಹ । ಇಂದಿರೆಯರಸನ ।
ಸುಂದರವದನವನಾ । ನಂದದಿ ನೋಡುತಿರುತ ॥ ॥ ಅ.ಪ. ॥

ಹರಿಯನು ಪೂಜಿಸುತ । ಪರಿಪರಿವಿಧದಿ ।
ಹೊರಗಣವಸ್ತುಗಳ । ಮರೆಯುತ ಇದ್ದಲ್ಲಿಯೆ ।
ಇರುತಲಿ ಆ ಶ್ರೀಹರಿಗೆ । ಶರಣೆನುತಿರುತಿರುತ ॥ ॥ ೧ ॥

ದೇವನಚರಿತೆಯ । ಕೇಳುತ ಕೇಳುತ ಆ ।
ವಿಧವಾದ ಭಕ್ತಿ । ಭಾವದಿ ಮೈಯ ಮರೆತು ।
ಪಾವನರೂಪಾಬ್ಧಿಯೊಳು । ಆವಗಮುಳುಗಿರುತಲ್ಲಿ ॥ ೨ ॥

ನಾಮವ ಕೀರ್ತಿಸುತ । ಪ್ರೇಮದ ಭರದಿ ।
ರೋಮವು ಹುರಿಯೇರೆದ । ನೇಮದಿ ಬೆವರಿರೆ ।
ಆ ಮಹಿಮೆಯ ಮುಖದ । ಸೀಮೆಯನಾವರಿಸಿರೆ ॥ ॥ ೩ ॥

ದಡದಡ ಸುರಿಸುತ । ಕುಡಿತೆಯ ಕಣ್ಣನೀರ ।
ಗಡಗಡ ನಡುಗುತ । ನುಡಿಯೊಳು ತೊದಳುತ ।
ಸಡಗರದಿ ಮೃಡಸಖನ । ಅಡಿಯನು ಹಿಡಿದಿರುತ ॥ ॥ ೪ ॥

ಆದುದನೆಲ್ಲವನು । ಮಾಧವಗೊಪ್ಪಿಸಿ ।
ಭೂಧವನಾದಾತನ । ಪಾದವ ಮರೆಯದೆ ।
ಆದರದಿಂದ ಚಿದ್ವಿ । ನೋದವ ನೋಡುತಿರುತ ॥ ॥ ೫ ॥

* * *

೪೦. ನಿನ್ನನೊಲಿಸಿಕೊಳ್ಳಲಾರೆನೊ

(ಧಾಟಿ: ಪಶುಪತಿಗತಿಮಾತನಮ್ಮಿತಿ)

ರಾಗ: ಕೇದಾರಗೌಳ ತಾಳ: ರೂಪಕ

ನಿನ್ನನೊಲಿಸಿಕೊಳ್ಳಲಾರೆನೊ ॥ ॥ ಪ ॥

ನಿನ್ನನೊಲಿಸಲಾರೆ ಹರಿಯೆ ।
ಎನ್ನ ಯತ್ನದಾರ್ಢ್ಯದಿಂದ ॥
ಇನ್ನು ಕರುಣದಿಂದ ನೀನೇ ।
ಎನ್ನನು ಕೈ ಹಿಡಿಯಬೇಕು ॥ ॥ ಅ.ಪ. ॥

ಅರಸನಾದ ಪರೀಕ್ಷಿತನ್ನ । ತೆರದಿಶ್ರವಣ ಮಾಡಲರಿಯೆ ॥
ವರಶುಕಮುನಿಯಂದದೊಳಾ ।
ದರದಿಂ ಕೀರ್ತಿಸುವದನರಿಯೆನೊ ॥ ॥ ೧ ॥

ದನುಜಕುವರನಂತೆ ನಿನ್ನ । ಮನದಿ ನೆನೆಯಲಾರೆನೊ ॥
ವನಜನಿಲಯಂತೆ ಪದವ ।
ನನಿಶವು ಸೇವಿಸುವದನರಿಯೆನೊ ॥ ॥ ೨ ॥

ಪೃಥುಮಹಾರಾಜನಂತೆ । ಪೂಜೆ ಮಾಡಲರಿಯೆನೊ ॥
ಹಿತದೊಳಗಕ್ರೂರನಂತೆ ।
ಸತತವು ನಿನಗೆರಗುವದರಿಯೆನೊ ॥ ॥ ೩ ॥

ಹನುಮನಂತೆ ದಾಸ್ಯ ಮಾಡಿ । ಘನತೆಪಡೆಯಲಾರೆನೊ ।
ಮನದೊಳು ನರನಂತೆ ಗೆಳೆಯ ।
ತನದೊಳು ನಾವರ್ತಿಸಲಾರೆನೊ ॥ ॥ ೪ ॥

ಬಲಿಯಂದದಿ ಆತ್ಮನಿವೇ । ದನವ ಮಾಡಲಾರೆನೊ ।
ನಲವಿಂದಲಿ **ಚಿದ್ರೂಪ**ದ ।
ನೆಲೆಯನು ನಾ ಕಾಣುವದರಿಯೆನೊ ॥ ॥ ೫ ॥

* * *

೪೧. ಸರಿಯಲ್ಲವೊ

(ಧಾಟಿ: ಮರಚಿತಿವೊ)

ರಾಗ: ಕಾಂಬೋಜಿ ತಾಳ: ಅಟ್ಟತಾಳ

ಸರಿಯಲ್ಲವೊ । ಕಣ್ಣಾಮುಚ್ಚಾಲೆಯು ।
ಕರುಣಾಭರಣಾ ನೋಡೆ ನಿನಗಿದು ॥ ॥ ಪ ॥

ಹರಿಯ ಬೇಡುವೆ ಸೆರಗನೊಡ್ಡುತ ॥ ॥ ಅ.ಪ. ॥

ಮರೆವೆಂಬ ನೆಪ್ಪದ । ಪರೆಯಿಂದಲೆನ್ನಯ ।
ಎರಡು ಕಣ್ಣುಗಳ ಕಟ್ಟಿ ॥
ತಿರುಗಿನಾ । ಸೊರಗುವದ ನೋಳ್ಪುದು
ಸರಸವೇನಯ್ಯ ನಿನಗಿದು ॥ ॥ ೧ ॥

ಎಲ್ಲರ ನೋಡುತ । ಯಾರಿಗೂ ಕಾಣದೆ ।
ಎಲ್ಲಡಗಿರುತಿಹೆಯೊ ॥
ಮೆಲ್ಲಗೆನ್ನಯ । ಗೋಳ ಕೇಳುತ ।
ಸೊಲ್ಲು ತೋರದೆ ಇರುವನು ॥ ॥ ೨ ॥

ಬಗೆಬಗೆಯ ರೂಪವ । ಮಿಗೆ ತಾಳಿದರೆ ನಿನ್ನ ॥
ಬಗೆಯನು ಅರಿವೆನೆಂತೊ ॥
ಸುಗುಣನಿಧಿಯೇ ಚಿದ್ವಿಲಾಸದ ।
ಬಗೆಯ ತೋರದೇ ಇರುವದು ॥ ॥ ೩ ॥

* * *

೪೨. ಕಮಲಾನಾಥ ಹರಿಗೋವಿಂದ

(ಧಾಟಿ: ಹರಿಹಾ ಆನಂದಾಚಾಕಂದ)

ರಾಗ: ಮುಖಾರಿ ತಾಳ: ಏಕತಾಳ

ಕಮಲಾನಾಥ ಹರಿಗೋವಿಂದ ಜಯ ಜಯ
ಕಮಲದಳಾಕ್ಷ ಮುಕುಂದ ॥ ॥ ಪ ॥

ಕರುಣಾಪಾರ ವಾರಗಭೀರ ।
ಶರಣಾಗತ ಸಂರಕ್ಷಣ ಧೀರ ॥ ॥ ೧ ॥

ನವಜಲದದ್ಯುತಿ ಭಾಸುರ ದೇಹ ।
ಭವಭಯಹರ ಭಕ್ತಾವಳಿಗೇಹ ॥ ॥ ೨ ॥

ರಾಧಾಧರ ಮಧುಮಧುರಿಮ ರಸಿಕ ।
ಯಾದವನಂದನ ಶಶಿಕುಲ ತಿಲಕ ॥ ॥ ೩ ॥

ಯಮುನಾತೀರವಿಹಾರ ವಿನೋದ ।
ಯಮಳಾರ್ಜುನಭಂಜನ ಚಣಪಾದ ॥ ॥ ೪ ॥

ಪೀತಾಂಬರಧರ ಪದ್ಮೋದ್ಭವ ಪಿತ ।
ಮಾತುಲರಿಪು ಗೋರಕ್ಷಣನಿರತ ॥ ॥ ೫ ॥

ಶ್ರೀವತ್ಸಾಂಕಿತ ಮಂಜುಲಹೃದಯ ।
ದೇವದೇವಕೀ ಗೋಪೀತನಯ ॥ ॥ ೬ ॥

ಗೋಪಸ್ತ್ರೀ ವಸ್ತ್ರಾಪಹಾರಕ ।
ಪಾಪನಿರತದನುಜಾವಳಿಮಾರಕ ॥ ॥ ೭ ॥

ಮಧುರಾಕೃತಿಯುತ ಮಧುರಾನಾಥ ।
ಮಧುಸೂದನ ಮಾಧವ ಲಕ್ಷ್ಮೀರತ ॥ ॥ ೮ ॥

ವಸುದೇವಾತ್ಮಜನ ವಾಸವವಿನುತ ।
ಶಿಶುಪಾಲ ಶಿರಚ್ಛೇದನನಿರತ ॥ ॥ ೯ ॥

ಪಾರಿಜಾತ ಸುಮಸಂಚಯಹರಣ ।
ನಾರಾಯಣ ನಳಿನಾಯತಲೋಚನ ॥ ॥ ೧೦ ॥

ಬೃಂದಾವನಾಂತ ಭೂಸಂಚಾರಿ ।
ಬೃಂದಾರಕ ಪತಿವಂದಿತ ಶೌರೀ ॥ ॥ ೧೧ ॥

ನರಕಾಂತಕ ಗೋಪಸ್ತ್ರೀಕಂದ ।
ಗರುಡಗಮನ ಚಿದ್ರೂಪಾನಂದ ॥ ॥ ೧೨ ॥

* * *

೪೩. ಶ್ರೀಪತಿ ನೀ ಗತಿ

(ಧಾಟಿ: ಧರ್ಮಸಂವರ್ಧಿನಿ)

ರಾಗ: ಕಾಪಿ ತಾಳ: ಏಕತಾಳ

ಶ್ರೀಪತಿ ನೀ ಗತಿ ದಿವ್ಯಸುಖದ ಮೂರುತಿ ॥ ॥ ಪ ॥

ಅಪಾರ ದುಃಖಿ ನಾನು
ಕೃಪೆಯಿಂ ಪೊರೆ ದೇವದೇವ ॥ ॥ ಅ.ಪ. ॥

ಶ್ರೀಕರವರ ವೈಕುಂಠ ಕೈಕನಿಲಯಮಹಾ ।
ಭೀಕರ ಪಾಪಾಂಧಕಾರ ।
ರಾಕಾ ಹಿಮಕಿರಣರು ಚಿರ ॥ ೧ ॥

ಪಾಕಾಶಾಸನಾದಿ ಸುರಾ ।
ನೀಕ ಸೇವಿತಾಂಘ್ರಿಯುಗ । ಶ್ರೀ ಕೃಷ್ಣ ಗರುಡಗಮನ
ಸಾಕಾರ ಪರಬ್ರಹ್ಮ ॥ ೨ ॥

ಕೇಶವ ನಾರಾಯಣ । ವಾಸುದೇವ ಮಾಧವ ।
ವಾಸವಾದಿವಿಬುದವಿನುತ । ದೋಷರಹಿತ ದಾಮೋದರ ॥
ಶೇಷರಾಜಶಯನ ಕಾಲ ಪಾಶಾವಳಿ ಬಂಧಹರಣ ।
ಈಶಾನ ಪರಮಮಿತ್ರ ದಾಸಜನ ಸ್ತೋತ್ರಪಾತ್ರ ॥ ॥ ೩ ॥

ಚಂಡಭಾನು ರುಚಿರತೇಜ ಪಾಂಡವಜನಕಲ್ಪ ಭೂಜ ।
ಖಂಡಿತ ದಾನವ ಜನ ಭೂ । ಮಂಡಲ ಪಾವನಚರಣ ॥
ಭಂಡತನವ ತಾಳಿ ಭವದ । ಗುಂಡಿಯಲ್ಲಿಯೇ ಬಿಡದೆ ।
ಅಂಡಲೆವುದ ತಪ್ಪಿಸು ಬ್ರಹ್ಮಾಂಡ ಗರ್ಭ ಚಿದ್ಘನ ॥ ॥ ೪ ॥

* * *

೪೪. ಹೊಗಳಬಲ್ಲೆನೆ ಶ್ರೀ ಕೃಷ್ಣ ನಿನ್ನ

(ಧಾಟಿ: ಸ್ಮರಣೇ ಸುಖಮು ರಾಮನಾಮ)

ರಾಗ: ಕಾನಡ ತಾಳ: ಏಕತಾಳ

ಹೊಗಳಬಲ್ಲೆನೆ ಶ್ರೀ ಕೃಷ್ಣ ನಿನ್ನ ।
ಅಗಣಿತಗುಣಗಣಗಳ ನಾನು ॥ ॥ ಪ ॥

ಜಗವೆಲ್ಲ ನೋಡುವಂತೆ ನೀ ।
ಮಗುವಾ ದಾಟಪಾಟವನ್ನು ॥ ॥ ಅ.ಪ. ॥

ಅರಿಯೆ ದೇವಕಿಯ ಗರ್ಭದಿಂದ ಹುಟ್ಟಿ ।
ನೆರೆಯ ಗೋಪಿಯ ಮನೆಯಲ್ಲಿ ಬೆಳೆದು ॥
ಧರೆಯಲ್ಲಿ ಗೋಪನಾಗಿ ನೀ ।
ನಿರುತ ಗೋವಕಾಯ್ದುದನ್ನು ॥ ॥ ೧ ॥

ಮೊಲೆಯ ಹಿಡಿದು ಜೀವ ಕಲೆಯನೆಲ್ಲ ಹೀರಿ ।
ಛಲದಿ ಬೆಟ್ಟದ ಕೊಡೆಯ । ಹಿಡಿದು ತೋರಿ ॥
ಬಲು ದಿಟ್ಟನಾಗಿ ಗೋಗಳ ।
ಕುಲವ ಪೊರೆದ ಮಹಿಮೆಯನ್ನು ॥ ॥ ೨ ॥

ಹರುಷದಿಂದ ನೀನು ಪಾಂಡವರ ಕೂಡಿ ।
ಕುರುವಂಶವನ್ನು ಧೂಳಿಯ ಮಾಡಿ ॥
ಧರೆಗೆಲ್ಲ ಶಾಂತಿಯೀಯುತ ।
ಮೆರೆದ ಚಿತ್ಸ್ವರೂಪವನ್ನು ॥ ॥ ೩ ॥

* * *

೪೫. ಇನ್ನೆಂತು ನಾ ಪಾರಾಗುವೆ

(ಧಾಟಿ: ಸೀತಾಪತೇ ನಾ ಮನಸುನಾ)

ರಾಗ: ಕಮಾಚ್ ತಾಳ: ಆದಿತಾಳ

ಇನ್ನೆಂತು ನಾ ಪಾರಾಗುವೆ ॥ ॥ ಪ ॥

ನಾರಾಯಣ । ಮುರಳೀಧರ । ಕರುಣಾಕರ । ಲಕ್ಷ್ಮೀವರ ॥ ಅ.ಪ. ॥

ತನುವ ದಂಡಿಸುತ ತಪಿಸಲಿಲ್ಲವಲ್ಲ ।
ಮನವ ನಿಲ್ಲಿಸುತ ಜಪಿಸಲಿಲ್ಲವಲ್ಲ ॥
ಅನುವಾಗಿಹ ಮಾತಿನಿಂದ ।
ಮುನಿವಂದ್ಯ ನಿನ್ನ ಸ್ತುತಿಸಲಿಲ್ಲವಲ್ಲ ॥ ॥ ೧ ॥

ನಿನ್ನ ರೂಪವನ್ನು ಕಾಣಲಿಲ್ಲವಲ್ಲ ।
ನಿನ್ನ ಕೀರ್ತಿಯನ್ನು ಕೇಳಲಿಲ್ಲವಲ್ಲ ॥
ನಿನ್ನನುಗ್ರಹವನ್ನು ನಂಬಿಕೊಂಡು ।
ನಿನ್ನ ಪಾದಗಳ ಹಿಡಿಯಲಿಲ್ಲವಲ್ಲ ॥ ॥ ೨ ॥

ಸಾಧು ಸಂಗವನು ಮಾಡಲಿಲ್ಲವಲ್ಲ ।
ವೇದವಚನವ ನೋಡಲಿಲ್ಲವಲ್ಲ ॥
ಆದರದಿ ಗುರುವಿನಾಶೀ ।
ರ್ವಾದವನು ಪಡೆಯಲಿಲ್ಲವಲ್ಲ ॥ ॥ ೩ ॥

ಭಕ್ತಿಭಾವನೆಯ ಬೆಳೆಸಲಿಲ್ಲವಲ್ಲ ।
ಮುಕ್ತಿಸಾಧನೆಯ ಗಳಿಸಲಿಲ್ಲವಲ್ಲ ॥
ಯುಕ್ತಿಯಿಂದ ತತ್ತ್ವಾರ್ಥವರಿಯುವ ।
ಶಕ್ತಿಯೆನ್ನೊಳು ನೆಲೆಸಲಿಲ್ಲವಲ್ಲ ॥ ॥ ೪ ॥

ಶಾಂತಿದಾಂತಿಗಳ ಪಡೆಯಲಿಲ್ಲವಲ್ಲ ।
ಚಿಂತಿತಾರ್ಥಗಳ ತೊರೆಯಲಿಲ್ಲವಲ್ಲ ॥
ಸಂತತವು **ಚಿದ್ರೂಪದ** ।
ಚಿಂತನೆಯ ಮಾಡಲಿಲ್ಲವಲ್ಲ ॥ ॥ ೫ ॥

* * *

೪೬. ನೀನೆನಗಿದನರುಹಯ್ಯ

(ಧಾಟಿ: ನಾಮನವಿನಿ ವಿನಿವಯ್ಯ)

ರಾಗ: ಚಕ್ರವಾಕ ತಾಳ: ರೂಪಕ

ನೀನೆನಗಿದನರುಹಯ್ಯ । ನಿನ್ನ ನಿಜದ ತತ್ತ್ವವನ್ನು ॥ ಪಲ್ಲವಿ ॥

ಶ್ರೀನಿಕೇತನನೆ ನಿನಗೆ । ದೀನತೆಯಿಂದೆರಗುವೆನು ॥ ॥ ಅ.ಪ. ॥

ನೀನೇ ಮೊದಲಿದ್ದೆಯಂತೆ ।
ನೀನೇ ಕೊನೆಗಿರುವೆಯಂತೆ ॥
ನೀನೆ ಜಗವಾದೆಯಂತೆ ।
ನಿನ್ನಯ ಹೊರೆತಿಲ್ಲವಂತೆ ॥ ॥ ೧ ॥

ಎಲ್ಲಂತರಂಗ ನಿನ್ನದ ।
ರಲ್ಲಿಯೆ ಅಡಗಿರುವಂತೆ ॥
ಎಲ್ಲಾ ಬಗೆವಸ್ತುಗಳೊಳ ।
ಗೆಲ್ಲಾ ನೀನಿರುವೆಯಂತೆ ॥ ॥ ೨ ॥

ವೇದಕೆ ಗೋಚರಿಸೆಯಂತೆ ।
ಭೇದಕ ಬಹುದೂರನಂತೆ ॥
ಸಾಧಕರಿಗೆ ಚಿದ್ರೂಪದಿ ।
ಮೋದದಿ ನಲಿವೆಯಂತೆ ॥ ॥ ೩ ॥

* * *

೪೭. ಅವತರಿಸುವನು

ಅವತರಿಸುವನು । ಹರಿಯತಿದಯದೊಳು ॥ ॥ ಪ ॥

ಸುವಿಮಲ ಭಕ್ತರ । ಬವಣೆಯ ಬಿಡಿಸಲು ॥ ॥ ಅ.ಪ. ॥

ಧರ್ಮವು ಕುಗ್ಗಿ ದು । ಷ್ಕರ್ಮವು ಹಿಗ್ಗುತಿರೆ ।
ಧರ್ಮವ ಸ್ಥಾಪಿಸೆ । ಪೆರ್ಮೆಯಿಂದಲಿ ತಾ ॥ ॥ ೧ ॥

ಮುಕ್ತಿಗಾಗಿ ಸುವಿ । ರಕ್ತಿಯ ಹೊಂದಿದ ।
ಭಕ್ತಿವಂತರಾ । ಸಕ್ತಿಗೆ ಮೆಚ್ಚುತ ॥ ॥ ೨ ॥

ದಾಸಜನಕೆ ಬಹು । ಲೇಸು ಲೇಸೆಂಬಂತೆ ।
ಭಾಸುರಮಹ ಚಿ । ದ್ವೇಷವ ತೋರುತ ॥ ॥ ೩ ॥

* * *

೪೮. ಬಂದನೇ ಭಗವಂತನು

ಬಂದನೇ ಭಗವಂತನು । ಗೋವಿಂದ ಶ್ರೀ ಹರಿ ॥ ॥ ಪ ॥

ಅಂದದಿಂದ ಭಜಿಸಿದವರ ।
ಚಂದದಿಂದ ಕಾಯುವವನು ॥ ॥ ಅ.ಪ. ॥

ಜಗವನೆಲ್ಲ ಸೃಷ್ಟಿಗೈದು ।
ಬಗೆಯಂತರ್ಯಾಮಿಯಾಗಿ ॥
ಅಗಣಿತ ಗುಣಾಢ್ಯನಾಗಿ ।
ಬಗೆಗೆ ತೋರದಿರ್ದ ಹರಿಯು ॥ ॥ ೧ ॥

ಭಕ್ತಜನರ ದಾಸನಾಗಿ ।
ಭುಕ್ತಿಮುಕ್ತಿಯನೀವನಾಗಿ ॥
ಯುಕ್ತದೂರನಾಗಿ ಸರ್ವ ।
ಭೋಕ್ತನಾದ ಪರಮಾತುಮನು ॥ ॥ ೨ ॥

ನೆನೆವ ಕಾಲದಲ್ಲಿಯೇ ತಾ ।
ಮನದೊಳಾವಿರ್ಭಾವನಾಗಿ ॥
ಅನುಭವದೊಳೇ ತೋರಿಕೊಂಬ ।
ಚಿನುಮಯಾತ್ಮಮಾರುತಿಯು ॥ ॥ ೩ ॥

* * *

೪೯. ಏನಿದಚ್ಚರಿಯೋ ಶ್ರೀಹರಿ

(ಧಾಟಿ: ಎಂತು ವೇಡುಕೊಂದು ರಾಘವ)

ರಾಗ: ಸರಸ್ವತಿ ಮನೋಹರಿ ತಾಳ: ಆದಿತಾಳ

ಏನಿದಚ್ಚರಿಯೋ ಶ್ರೀಹರಿ ।
ಸಾನುರಾಗದಿಂದ ತೋರೀಪರಿ ॥ ॥ ಪ ॥

ದೀನನಾಗಿ ನಾ ಬೇಡಿಕೊಂಬೆನೊ ।
ಜ್ಞಾನವೀಯೋ ವಿಜ್ಞಾನಮೂರುತಿಯೊ ॥ ॥ ಅ.ಪ. ॥

ಓಂಕಾರವನ್ನು ನುಡಿಯುತ್ತಲಿ ।
ಪಂಕಜಾಕ್ಷ ನಿನ್ನ ಸ್ಮರಿಸುತ್ತಲಿ ॥
ಶಂಕೆಯಿಲ್ಲದೆ ಸತ್ತರೆ ನಿರಾ ।
ತಂಕದಿಂದ ಸದ್ಗತಿಯಾಗುವದು ॥ ॥ ೧ ॥

ನಿನ್ನ ಕೀರ್ತಿ ಹೊರಗೆಲ್ಲ ಹಬ್ಬಿ ಜಗ ।
ವನ್ನು ಹರ್ಷದಲಿ ಮುಳುಗಿಸುವುದು ॥
ಇನ್ನೇನದೇ ದುಷ್ಟ ರಾಕ್ಷಸ ।
ರನ್ನು ನಡುಗಿಸಿ ಉಡುಗಿಸುವುದು ॥ ॥ ೨ ॥

ನಿನ್ನ ನಾಮವನು ಸಂಕೀರ್ತಿಸುತ ।
ನಿನ್ನ ರೂಪವನು ಧ್ಯಾನಿಸುತಿರೆ ॥
ಮುನ್ನ ಮಾಡಿದ ಪಾಪವೆಲ್ಲ ಹೋಗಿ ।
ಚಿನ್ಮಯಾತ್ಮನೆ ಆಗುವನವನು ॥ ॥ ೩ ॥

* * *

೫೦. ಗರುಡಗಮನ

(ಧಾಟಿ: ನೀನಾಮ ರೂಪಮುಲಕು)

ರಾಗ: ಸೌರಾಷ್ಟ್ರ ತಾಳ: ಏಕತಾಳ

ಗರುಡಗಮನ । ಕಮಲವದನ
ದುರಿತದಮನ ಮಂಗಳಂ ॥ ॥ ಪ ॥

ಶರಣರನುದ್ಧರಿಸಲೆಂದು ।
ನೆರೆ ವಿರಾಡ್ರೂಪಿನೊಳು ನಿಂದ ॥ ॥ ೧ ॥

ನರನಿಗೆ ಗೀತೆಯನು ಹೇಳಿ ।
ನರರನು ಪಾವನಗೈದ ॥ ॥ ೨ ॥

ಉದ್ದವನನು ಕರುಣದಿಂದ ।
ಶುದ್ಧ ಚಿದ್ರೂಪವನುಗೈದ ॥ ॥ ೩ ॥

* * *

೫೧. ಜಯಜಯ ದೇವಾದಿದೇವ

ರಾಗ: ಸಾವೇರಿ ತಾಳ: ಅಟತಾಳ

ಜಯ ಜಯ ದೇವಾದಿದೇವ । ಭವ ।
ಭಯಹರ ಶರಣರ ಕಾವ ॥ ॥ ಪ ॥

ಜಯ ಜಯ ಶ್ರೀ । ಪರಮಪುರುಷನೆ ।
ಜಯ ರಮಾವರ । ಜಯ ಕೃಪಾಕರ ॥
ಜಯ ಜನಾರ್ದನ । ದನುಜಮರ್ದನ ।
ಜಯ ನತಾಖಿಲ । ಸೌಖ್ಯವರ್ಧನ ॥ ॥ ಅ.ಪ. ॥

ಪುರುಹೂತ ಪದವಿಯ ಬಲಿಗೆ । ನೀನೆ ।
ಕರುಣದಿಂದಿತ್ತೆ ಭಕ್ತನಿಗೆ ॥
ಉರುಮದದಿ ಕೆಡಬಾರದೆಂದದ ।
ತಿರುಗಿಕೊಂಡುಪಕಾರವೆಸಗಿದೆ ॥
ಅರಿತು ನೋಡಲಿಲ್ಲವೆಲ್ಲವವನನು ।
ಪೊರೆಯಲೆಂದೇ ಮಾಡಿದಂತಿದೆ ॥ ॥ ೧ ॥

* * *

೫೨. ಕೇಶವಾ ಮಾಧವಾ ಪಾಲಿಸೈ

ರಾಗ: ಹಿಂದೂಸ್ತಾನಿ ತಾಳ: ಏಕತಾಳ

ಕೇಶವಾ ಮಾಧವಾ ಪಾಲಿಸೈ ತ್ರಿವಿಕ್ರಮನೆ ॥ ॥ ಪ ॥

ವಿಷ್ಣುವೆಂದೆನಿಸಿ ನೀನೇ ।
ಕೃಷ್ಣರೂಪಿನೊಳು ಬಂದ ॥
ವೃಷ್ಣಿಕುಲಜನೆ (ತ್ರಿವಿಕ್ರಮನೆ) ॥ ॥ ೧ ॥

ಪೊರೆವರಂ ಬೇರೆ ಕಾಣೆ ।
ಶರಣರನ್ನು ಕರುಣದಿಂದ ॥
ಪರಿಕಿಸುವಾ ದೇವನೆ (ತ್ರಿವಿಕ್ರಮನೆ) ॥ ॥ ೨ ॥

ಈಶನೇ ದೋಷದೂರನೆ ।
ದಾಸರಿಗುಲ್ಲಾಸದಿಂದ ॥
ಲೇಸಕೊಡ್ಯೆ ಶ್ರೀಶನೆ (ತ್ರಿವಿಕ್ರಮನೆ) ॥ ॥ ೩ ॥

ಭಾವಿಸುವೆನು ದೇವದೇವನೆ ।
ಕಾವುದೆಮ್ಮನರ್ಥಿಯಿಂದ ॥
ಕಾವನಯ್ಯನೆನಿಪನೆ (ತ್ರಿವಿಕ್ರಮನೆ) ॥ ॥ ೪ ॥

ಭಕ್ತಿಭಾಗ್ಯವಿತ್ತು ಪೊರೆವನೇ ।
ಭಕ್ತಲೋಕಕುಟುಂಬಿಗನೆ ॥
ಮುಕ್ತಪುರುಷನೆನಿಪನೆ (ತ್ರಿವಿಕ್ರಮನೆ) ॥ ॥ ೫ ॥

* * *

ಭಾಗ ೫:
ಶ್ರೀ ಲಕ್ಷ್ಮೀ ಸಂಬಂಧವಾದ ಕೀರ್ತನೆಗಳು (೫೩-೫೮)

೫೩. ಪರಿಪಾಲಿಪುದೆನ್ನನು

(ಧಾಟಿ: ಅರಳಿದ ಮಲ್ಲಿಗೆ ಪರಿಮಳಭರದಲಿ)

ರಾಗ: ಜಂಗಲ್ ತಾಳ: ಏಕತಾಳ

ಪರಿಪಾಲಿಪುದೆ । ನ್ನನು ನೀ ಕರುಣದಿ ।
ಕಮಲಾಲಯೆ ಲಕ್ಷ್ಮೀ ॥
ದುರಿತವನೆಲ್ಲವ । ಕಳೆವಳೆಂದು ನಾ ।
ಶರಣೆಂಬುವೆ ನಿನಗೆ ॥ ॥ ಪ ॥

ಮೂರು ಲೋಕಗಳ । ಸೃಷ್ಟಿಸ್ಥಿತಿ ಸಂ ।
ಹಾರಕರ್ತೆ ನೀನು ।
ನೀರೆ ನಿನಗೆ ನಾಂ ।
ಭಾರವಾಗಿಹೆನೆ । ಸಾರಿಕೊಳ್ಳಲೇನು ॥ ॥ ೧ ॥

ಕ್ಷೀರಸಾಗರವು । ನಿನ್ನ ತೌರುಮನೆ ।
ಶೌರಿ ನಿನ್ನ ಪತಿಯು ॥
ಧಾರಿಣಿಯೆಲ್ಲವು ನಿನ್ನ ಸಂತತಿ ।
ಸಾರಸಸಮನಯನೆ ॥ ॥ ೨ ॥

ಲೋಕಮಾತೆಯೆಂ । ದೆನಿಸಿಹೆ ನೀನು ।
ಈಕ್ಷಿತಿಯಲ್ಲೀಗ ॥
ಶ್ರೀಕರಿಯೆನ್ನಿಷ್ಟಾರ್ಥವ ತಿಳಿಯುತ ।
ನೀ ಕೊಡದನು ಬೇಗ ॥ ॥ ೩ ॥

ಗರುಡಗಮನನ । ವಕ್ಷಸ್ಥಳದೊಳ ।
ಗಿರುತಲಿ ಶೋಭಿಸುವ ॥
ಸುರನರವಂದಿತೆ । ಲಕ್ಷ್ಮೀ ನಿನ್ನ ಪದ ।
ಕೆರಗುವೆನನುದಿನವು ॥ ॥ ೪ ॥

ಸರಸಿಜಾಕ್ಷಿ ಸೌ । ಭಾಗ್ಯದಾಯಿನೀ ।
ಶರದಿಂದುಸಮಾಸ್ಯೆ ॥
ಶರಣಾಗತಸಂ । ರಕ್ಷಣ ಚತುರೇ ।
ವರದೆ ಚಿದ್ವಿಲಾಸೇ ॥ ॥ ೫ ॥

* * *

೫೪. ಪರಿಪೂರ್ಣವಾದ ಪ್ರೇಮದಿಂದ

(ಧಾಟಿ: ನವಮಲ್ಲಿಕಾದಿ ಪೂಗಳಿಗೆ)

ರಾಗ: ಭೈರವಿ ತಾಳ: ರೂಪಕ

ಪರಿಪೂರ್ಣವಾದ ಪ್ರೇಮದಿಂದ ಚರಣಕೆರಗುವೆ ।
ಹರಿವಲ್ಲಭೆ ಎನ್ನಿಷ್ಟವಿತ್ತು ಪಾಲಿಸೆಂಬುವೆ ॥ ॥ ಪ ॥

ವರಚಂದ್ರರೂಪೆ ಚಂದ್ರವದನೆ ಚಂದ್ರಸೋದರಿ ।
ಪೊರೆ ಇಂದ್ರಮುಖ್ಯದೇವ ದಾನವೇಂದ್ರ ಪೂಜಿತೆ ॥ ॥ ೧ ॥

ವರಪದ್ಮಹಸ್ತೆ ಪದ್ಮನಯನೆ ಪದ್ಮಸೋದರಿ ।
ಪೊರೆ ಪದ್ಮನಾಭನ ಪಟ್ಟದರಸಿ ಪದ್ಮಸುಂದರಿ ॥ ॥ ೨ ॥

ಧನಧಾನ್ಯವಾಯುರಾರೋಗ್ಯವನ್ನು ಹರುಷದಿ ।
ಜನಕಿತ್ತು ಕಾಯ್ವ ನಿನಗೆ ಸರಿಯ ಕಾಣೆ ಲೋಕದಿ ॥ ॥ ೩ ॥

ವರಲಕ್ಷ್ಮೀದೇವಿ ವಿಷ್ಣುವಕ್ಷಸ್ಥಲವಿನೋದಿನಿ ।
ಕರುಣಾರಸಾರ್ದ್ರನಯನೆ ಮಂಗಳಾಂಗಿ ಶುಭಕರಿ ॥ ॥ ೪ ॥

ಭುವನೇಶ್ವರೀ ಭುವನೈಕಮಾತೆ ಭುವನಸುಂದರೀ ।
ಭವದುಃಖಹಾರಿ ಭಾವಜಾತಜನನಿ **ಚಿನ್ಮಯೆ** ॥ ॥ ೫ ॥

* * *

೫೫. ಮಾತೇ ಮಂಗಳಾಂಗಿ

(ಧಾಟಿ: ಸ್ವಾಮೀ ಶ್ರೀನಿವಾಸ ಪ್ರೇಮಸಾಗರ)

ರಾಗ: ಭೈರವಿ ತಾಳ: ಏಕತಾಳ

ಮಾತೇ ಮಂಗಳಾಂಗಿ ದಯಮಾಡು ನೀ । ಲೋಕ ॥ ॥ ಪ ॥

ಖ್ಯಾತೇ ಸರ್ವಭೂತ । ಪ್ರೀತಿ ಹುಟ್ಟುವಂತೆ ॥ ॥ ಅ.ಪ. ॥

ಧರೆಯೊಳಿರುವ ಸ್ತ್ರೀ । ಪುರುಷರೆಲ್ಲರು ॥
ಅರಿಯಲೆಲ್ಲ ಸಹೋ । ದರರೆಂಬುವಂತೆ ॥ ॥ ೧ ॥

ಪಶುವರ್ಗದಲ್ಲಿ । ಎಸೆವಾತ್ಮವು ।
ರಸೆಯಲ್ಲಿ ನಮ್ಮ । ಅಸುವೆಂಬುವಂತೆ ॥ ॥ ೨ ॥

ಈ ಪರಿಯೊಳೆಲ್ಲ । ರೂಪಿನಿಂದ ಕಾಣ್ಬ ॥
ರೂಪವೆಲ್ಲವು ಚಿ । ದ್ರೂಪವೆನ್ನುವಂತೆ ॥ ॥ ೩ ॥

* * *

೫೬. ನೀನೇ ತಾಯಿ ಎನಗೆ

(ಧಾಟಿ: ಬ್ರೋಚೇವಾರೆವರೆ)

ರಾಗ: ಶ್ರೀರಂಜನಿ ತಾಳ: ಆದಿತಾಳ

ನೀನೇ ತಾಯಿ ಎನಗೆ । ಕಮಲಾಲಯೆ ॥ ॥ ಪ ॥

ಶ್ರೀಹರಿಯರರ್ಧಾಂಗಿ । ಸಕಲಲೋಕಮಾತೆ ।
ಮಂಗಳದೇವತೆ । ಕ್ಷೀರಾಂಬುಧಿಸುತೆ ॥ ॥ ಅ.ಪ. ॥

ಹರಿಸಾನ್ನಿಧ್ಯದಿ ಸಕಲಲೋಕಗಳ ।
ವಿರಚಿಸುವಂಥ ಮಾಯಾರೂಪೆ ॥ ॥ ೧ ॥

ನೀನೇ ಎಲ್ಲವ ಹೊರಗೆ ಹಾಕುವೆ ।
ನೀನು ಎಲ್ಲವ ಕೊನೆಗೊಳಕೊಳ್ಳುವೆ ॥ ॥ ೨ ॥

ಹರಿಯ ಕೋಪವನು ಪರಿಹರಿಸುತ್ತಲಿ ।
ಸುರರನು ಸುಖದಿಂದದಿರಿಸಿದ ದೇವೀ ॥ ॥ ೩ ॥

ಕರುಣಾಪೂರೆ ದುರಿತವಿದೂರೆ ।
ಕರುಣಾಪಾಂಗದಿ ನೆರೆನೋಡೆನ್ನನು ॥ ॥ ೪ ॥

ಭಕ್ತ ಜನೌಘಾನುಗ್ರಹಕಾರಣಿ ।
ಭಕ್ತಿಮುಕ್ತಿದಾಯಿನಿ ಚಿದ್ರೂಪಿಣಿ ॥ ॥ ೫ ॥

* * *

೫೭. ಕಮಲಾಕ್ಷಿ ಪಾಲಿಸೆನ್ನನು

(ಧಾಟಿ: ಮನಸಾ ಶ್ರೀರಾಮಚಂದ್ರು)

ರಾಗ: ಬಂಗಾಳ ತಾಳ: ಆದಿತಾಳ

ಕಮಲಾಕ್ಷಿ ಪಾಲಿಸೆನ್ನನು । ಕರುಣವತೋರೀ ॥ ॥ ಪ ॥

ನಮಿತಾಖಿಲ ನಿರ್ಜರ ಸಂಘಯುತೇ ।
ನಮಗಿಷ್ಟಾರ್ಥವ ಕೊಡುದೇವತೆ ॥ ॥ ಅ.ಪ. ॥

ಮೂರು ಲೋಕಗಳ ಸೃಷ್ಟಿಸ್ಥಿತಿ ಸಂ ।
ಹಾರ ಮಾಡಬಲ್ಲವಳೆನಿಸಿ ॥
ಶೌರಿಯನ್ನು ಪ್ರೀತಿಸುವ ತವಗೇ ತಾ ।
ಸೇರಿರುವಾ ಕ್ಷೀರಾಬ್ಧಿಕನ್ಯಕೇ ॥ ॥ ೧ ॥

ಕಮಲಾಲಯೆಯಾಗಿರುತಲಿ ತಾನು ।
ಕಮಲಾಕ್ಷನ ಸತಿಯೆಂದೆನಿಸಿ ॥
ಅಮಿತಾದರದಿಂ ಶರಣೆಂದವರ ।
ಭ್ರಮೆಯನು ಹರಿಸುವ ಸುಮಗಂಧಿಯೆ ನೀ ॥ ॥ ೨ ॥

ಪರಿಪರಿಯಾಕಾರಗಳನು ತಳೆದು ।
ಧರೆಯರೂಪವಾಗಿರುವದನುಳಿದು ।
ವರಚಿದ್ರೂಪವ ತೋರುತ ಲೋಕೋ ।
ತ್ತರ ಮಾತೃತ್ವದ ಬಿರುದನುಳುಹಿಕೊ ॥ ॥ ೩ ॥

* * *

೫೮. ಕಮಲನಯನೆ ಕಮಲಸದನೆ

(ಧಾಟಿ: ನೀನಾಮರೂಪಮುಲಕು)

ರಾಗ: ಸೌರಾಷ್ಟ್ರ ತಾಳ: ಏಕತಾಳ

ಕಮಲನಯನೆ ಕಮಲಸದನೆ ।
ಕಮಲೆ ವಿಮಲೆ ಮಂಗಳಂ ॥ ॥ ಪ ॥

ಭಾಗ್ಯವಂತೆ ಶ್ರೀಹರಿಯ ಸೌ ।
ಭಾಗ್ಯಲಕ್ಷ್ಮಿಯಾಗಿರುವ ॥ ॥ ೧ ॥

ಕ್ಷೀರಸಾಗರದೊಳು ಹುಟ್ಟಿ ।
ಶೌರಿಯ ಕೈಹಿಡಿದು ಇರುವ ॥ ॥ ೨ ॥

ಲೋಕಮಾತೆ ಎನಿಸುವ ಚಿ ।
ದೇಕರಸಳಾಗಿರುತ ತೋರ್ಪ ॥ ॥ ೩ ॥

* * *

ಅಧ್ಯಾಯ ೬
ಶ್ರೀರಾಮ ಸಂಬಂಧವಾದ ಕೀರ್ತನೆಗಳು (೫೯-೮೨)

೫೯. ಮರೆಯದೆ ಇರುವಂತೆ ಮಾಡೊ

(ಧಾಟಿ: ಅಳುವದೇತಕೊ ರಂಗ)

ರಾಗ: ಖರಹರಪ್ರಿಯ ತಾಳ: ಏಕತಾಳ

ಮರೆಯದೆ ಇರುವಂತೆ ಮಾಡೊ ರಾಮನೆ ನಿನ್ನ ॥ ॥ ಪ ॥

ದಶರಥನ- ಮಗನಾಗಿ । ಋಷಿಯ ಯ-ಜ್ಞವ ಕಾಯ್ದು ।
ಪಶುಪತಿಧನುವನು ಮುರಿದು ಸೀತೆಯನು ।
ವಶವ ಮಾಡಿಕೊಂಡಾ ವೈಭವವನು ॥ ॥ ೧ ॥

ಜನಕನ-ನುಡಿಯಂತೆ । ವನವಾಸ-ದಲಿನಿಂತು ।
ಜನಕಸುತೆಯ ಬಯಕೆಯ ತೀರಿಸಲಾ ।
ಕನಕಮೃಗವ ಸಂಹಾರವಗೈದುದ ॥ ॥ ೨ ॥

ಸೀತೆಯ-ಹುಡುಕುತ್ತ । ಪ್ರೀತಿಯಿಂ- ಗೃಧ್ರನಿಗೆ ।
ಪ್ರೇತಕರ್ಮವನು ಮಾಡಿ ವಾನರ ।
ವ್ರಾತದ ಸೇನೆಯ ಕೂಡಿದುದ ॥ ॥ ೩ ॥

ಜಲಧಿಗೆ- ಸೇತುವನು । ನಳನಿಂದ-ಕಟ್ಟಿಸಿ ।
ಛಲದಿಂ ರಾವಣ ಕುಂಭಕರ್ಣರ ।
ಸುಲಭವಾಗಿ ಸಂಹಾರ ಮಾಡಿದುದ ॥ ॥ ೪ ॥

ಶರಣರಿ-ಗಭಯದ । ವರವಿತ್ತು-ಸಾಕೇತ ।
ಪುರದ ಸಿಂಹಾಸನದೊಳು ಮಂಡಿಸುವ ।
ಧರಣಿಯ ಪೊರೆದಾ ಚಿದ್ವಿಲಾಸವನು ॥ ॥ ೫ ॥

* * *

೬೦. ಎಷ್ಟು ದಯಾಳುವೊ ನೀನು

(ಧಾಟಿ: ರಾಮಸ್ಮರಾವಾರಾಮ ಸದೋದಿತ)

ರಾಗ: ಮುಖಾರಿ ತಾಳ: ಏಕತಾಳ

ಎಷ್ಟು ದಯಾಳುವೊ । ನೀನು ರಘೋತ್ತಮ ।
ಎಷ್ಟು ದಯಾಳುವೊ ನೀಂ ॥ ॥ ಪ ॥

ಶಿಲೆಯಾದವಳ । ಕುಲಜೆಯ ಮಾಡಿದೆ ।
ಜಲಜಸದೃಶ ಪದ । ತಲದ ಸೋಂಕಿನಿಂ ॥ ॥ ೧ ॥

ಭಕ್ತಿಯಿಂದಲಿ । ಬಂದ ಶಬರಿಗೆ ।
ಮುಕ್ತಿಯನಿತ್ತೈ । ಭಕ್ತಳೆನುತ್ತಲಿ ॥ ॥ ೨ ॥

ಶರಣೆಂದ ವಿಭೀ । ಷಣ ನರರನು ।
ದೊರೆಗಳ ಮಾಡಿದೆ । ಧಾರಿಣಿಗೆಲ್ಲಾ ॥ ॥ ೩ ॥

ಧರಣಿಯಭಾರವ । ಪರಿಹರಿಸುತಲಿ ।
ಶರಣಪೊರೆದೈ । ಪರಮಾದರದಿ ॥ ॥ ೪ ॥

ಪ್ರೀತಿಮಾಡುವ । ಹೃದಯದೊಳಗೆ ಚಿ ।
ಜ್ಜ್ಯೋತಿಯ ಹಚ್ಚಿದೆ ಪ್ರೀತಿಯಿಂದಲಿ ॥ ॥ ೫ ॥

* * *

೬೧. ದಾಶರಥೆ ದಯತೋರಿಸು

(ಧಾಟಿ: ಧಾವವಿಭೋ ಕರುಣಾಕರ ಶಂಕರ)

ರಾಗ: ಜಂಗಲ್ ತಾಳ: ಏಕತಾಳ

ದಾಶರಥೇ ದಯ । ದೋರಿಸು ನೀಂ ಭವ ।
ದೋಷದಿಂ ಸಂಕಟ । ಪಡುತಿಹೆ ನಾನು ॥ ॥ ಪ ॥

ನಾವಿಕನಾಪರಿ । ಯಾಚಿಸೆಪದಗಳ ।
ತೀವ್ರದಿ ತೋರಿದ । ಪಾವನಚರಿತ ॥ ॥ ೧ ॥

ಕಾಕಾಸುರನಾಗ । ಶೋಕಿಸೆ ಕೊಲ್ಲದೆ ।
ಜೋಕೆಯಿಂದುಳುಹಿದ । ನಾಕೇಶನುತ ॥ ॥ ೨ ॥

ಶರಣೆಂದು ಬಂದರೆ । ಚಿನ್ಮಯ ರೂಪವ ।
ನೆರೆತೋರುವ ಭೂ । ವರ ರಘುರಾಮ ॥ ॥ ೩ ॥

* * *

೬೨. ಚರಣಯುಗವ ತೋರು ನನಗೆ

(ಧಾಟಿ: ಭಜಭಜ ಭವಜಲಧಿ ಮಾಝಿ)

ರಾಗ: ಜುಂಜೋಟಿ ತಾಳ! ರೂಪಕ

ಚರಣಯುಗವ ತೋರು ನನಗೆ ।
ತರಣಿ–ವಂಶಜಾ ॥ ॥ ಪ ॥

ಶಿಲೆಯ ಮೆಟ್ಟಿದಾಕ್ಷಣವೆ ।
ಲಲನೆಯ ಮಾಡುತ್ತಲಾಗ ।
ನಲವಿನಿಂದ ಶಾಪವನ್ನು । ತೊಲಗಿ–ಸಿದಂಥ ॥ ॥ ೧ ॥

ನಾವೆಯ ಮೇಲೇರುವಾಗ ।
ನಾವಿಕನಿಂ ತೊಳಸಿಕೊಂಡು ।
ಭಾವಶುದ್ಧಿನೋಡುತವನ । ಕಾಪಾ–ಡಿದಂಥ ॥ ॥ ೨ ॥

ವನದೊಳಿರುವ ದೊಡ್ಡ ದೊಡ್ಡ ।
ಮುನಿಗಳಿಂದ ಸೇವೆಗೊಂಡು ।
ವನವನೆಲ್ಲ ಕ್ಷೇತ್ರವಾಗಿ । ಮಾಡಿ–ರುವಂಥ ॥ ॥ ೩ ॥

ಅನುಪಮ ಸಿಂಹಾಸನದೊಳು ।
ಮನುಜವೇಷದಿಂದ ಕುಳಿತು ।
ಹನುಮನ ಕರಸಂಪುಟದಲಿ । ನೆಟ್ಟಿ–ರುವಂಥ ॥ ॥ ೪ ॥

ಬಗೆಬಗೆಯವತಾರದಿಂದ ।
ಜಗದೊಳೆಲ್ಲ ಸಂಚರಿಸುವ ॥
ನಿಗಮವೇದ್ಯ ಚಿತ್ಸ್ವರೂಪ । ವಾಗಿ–ರುವಂಥ ॥ ॥ ೫ ॥

* * *

೬೩. ದಾಶರಥೇ ರಾಮಚಂದ್ರ

(ಧಾಟಿ: ಪಾಲಯಮಾಂ ಶ್ರೀಗೌರಿ)

ರಾಗ: ನಾಯಕಿ ತಾಳ: ಏಕತಾಳ

ದಾಶರಥೇ ರಾಮಚಂದ್ರ ।
ವಾಸವಾದಿ ವಿನುತ **ನೀಂ ಪೊರೆ** ॥ ॥ ಪ ॥

ದನುಜರನು ಸಂಹರಿಸಿ ।
ಮುನಿಜನಗಳ ಸಂರಕ್ಷಿಸಿ ।
ವನಜನಾಭಮುಖ್ಯರಿಂದ (ಲೀ) ।
ಅನುದಿನವುಂ **ಸ್ತುತಿಯನು ಪಡೆಯುತಲಿರುತಿಹ** ॥ ॥ ೧ ॥

ಕೆಲವು ವರ್ಷದಲ್ಲಿಯೇ ನೀ ।
ಒಲಿದು ತಿರುಗಿದ್ಯೆ ಅಯೋಧ್ಯೆಗೆ ।
ಹಲವು ಕಾಲವಾಯಿತೆನ್ನ (ನೀ) ।
ನುಳಿದಿರ್ಪರೆ **ಸುಲಲಿತಾಂಗ ದುಃಖಭಂಗ** ॥ ॥ ೨ ॥

ಎನ್ನ ಕಾಮಕ್ರೋಧವರ್ಗ ।
ವನ್ನು ದನುಜರೆಂದು ತಿಳಿದು ।
ಇನ್ನವುಗಳ ನೋಡಿಸುತ್ತ (ಲೀ) ।
ಎನ್ನನು ಪೊರೆ **ಚಿನ್ಮಯಾಂಗ ಕೃಪಾಪಾಂಗ** ॥ ॥ ೩ ॥

* * *

೬೪. ಕಾಯ್ಯೆ ಕರುಣಾಕರ

(ಧಾಟಿ: ಪಾಹಿ ಪರಬ್ರಹ್ಮಣೆ)

ರಾಗ: ಬಿಲಹರಿ ತಾಳ: ತ್ರಿಶ್ರಭಾಪು

ಕಾಯ್ಯೆ ಕರುಣಾಕರ । ಶ್ರೀರಾಮಚಂದ್ರ ॥ ॥ ಪ ॥

ನಿನ್ನವನೆಂದೆನಿಸಿ । ವಿಭೀಷಣ ।
ನನ್ನು ಪೊರೆದೆಯಲ್ಲವೆ ।
ಇನ್ನುನಾನದಕರ್ಹನಲ್ಲದೊ ।
ಡೆನ್ನ ರಾವಣನನ್ನೆಗೈದೊಡ ।
ಮಿನ್ನು ಬರ್ಪಾಮರಣ ಸಮಯದೊ ।
ಳೆನ್ನ ಮುಂಗಡೆಯಗಲದಿರು ನೀಂ ॥ ॥ ೧ ॥

ಇಳೆಯೊಳರಿಯರೆಲ್ಲರು । ಸುಗ್ರೀವನ ।
ಗೆಳೆಯನಾಗಿಹೆಯಲ್ಲವೆ ॥
ಗೆಳೆಯನಲ್ಲದೆ ನಿನಗೆ ವಾಲಿಯ ।
ಗೆಳೆಯನಾದೊಡದೇನು ಸಾವಿನ
ತಳಮಳದ ಹೊತ್ತಿನೊಳಗೆನ್ನಯ ।
ಬಳಿಯ ಬಿಟ್ಟೆನ್ನಗಲದಿವ ನೀಂ ॥ ॥ ೨ ॥

ಮುನಿಜನಗಳೊಳೆನ್ನನು । ಸೇರಿಸಿ ನಿನ್ನ ।
ಘನಚರಣ ತೋರಿಸೊ ॥
ಮುನಿತನವು ಸಲ್ಲದೊಡೆ ಮರುಕದಿ ।
ಕನಕಮೃಗ ಮೊದಲಾಗಿ ಮಾಡುತ ।
ಕೊನೆಯ ಕಾಲದಿ ತಪ್ಪದೆನ್ನೀ ।
ಮನದೊಳಿರು ಚಿದ್ರೂಪಿನಿಂದಲಿ ॥ ॥ ೩ ॥

* * *

೬೫. ಇದು ನಿನಗುಚಿತವೆ

(ಧಾಟಿ: ಆವರೀತಿಯಿಂದ ಎನ್ನನು ಪಾಲಿಪೆ)

ರಾಗ: ರೇಗುಪ್ತಿ ತಾಳ: ಅಟ್ಟತಾಳ

ಇದು ನಿನಗುಚಿತವೆ । ಎನ್ನ ಕಾಡಿಸುವುದು ।
ಸದಯನೆ ರಾಮಚಂದ್ರ ॥ ॥ ಪ ॥

ಇದು ನಿನಗುಚಿತವೆ । ದೀನತೆಯನು ನೋಡಿ ।
ಪದವ ತೋರಿಸುತ । **ಆದರಿಸದಿಹುದು** ॥ ॥ ಅ.ಪ. ॥

ಪಾಪಿಯೆಂದೆನ್ನಯ ಪಾಪವನೆಣಿಸುತ ।
ಕೋಪ ತೋರುವೆಯ । ಪಾಪಿನಾನಾದರೆ ।
ಶ್ರೀಪತಿಯೆ ನೀನು । ಪಾಪಹಾರಕನಲ್ಲವೆ ।
ಕೃಪೆ ಮಾಡದಿರುವೆ ॥ ॥ ೧ ॥

ಶರಣೆಂದ ಮಾತ್ರದಿ । ನಿನ್ನಯ ಕೋಪವು ।
ಇರದೆಂದು ಹೇಳುವರು ॥ ಶರಣು ಶರಣುಭವ ।
ಹರಣ ಸಮರ್ಥನೆ । ಅರಿವಿತ್ತು ಪೊರೆಯಯ್ಯ ।
ಶರಣಯ್ಯ ಜೀಯ ॥ ॥ ೨ ॥

ಅರಿಗಳೆಂದೆನ್ನದೆ । ದುರುಳರೆಂದೆನ್ನದೆ ।
ಕರುಣದೋರುವನೆಂಬರು । ಪರಮಾದರದಿ ನಿನ್ನ ।
ಚರಣವ ಹಿಡಿದೀಗ । ಪೊರೆಯೆಂದು ।
ಸೆರಗೊಡ್ಡುವೆ **ಚಿನ್ಮಯ**ನೆ ಬೇಡುವೆ ॥ ॥ ೩ ॥

* * *

೬೬. ಇದಕೆ ಸಂಶಯವಿಲ್ಲ

(ಧಾಟಿ: ಶ್ರೀರಾಮ ಜಯರಾಮ ಶೃಂಗಾರಸೀಮಯನಿ)

ರಾಗ: ಶಾಹನ **ತಾಳ: ತ್ರಿಪುಟ ಛಾಪು**

ಇದಕೆ ಸಂಶಯವಿಲ್ಲ । ಶ್ರೀರಾಮಚಂದ್ರನ ।
ಪದವ ಕಂಡವರೆಲ್ಲ । ನಿಜವಾಗಿ । ಧನ್ಯರೋ ಧಾರಿಣಿಯೊಳು ॥
॥ ಪ ॥

ಪರಮಾತ್ಮನನು ತನ್ನ ಪರಿಶುದ್ಧ ಕುಲದಲ್ಲಿ ।
ಬರಿಸಿಕೊಂಡವನೀಗ । ನಿಜವಾಗಿ । ಧನ್ಯನೊ ಸೂರ್ಯನು ॥
॥ ೧ ॥

ಹರಿಯನು ತನ್ನಯ । ಶರೀರದೊಳಗೆ ತುಂಬಿ ।
ಧರಿಸಿಕೊಂಡವಳೀಗ । ನಿಜವಾಗಿ । ಧನ್ಯಳೋ ಆ ಕೌಸಲ್ಯೆ ॥ ॥ ೨ ॥

ಮಗನೆಂದು ರಾಮನ । ಬಗೆಬಗೆಯಿಂದಲಿ ।
ಬಿಗಿದಪ್ಪಿಕೊಂಡವ । ನಿಜವಾಗಿ ಧನ್ಯನೊ ಆ ದಶರಥ॥ ॥ ೩ ॥

ಮಂತ್ರಾಧಿದೇವನ । ತಂತ್ರವನರಿಯುತ ।
ಮಂತ್ರವನಿತ್ತವ । ನಿಜವಾಗಿ ಧನ್ಯನೊ । ಆ ಕೌಶಿಕ ॥ ॥ ೪ ॥

ಜಲಜಸದೃಶಪಾದ । ತಲವನಿಡುವ ಕಡೆ ।
ಶಿಲೆಯಾಗಿದ್ದಾಕೆಯೆ । ನಿಜವಾಗಿ । ಧನ್ಯಳೊ ಆ ಅಹಲ್ಯೆ॥ ॥ ೫ ॥

ಹರಚಾಪವನು ಬೇಗ । ಮುರಿದಾಶೂರನ ।
ಕರವ ಹಿಡಿದವಳೆ । ನಿಜವಾಗಿ । ಧನ್ಯಳೊ ಸೀತಾದೇವಿ॥ ॥ ೬ ॥

ನದಿಯ ದಾಟಿಪೆನೆಂಬ । ನೆವದಿಂದ ಆ ಮುದ್ದು ॥
ಪದವ ತೊಳೆದವನೆ । ನಿಜವಾಗಿ ಧನ್ಯನೊ ಆ ಗುಹುಕನು॥ ॥ ೭ ॥

ಪೂತಾತ್ಮನಿಂದಲೆ ಪ್ರೇತಕರ್ಮವ ಪಡೆ ।
ದಾತನೆ ಭಕ್ತರೊಳ್ ನಿಜವಾಗಿ । ಧನ್ಯನೊ ಜಟಾಯುವು ॥ ॥ ೮ ॥

ತಿಂದುನೋಡಿದ ಹಣ್ಣ । ತಂದು ಸ್ವಾಮಿಗೆ ಕೊಟ್ಟ ॥
ಮಂದಗಮನೆಯೆತಾ । ನಿಜವಾಗಿ । ಧನ್ಯಳೊ ಆ ಶಬರಿ ॥ ॥ ೯ ॥

ಇಳೆಯ ಸೃಷ್ಟಿಸ್ಥಿತಿಗಳ । ಕರ್ತನನು ತನ್ನ ।
ಗೆಳೆಯನಗೈದವ । ನಿಜವಾಗಿ ಧನ್ಯನೊ ಆ ಸುಗ್ರೀವ ॥ ॥ ೧೦ ॥

ಹಿರಿಯನ ತೊರೆಯುತ । ಹಿರಿಯರ ಹಿರಿಯಗೆ ।
ಶರಣೆಂಬು ಬಂದವ । ನಿಜವಾಗಿ ಧನ್ಯನೊ ವಿಭೀಷಣ ॥ ॥ ೧೧ ॥

ಭಾವಭಕ್ತಿಯೊಳೊಂದು । ಝಾವವೂ ಅಗಲದೆ ।
ಸೇವೆಯಗೈದವ । ನಿಜವಾಗಿ ಧನ್ಯನೊ ಆ ಲಕ್ಷ್ಮಣ ॥ ॥ ೧೨ ॥

ಪುಂಡರಬಡಿದು ಭೂ । ಮಂಡಲಮಾತೆಯ ।
ಕಂಡುಬಂದಾತನೆ । ನಿಜವಾಗಿ ಧನ್ಯನೊ ಶ್ರೀ ಹನುಮಂತ ॥ ॥ ೧೩ ॥

ಹಿರಿಯನ ಪಾದುಕೆ । ಗಳ ಸಿಂಹಾಸನದಲ್ಲಿ ।
ಇರಿಸಿ ಆಳಿದವನೆ । ನಿಜವಾದಿ ಧನ್ಯನೊ ಆ ಭರತನು ॥ ॥ ೧೪ ॥

ಗುರುಗಳೀಗೆಲ್ಲಾ । ಗುರುವಾದವನಿಗೆ ।
ಗುರುವಾದಾತನೆ । ನಿಜವಾಗಿ । ಧನ್ಯನೊ ವಸಿಷ್ಠನು ॥ ॥ ೧೫ ॥

ಹರಿಯು ಹೂಡಿದ ಮಹ । ತ್ತರವಾದ ಬಾಣದ ।
ಗುರಿಗೆ ಸಿಕ್ಕಿದವರೆ । ನಿಜವಾಗಿ ಧನ್ಯರೊ ಆ ಅಸುರರು ॥ ॥ ೧೬ ॥

ಪರಮಾದರದಿಂದ ಪರಮ **ಚಿದ್ರೂಪ**ನ ಸ್ಮರಣೆಯ ಗೈ ।
ವರೆ । ನಿಜವಾಗಿ । ಧನ್ಯರೊ ಮಹಾತ್ಮರು ॥ ॥ ೧೭ ॥

* * *

೬೭. ರಾಮಬಾರೊ ರಘುನಂದನ

ರಾಗ: ಹಿಂದೂಸ್ತಾನಿ ಕಾಪಿ ತಾಳ: ಆದಿತಾಳ

ರಾಮ ಬಾರೊ ರಘುನಂದನ ।
ರಾಮ ಬಾ ರಾಜೀವಲೋಚನ ॥ ॥ ಪ ॥

ರವಿವಂಶದ-ಲ್ಲಿ ಅವತಾರಮಾ-ಡಿದ ।
ಕುವಲಯದಳನೇತ್ರನೆ ॥ ॥ ೧ ॥

ಕಿರುನಗೆಗೂ-ಡಿದ । ಕರುಣಾಕಟಾ-ಕ್ಷದಿ ।
ಶರಣರ ಪೊರೆಯುವನೆ ॥ ॥ ೨ ॥

ನವನೀಲಮೇ-ಘದ । ಛವಿಯಂತೆ ತೋ-ರುವ ।
ರವಿಶತಸಮತೇಜನೆ ॥ ॥ ೩ ॥

ಎಳೆ ತುಳಸಿಯ- ಮಾಲೆ । ನಲಿದಾಡೆ ಕಂಠ-ದಿ ।
ಬೆಳಗುವ ಮೃದು ಹೃದಯನೆ ॥ ॥ ೪ ॥

ದೇವಾಧಿ ದೇ-ವರು । ಸೇವೆಯ ಮಾ-ಡುವ ।
ಪಾವನ **ಚಿದ್ರೂಪನೆ** ॥ ॥ ೫ ॥

* * *

೬೮. ಶ್ರೀರಾಮಚಂದ್ರ ದೇವ

(ಧಾಟಿ: ಸಾಕೇತನಗರವಾಸ)

ರಾಗ: ಕಮಾಚ್ ತಾಳ: ರೂಪಕ

ಶ್ರೀ–ರಾಮಚಂದ್ರದೇವ । ಭೂರಿದಯವ ತೋರಬಾರದೆ ॥ ॥ ಪ ॥

ಬರಬಾರದ ಜನ್ಮಗಳೊಳು । ಬರಬರುತಲೀ (ದೇವ) ।
ಬರಿದುಃಖವನ್ನು ಪಡುತ । ಕೊರಗುತಿರ್ಪೆನೊ (ದೇವ) ॥ ॥ ೧ ॥

ಮೂರುದಿನದ । ಜಗವ ನಂಬಿ । ಗಾರುಗೆಟ್ಟೆನೋ ದೇವ ॥
ದಾರೀ ತೋರಯ್ಯ ನಿನ್ನ । ಸೇರಿ ಸಂತೋಷಿಪುದಕೆ ॥ ॥ ೨ ॥

ದೀನತನದಿ ಬಂದ ನನ್ನ । ನೀನುಪೇಕ್ಷೆ ಮಾಡಿಹೆ ॥
ಮಾನವೇನೀ ನಡತೆ । ಮಾ–ನನೀ–ಯಾಗ್ರಾಣಿಯೇ ॥ ॥ ೩ ॥

ಕೇಳು ದೇವ ನಿನ್ನ ನಾಮ । ಜಾಲವೆನ್ನ ನಾಲಿಗೆಗೆ ।
ಲೀಲೆಯಿಂ ಬರಲು ದಯ । ಪಾಲಿಸಬಾರದೇನೊ ॥ ॥ ೪ ॥

ಭೋಗಿಗಳೆಲ್ಲರಿಗಭೇದ್ಯ । ಆಗಮಾಂತ್ಯೈಕವೇದ್ಯ ।
ಯೋಗೀಂದ್ರ ವಿನುತ ವೇಷ । ಬೇಗ ನೀಂ **ಚಿದ್ವಿಶೇಷ** ॥ ॥ ೫ ॥

* * *

೬೯. ಯಾತಕುಪೇಕ್ಷೆಯ ಮಾಡುವೆ

:(ಧಾಟಿ: ಘುಂಘುಟಕೀ ಪಟಖೋಲರೆ)

ರಾಗ: ದೇಶಿ ಕಾಪಿ **ತಾಳ: ತ್ರಿಪುಟೆ**

ಯಾತಕುಪೇಕ್ಷೆ ಮಾಡುವೆ । ರಘುರಾಮ ದಯಾಳೊ ॥ ॥ ಪ ॥

ಎಲ್ಲೆಲ್ಲಿಯೂ ನೀನಿರುತಿಹೆಯೆಂ–ಬರು ।
ಎಲ್ಲಿಯೂ ನನಗೆ ನೀ ಕಾಣಿ–ಸೆ ॥ ॥ ೧ ॥

ಎಲ್ಲವ ತಿಳಿಯುವನಾದರೆ ಎ–ನ್ನಯ ।
ಸೊಲ್ಲಿಗೆ ಕಿವಿಗೊಡಬಾ–ರದೆ ॥ ॥ ೨ ॥

ಶರಣರಕ್ಷಕನೆಂಬ ಬಿರುದಿಗೊಪ್ಪುವಂತೆ ।
ವರ ಚಿದ್ರೂಪವ ತೋ–ರದೆ ॥ ॥ ೩ ॥

* * *

೭೦. ಶ್ರೀರಾಮ ರಾಕ್ಷಸ ಭೀಮ

(ಧಾಟಿ: ಶ್ರೀ ರಾಮಚಂದ್ರ ಕೃಪಾಳು ಭಜಮನ)

ರಾಗ: ಖರಹರಪ್ರಿಯ ತಾಳ: ಆದಿತಾಳ

ಶ್ರೀರಾಮ ರಾಕ್ಷಸ । ಭೀಮರವಿಕುಲ ।
ಸೋಮ ಮುನಿಜನರಂಜನ ॥ ನತ
ಕಾಮಿತಾರ್ಥವನಿತ್ತು ರಕ್ಷಿಸು ।
ಸ್ವಾಮಿ ಹರಧನುಭಂಜನ ॥ ॥ ಪ ॥

ರಾಜೇಂದ್ರ ರಾಘವ ರಾಮಚಂದ್ರನೆ ।
ರಾಮ ರಘುಕುಲಪುಂಗವ ॥
ರಜನೀಚರಾವಳಿ ಹರಣ ದೀಕ್ಷಿತ ।
ರಾಜ ರಾಜ ಸುವೈಭವ ॥ ॥ ೧ ॥

ಪುಣ್ಯೋದಯ ಪುರುಷೋತ್ತಮಾ ।
ಭವರೋಗಹರ ತ್ರಿಗುಣಾತ್ಮಕಾ ॥
ಹನುಮಂತಪ್ರಿಯಗುರು ಕೌಸಲೇಯ ।
ವಿಭೀಷಣಾಭಯದಾಯಕಾ ॥ ॥ ೨ ॥

ವೇದಾಂತಸಾರಾ ಸಪ್ತತಾಳೋ ।
ಚ್ಛೇದ ಸತ್ಯಪರಾಕ್ರಮ ।
ವಿದಿತಾಖಿಲಾರ್ಥ ಜಗದ್ಗುರೋಚಿತ
ಭಾರ್ಗವ ದೇವೋತ್ತಮ ॥ ॥ ೩ ॥

ಆನತಾಖಿಲದಾಮ ವಿಶ್ವಾಮಿತ್ರ ।
ಸೇವಾತತ್ಪರಾ ।
ಅನಿಮಿತ್ತ ಬಂಧು ದಯಾಳು ಮಾಯಾರ್ಮನುಜ ।
ಧೀರ ಧನುರ್ಧರ ॥ ॥ ೪ ॥

ಶ್ಯಾಮಾಂಗ ಸುಂದರ ಶೂರಶಿವನುತ ।
ಸರ್ವ ಮುನಿಜನ ಸಂಸ್ತುತ ॥
ಕಮನೀಯ ವೇಷ ರಘೋತ್ತಮಾ ।
ದೇವೇಶ ಚಿದ್ರೂಪಾನ್ವಿತ ॥ ॥ ೫ ॥

* * *

೭೧. ಜನಕಜಾವರಾ ರಾಮ

(ಧಾಟಿ: ವಿಡಮುತೇಯ-ವೇ-ನನು)

ರಾಗ: ಖರಹರಪ್ರಿಯ ತಾಳ: ಆದಿತಾಳ

ಜನಕಜಾವರಾ । ರಾಮ । ಕರುಣಾಸಾಗರ ॥ ॥ ಪ ॥

ಸುರವರನಿಂದ (ಲೀ) । ಪರಿಚರ್ಯೆಗೊಂಬ ।
ಸರಸಿಜನಯನ । ಪೊರೆ ನೀ ಎನ್ನ ॥ ॥ ಅ.ಪ. ॥

ತಿಳಿಯೆ ನಾನು ಜಪವ ತಪವ ।
ತಿಳಿಯೆ ನಾನು ಪೂಜಾವಿಧವ ॥
ತಿಳಿಯೆ ನಾನು ಸ್ತೋತ್ರವಾ । ರಾಮಚಂದ್ರ ॥
ತಿಳಿಯಲರಿಯೆ ವೇದಾರ್ಥ ।
ತಿಳಿಯಲರಿಯೆ ತತ್ತ್ವದಿರವ ।
ತಿಳಿಯಲರಿಯೆ ಮಂತ್ರಾಕ್ಷರವ ।
ತಿಳಿಸೆನಗೆ ನಿನ್ನೆರಡಕ್ಷರವ ॥ ॥ ೧ ॥

ಗುರುಗಳ ಸೇವಿಸಲರಿಯೆ ।
ಪರಮಾರ್ಥವ ಸಾಧಿಸ-ಲರಿಯೆ ।
ಸೆರಗನೊಡ್ಡುವೆನೊ ನಾನು । ರಾಮಚಂದ್ರ ।
ಹರಿಹರಾತ್ಮಕನೆ ಸ್ವಾಮಿ
ಶರಣು ಬಂದ ನನ್ನ ಮೇಲೆ ।
ಕರುಣಾರಸವ-ವ ಸುರಿಸಿ ನಿನ್ನ ।
ಸ್ಮರಣೆ ಇತ್ತು ಕಾಪಾಡೆನ್ನ ॥ ॥ ೨ ॥

ವಿಷಯಂಗಳ ತೊರೆಯಲರಿಯೆ ।
ವಿಷಮ ದೃಷ್ಟಿಬಿಡುವದರಿಯೆ ।
ವಿಷಮನಯನ ಮಿತ್ರನೆ । ರಾಮಚಂದ್ರ ।
ಅಸಮ ಮಹಿಮನಾದ ನಿನ್ನ ।
ವಶವ ಮಾಡಿಕೊಳ್ಳಲರಿಯೆ ।
ಬಿಸಜನಯನ-ಭಾಗ್ಯವೇಷ ।
ಬೆಸಗೊಳ್ಳುವೆ ಚಿದ್ವಿಶೇಷ ॥ ॥ ೩ ॥

* * *

೭೨. ನಾಮಭಿಕ್ಷವೀಯೋ

(ಧಾಟಿ: ರಘುಪತೇ ರಾಮ ರಾಕ್ಷಸಭೀಮ)

ರಾಗ: ಸಹನಾ ತಾಳ: ರೂಪಕ

ನಾಮಭಿಕ್ಷವೀ–ಯೋ । ಪ್ರೇಮದಿ ರಾಮ ॥ ॥ ಪ ॥

ಕಾಮಿತ ಶುಭಫಲದಾತ ।
ಸೋಮಾರ್ಧವಿಭೂಷವಿನುತ ॥ ॥ ಅ.ಪ. ॥

ಅಶನಾದಿಗಳ–ನುನಾ–ರಾಮ ಬೆಸಗೊಳ್ಳುವುದಿಲ್ಲವಯ್ಯಾ ।
ಅಶನಾದಿಗಳಾದಾ ಬಹುವಿಧದ ॥
ವಿಷಯಂಗಳ ಮರೆಸುತ ನಿ । ರ್ವಿಷಯಕ ಮನದಲ್ಲಿ ನಿನ್ನ ।
ಅಸದೃಶ ನಾಮಾಕ್ಷರಗಳೆ ಬೆಸೆದಿರಲೆಂದೆರಗುವೆ ನಾ ॥ ॥ ೧ ॥

ಧನಕನಕಗಳ–ನುನಾ–ರಾಮ । ಮನದೊಳಗಾದರಿಸೆನಯ್ಯ ।
ಮನಸಿನ ಶಾಂತತೆಯನು ಬೇಡುವೆನು ॥
ಜನಕಸುತಾಸುವಿನೋದ । ಮುನಿಜನವಂದಿತ ಪಾದ ।
ಅನವರತವು ನಿನ್ನನ್ನೇ । ನೆನೆಯುತ್ತಿರುವಂತೆ ನನಗೆ ॥ ॥ ೨ ॥

*ಸತಿಸುತ ಹಿತ–ರನು–ರಾಮ । ಅತಿಹಿತದಿಂ ಬಯಸೆನಯ್ಯ ।
ಮತಿ ಸುಸ್ಥಿರವಾಗುತ್ತಲಿ ನಿನ್ನ ॥
ಅತಿಹಿತದಿಂ ಬಯಸೆನಯ್ಯಾ । ಸತತವು ಸಂಕೀರ್ತಿಸುತಿಹ ।
ಸ್ಥಿತಿಯೊದಗಲು । ಮುನಿವರದ । ಕ್ಷಿತಜಾವರ ಚಿದ್ವಿನೋದ ॥ ॥ ೩ ॥

* * *

---

* ಸ್ತ್ರೀಯರು 'ಸುತಸುತೆಯ–ರನುನಾ–' ಎಂದು ಹೇಳಿಕೊಳ್ಳಬೇಕು.

೭೩. ಮಂತ್ರವೆಂದು ಸಿದ್ಧಿಸುವುದೊ

: (ಧಾಟಿ: ರಾಮ ನೀ ಸಮಾನಮೆವರೊ)

ರಾಗ: ಖರಹರಪ್ರಿಯ ತಾಳ: ರೂಪಕ

ಮಂತ್ರವೆಂದು ಸಿದ್ಧಿಸುವದೊ । ಶ್ರೀರಾಮ ತಾರಕ ॥ ॥ ಪ ॥

ಮಂತ್ರಗಳೊಳಗೆಲ್ಲ ಮಹಾ ।
ಮಂತ್ರವೆಂದು ಹೆಸರು ಪಡೆದ ॥ ॥ ಅ.ಪ.॥

ಗಿರಿಶನು ಬಹುಪ್ರೀತಿಯಿಂದ ।
ಗಿರಿಜೆಗೊರೆದುದಾಗಿ ಮತ್ತೆ ॥
ನರರಿಗೆಲ್ಲ ಕಾಶಿಯಲ್ಲಿ ।
ಮರಣಕಾಲದಲ್ಲಿ ಪೇಳ್ವ ॥ ॥ ೧ ॥

ಸುರನರ ಕಿಂಪುರುಷರೆಲ್ಲ ।
ಪರಮಪ್ರೀತಿಯಿಂದಲಿ ॥
ಭರದಿ ಜಪಿಸಿ ಸೌಖ್ಯದಿಂದ ।
ಮೆರೆಯುವಂತೆ ಮಾಡಿರುವಾ ॥ ॥ ೨ ॥

ಮರವೆಯೆಂಬ ಕತ್ತಲೆಯ ।
ತರಣಿಯಂತೆ ಓಡಿಸುವ ॥
ಪರಮತತ್ತ್ವವನ್ನು ತಿಳಿಸಿ ।
ವರಚಿತ್ಸುಖವೀಯುವಂಥ ॥ ॥ ೩ ॥

* * *

೭೪. ಆ ರಮಣೀಯ ರೂಪ

(ಧಾಟಿ: ನಾರದ ಗಾನಲೋಲ–ನತ ಜನ ಪರಿಪಾಲ)

ರಾಗ: ಅಠಾಣ ತಾಳ: ರೂಪಕ

ಆ ರಮಣೀಯ ರೂಪ । ವೆಂದು ನಾನು ಕಾಣುವೆನೊ ॥ ॥ ಪ ॥

ನೀರಜಾತನಯನ । ಸೀತಾರಮಣನ ಸುಂದರವಾ(ದಾ) ॥ ॥ ಅ.ಪ. ॥

ಮೆರೆವ ನೀಲಮೇಘ ಸದೃಶ । ವಾದದೇಹಕಾಂತಿಯೂ ।
ಸುರುಚಿರ ನವರತ್ನಖಚಿತ ವರ ಕಿರೀಟಕಾಂತಿಯೂ ॥
ಕಿರುನಗೆಯಿಂ ಬೆಳಕ ಬೀರುತಿರುವ ದಂತಕಾಂತಿಯೂ ।
ಕರುಣಾರಸದಿಂದ ಮಿರುಗುತಿರುವ ಕಣ್ಣಕಾಂತಿಯೂ ॥ ॥ ೧ ॥

ತಿಲಕದಿಂದ ಕೂಡಿದ ಫಣಾಫಲಕಕಾಂತಿಯೂ ।
ತುಲಸಿಯಂದದಿಂದಲೆಸೆವ ಹೃದಯಕಾಂತಿಯೂ ॥
ಹಲವು ದೇವತೆಗಳ ಕಿರೀಟಗಳ ರತ್ನರಾಜಿಯಿಂದ ।
ಝಳಝಳ ಬೆಳಗುತಿಹ ಪಾದ ತಳದಶುಭ್ರಕಾಂತಿಯೂ ॥ ॥ ೨ ॥

ವೇದಗಳೇ ತುಂಬಿತುಳುಕುತಿರುವ ಮುಖದ ಕಾಂತಿಯೂ ।
ಸಾಧಕಜನಕಭಯವೀವ ವರದಹಸ್ತ ಕಾಂತಿಯೂ ॥
ಭೇದಬುದ್ಧಿಗಳನು ಕಳೆದು ಸಾಧುಪುರುಷಮೋಹಕಾರಿ ।
ಯಾದ ಚಿದ್ವಿನೋದ ವಿಭವವಾದ ದಿವ್ಯಕಾಂತಿಯೂ ॥ ॥ ೩ ॥

* * *

೭೫. ಇದಕೀಗ ನಾನೇನ ಮಾಡಲಯ್ಯ

(ಧಾಟಿ: ಕರುಣಿಂಚುಟುಕೀದ ಸಮಯವಯ್ಯ)

ರಾಗ: ಸಿಂಧುಮಂದಾರಿ ತಾಳ: ಆದಿತಾಳ

ಇದಕೀಗ– ನಾನೇನ ಮಾಡಲಯ್ಯ ।
ಸದಯನೆ ಶ್ರೀ । ರಘುನಾಯಕ ॥ ॥ ಪ ॥

ಹೃದಯದಿ ನಿನ್ನ । ಪದಗಳನ್ನಿಟ್ಟು ।
ಮುದದಿಂದ ಕಾಪಾ । ಡದೆ ಬಿಟ್ಟಮೇಲೆ ॥ ॥ ಅ.ಪ. ॥

ವಿಷಯಂಗಳಿಂದ ಸುಖವಪ್ಪುದೆಂದು ।
ದೆಸೆದೆಸೆಗಳ ಓಡಾಡಿ ಬಾಡಿ ॥
ಬಸವಳಿಯುತ ಬಾಯಾರಿ ನಾನು ।
ಬಿಸಜಾಕ್ಷನೇ ಬೆಂಡಾಗಿಹೆನು ॥ ॥ ೧ ॥

ಪಾಪದಿಂದ ಭವಕೂಪದಲಿ ಬಿದ್ದು ।
ತಾಪತ್ರಯದೊಳೀಪರಿಯಲ್ಲಿ ॥
ಪಾಪವನೇ ಮಾಡುತ ನಿನ್ನ ।
ಕೋಪಕ್ಕೆ ನಾ ಪಾತ್ರನಾಗಿಹೆನು ॥ ॥ ೨ ॥

ಸತಿಸುತರನ್ನು ಸುಖದಾತರೆಂದು ।
ಅತಿಯಾಗಿ ನಂಬಿ ಮತಿಗೆಟ್ಟೆನಯ್ಯ ।
ಹಿತವಾದ ಚಿದ್ರೂಪುಗಾಣದೆ ।
ಕ್ಷಿತಿಯಲ್ಲಿ ದು । ರ್ಗತಿಗಿಳಿದನು ॥ ॥ ೩ ॥

* * *

೭೭. ದಯಮಾಡಿ ಕೊಡೊ ಎನ್ನಿಷ್ಟವ

(ಧಾಟಿ: ನನು ಗನ್ನ ತಲಿ ನಾ ಭಾಗ್ಯಮಾ)

ರಾಗ: ನವರಸ ಕನ್ನಡ ತಾಳ: ಆದಿತಾಳ

ದಯಮಾಡಿ ಕೊಡೊ ಎನ್ನಿಷ್ಟವ ।
ಶ್ರೀ ರಾಘವ । ಸೀತಾಧವ ॥ ॥ ಪ ॥

ನಯದಿಂದಲೆನ್ನ ಭವಬಂಧದ ।
ಭಯವನ್ನು ಕಳೆ ಜಯ ರಾಮಚಂದ್ರ ॥ ॥ ಅ.ಪ. ॥

ಬುದ್ಧಿ ಇಲ್ಲದಿಹ । ಜನ್ಮಗಳಿಗೆನ್ನ ।
ಒದ್ದು ನೂಕದೆ । ಮನುಜಜನ್ಮದಲ್ಲಿ ॥
ಇದ್ದು ನಿನ್ನಯ । ಮುದ್ದುಪಾದಕೆ ।
ಬಿದ್ದು ಬದುಕುವಂ । ತುದ್ಧರಿಸೆಂಬೆ ॥ ॥ ೧ ॥

ಕೊನೆಯಲ್ಲಿ ದುಃಖಾ । ಕರವಾದ ಭೋಗ ।
ವನು ಬೇಡುವಾಸೆ । ಯನು ಸುಟ್ಟು ಹಾಕಿ ॥
ಮನದಲ್ಲಿ ನೀ ಮನೆ ಮಾಡೆಂದು ।
ಅನುವಿಂದ ನಾ ಬೇಡುವಂತೆ ॥ ॥ ೨ ॥

*ಸತಿಸುತರಾ । ಬಲೆಯೆಂಬುವಾ ।
ಅತಿ ಕಷ್ಟದಿ । ಸಿಲ್ಕಿರದೆ ॥
ಹಿತವನ್ನು ಮಾ। ಡುವ ಸಾಧುಸಂ ।
ಗತಿಯಲ್ಲಿಯೇ । ಇಡು ಚಿನ್ಮಯ ॥ ॥ ೩ ॥

* * *

---

* ಸ್ತ್ರೀಯರು 'ಸುತಸುತೆಯರ' ಎಂದು ಹೇಳಿಕೊಳ್ಳಬೇಕು.

೭೭. ದಾಸ್ಯವನೆ ಬೇಡುವೆ ನಿನ್ನ

: (ಧಾಟಿ: ಸಂಕಲ್ಪ ಮೆಟ್ಟಿದೊ ಮನಸಾ)

ರಾಗ: ಖರಹರಪ್ರಿಯ ತಾಳ: ಆದಿತಾಳ

ದಾಸ್ಯವನೆ ಬೇಡುವೆ ನಿನ್ನ ।
ಬ್ರಹ್ಮೇಂದ್ರ ವಿನುತ ಸೀತಾಪತೇ ॥ ॥ ಪ ॥

ಮೌನಿಗಳು । ಹೃದಯದಲಿ ।
ಧ್ಯಾನಿಸುವ । ಪಾದಾರವಿಂದದ ॥ ॥ ಅ.ಪ. ॥

ಭೂಮಿಭಾರವನು । ಕಳೆದುಭಕ್ತರಿಗೆ ।
ಪ್ರೇಮದಿಂದ ತನ್ನ । ರೂಫವನ್ನು ತೋರಿ ॥
ಈ ಮಹಿಗೆಲ್ಲ । ಮುಖ್ಯದೈವವಾದ ।
ಕೋಮಲಾಂತಃಕರ । ಣದ ನಿನ್ನ ಪದ ॥ ॥ ೧ ॥

ಹುಟ್ಟುಸಾವುಗಳ । ಸುಳಿಯಲ್ಲಿ ಸಿಕ್ಕಿ ।
ಕಷ್ಟದಿಂದ ದುಃಖ । ಪಡುತಿರುವರ ॥
ಕಷ್ಟವನ್ನು ಹೋಗ । ಲಾಡಿಸುವ ।
ಸೃಷ್ಟಿಗೆಲ್ಲ ಮುಖ್ಯ । ದೈವವಾದ ನಿನ್ನ ॥ ॥ ೨ ॥

ಹೊಟ್ಟೆ ಬಟ್ಟೆಗಾಗಿ । ನಾ ಮಾಡುವ ।
ಕೆಟ್ಟ ಜನಗಳ । ಸೇವೆ ಸಾಕುಮಾಡಿ ॥
ಇಷ್ಟ ದೈವದ । **ಚಿದ್ರೂಪದ** ।
ನೆಟ್ಟನರಿಯುವ ದೃಷ್ಟಿಯೀವ ನಿನ್ನ ॥ ॥ ೩ ॥

* * *

೭೮. ಚಿತ್ತದಲ್ಲಿ ನೀ ನಿತ್ಯವೂ ಇರೆನ್ನ

(ಧಾಟಿ: ಜನ್ಮಮೆಂದುಕು ಭಕ್ತಲೇನಿ ನರ)

ರಾಗ: ಮಲಯಮಾರುತ ತಾಳ: ಆದಿತಾಳ

ಚಿತ್ತದಲ್ಲಿ ನೀ । ನಿತ್ಯವೂ ಇರೆನ್ನ ।
ಅತ್ತಇತ್ತನೀ । ನಗಲಬೇಡವಯ್ಯ ॥ ॥ ಪ ॥

ಮನುಜವೇಷದಿಂದ । ಮನವ ಮೋಹಿಸುವ ।
ಮುನಿಜನವಿನುತ । ಜನಕಜಾರಮಣ ॥ ॥ ಅ.ಪ. ॥

ನಿನ್ನ ಪಾದರಜವನ್ನು । ವೇದ–ಗಳು ।
ಇನ್ನು ಹುಡುಕುತ್ತ । ಕಾಣದಿರುವುವು ॥
ಸನ್ನುತಾಂಗನೇ । ಸಾಮವೇದಪ್ರಿಯ ।
ಇನ್ನು ನಾ ನಿನ್ನ । ಹುಡುಕಬಲ್ಲನೆ ॥ ॥ ೧ ॥

ನಾರದಾದಿಗಳು । ನಿನ್ನ ಕೀರ್ತಿಯನು ।
ಪಾರಗಾಣದೆ । ಹಾಡುತಿರುವರು ॥
ಆ ರೀತಿ ನಿನ । ನೊಲಿಸಬಲ್ಲನೆ ।
ಕಾರುಣ್ಯ ಸಾ । ಗರ ದಯಮಾಡು ॥ ॥ ೨ ॥

ಮುನಿಜನಗಳೂ । ನಿನ್ನ ರೂಪವನ್ನು ।
ಮನದಲ್ಲಿ ಕಟ್ಟ । ಲಾರದಿರುವಾಗ ॥
ನನಗೆ ಸಾಧ್ಯವೇ । ನಿನ್ನ ಹಿಡಿವುದು ।
ಅನಿಮಿಷಸ್ತುತ । ಚಿನುಮಯಾತ್ಮನೆ ॥ ॥ ೩ ॥

* * *

೭೯. ಶರಣಾಗತ ಪರಿಪಾಲಕ

(ಧಾಟಿ: ವನವಾಸನ ವಿನುತಾನತ)

ರಾಗ: ಶ್ರೀರಾಗ ತಾಳ: ರೂಪಕ

ಶರಣಾಗತ ಪರಿಪಾಲಕ । ಕರುಣಾಕರ ಶ್ರೀರಾಮ ॥ ॥ ಪ ॥

ಸೆರಗೊಡ್ಡುತ ಬೇಡಿಕೊಂಬೆ । ಧರಣೀಧರ ಜಾಕಾಂತ ॥ ॥ ಅ.ಪ. ॥

ಮೆರೆವ ನಿನ್ನ ರೂಪವೆನ್ನ ।
ಎರಡೂ ನಯನಂಗಳಲ್ಲಿ ॥
ಪರಿಪೂರ್ಣವಾಗಿ ತುಂಬಿ ।
ಭರದಿಂ ಮಿರುಗುತ್ತಿರುವಂತೊಲಿನೀ ॥
ಸರಿಸಿರುಹಾಂಬಕ ॥ ೧ ॥

ಎನ್ನ ಕಿವಿಯು ನಿನ್ನ ಕೀರ್ತಿ ।
ಯನ್ನೇ ಕೇಳುತ್ತಲೀ ॥
ನಿನ್ನ ಪದಾಂಬುರುಹದಲ್ಲಿ ।
ಎನ್ನೀ ಹಣೆ ತಾನಿರುವಂತೊಲಿನೀ ।
ಸನ್ನುತ ಗುಣಗಣ ॥ ॥ ೨ ॥

ಎನ್ನ ಮೂಗು ನಿನ್ನ ಮಾಲ್ಯ
ವನ್ನೇ ಮೂಸುತ್ತಲಿ
ನಿನ್ನ ಸುಪ್ರಸಾದದಿಂದ
ಎನ್ನೀ ಜೀವನವಿರುವಂ ತೊಲಿನೀ
ಚಿನ್ಮಯ ಮೂರುತಿ ॥ ॥ ೩ ॥

* * *

೮೦. ಶ್ರೀರಾಮ ರಾಮಭದ್ರ

(ಧಾಟಿ: ನೀನಾಮರೂಪಮುಲಕು)

ರಾಗ: ಶ್ರೀರಾಗ ತಾಳ: ರೂಪಕ

ಶ್ರೀರಾಮ ರಾಮಭದ್ರ । ರಾಮಚಂದ್ರ ಮಂಗಳಂ ॥ ॥ ಪ ॥

ಸೀತಾಲಕ್ಷ್ಮಣ ಸಮೇತ । ಪೂತಾತ್ಮ–ತ್ರಿದಶವಿನುತ ॥ ॥ ೧ ॥

ಭರತಾದಿ–ಸ್ವಜನಸೇವ್ಯ । ಭಕ್ತ ಸಂ–ದೋಹಭಾವ್ಯ ॥ ॥ ೨ ॥

ಪರಮಾತ್ಮ–ಪರಬ್ರಹ್ಮ । ಪರಂಜ್ಯೋತಿ– ಪರಂಧಾಮ ॥ ॥ ೩ ॥

ವೇದಾಂತ ಸರ್ವಸಾರ । ಖೇದಸಂ–ಹರಣ ಧೀರ ॥ ॥ ೪ ॥

ಭಕ್ತ ಸಂ–ಪೂಜ್ಯ ವೇಷ । ಭಕ್ತೇಡ್ಯ ಚಿದ್ವಿಶೇಷ ॥ ॥ ೫ ॥

* * *

೮೧. ಎಷ್ಟು ಸುಂದರ । ಎಷ್ಟು ಬಂಧುರ

ರಾಗ: ಕಾಂಬೋಜಿ ತಾಳ: ರೂಪಕ ತಾಳ

ಎಷ್ಟು ಸುಂದರ । ಎಷ್ಟು ಬಂಧುರ ।
ಈ ಮನೋಹರ । ಕುವರ ॥ ॥ ಪ ॥

ದೃಷ್ಟಿತಾಕೀತೆಂದು ಹೇಳು ।
ಎಷ್ಟು ಸರ್ವಮೋಹನಾಕಾರ ॥ ॥ ಅ.ಪ. ॥

ನೀಲಮೇಘಶ್ಯಾಮನು । ವಿ ।
ಶಾಲ ಕಮಲನಯನನು ॥
ಶೀಲ ವಿನಯ ಸಹಿತನು । ಭೂ ।
ಪಾಲ ಸಂಘಮಹಿತನು ॥ ॥ ೧ ॥

ಅಗಲವಾದ ಹಣೆಯು ಬಿಲ್ಲ ।
ಬಗೆಯೊಳಿರುವ ಹುಬ್ಬುಗಳು ॥
ಬಿಗಿವಡೆದಿಹ ದೀರ್ಘಬಾಹು ।
ಯುಗಳವು ಬಲು ಶೋಭಿಸುವವು ॥ ॥ ೨ ॥

ಬಲು ವಿಶಾಲ ವಕ್ಷದೆಡೆಯು ।
ಲಲಿತವಾದ ಚಲನವಲನ ॥
ಸಲೆ ಯೌವನದಿ ಶೋಭಿಪ ।
ಕುಲದೀಪಕನೀ ಚಿದ್ರೂಪ ॥ ॥ ೩ ॥

* * *

೮೨. ಜೋಜೋಜೋ ನೀಲಮೇಘಸಂಕಾಶ

ರಾಗ: ಆನಂದಭೈರವಿ ತಾಳ: ಅಟತಾಳ

ಜೋಜೋಜೋ ನೀಲಮೇಘಸಂಕಾಶ
ಲೀಲಾವಿನೋದ ಜೋ ಜೋ ॥ ॥ ಪ ॥

ಜೋಜೋಜೋ ಜಗನ್ಮೋಹಕಾಮಲರೂಪ ।
ರವಿವಂಶದೀಪ ಜೋಜೋ ॥ ॥ ಅ.ಪ. ॥

ಕುಲಕೋಟಿ ಕೋಟಿಗಳಿಗುದ್ಧಾರವನು ಗೈದೆ ।
ಬಲು ಹರ್ಷವಾಯಿತ್ತೈದೆ ॥
ಇಳೀಯಾಗುಹೋಗುಗಳ ತಿಳಿದು ನಡೆಸಲು ಬಲ್ಲೆ ।
ನಲವಿಂದ ಮುನಿಜನರನೊಲಿದು ರಕ್ಷಿಸಬಲ್ಲೆ ॥ ॥ ೧ ॥

ದುರ್ಜನರ ತಂಡಗಳ ಜರ್ಜರಗೊಳಿಪೆ ನೀನು ।
ನಿರ್ಜರಿಗಭಯ ನೀನು ॥
ಆರ್ಜವನೆ ಮೊದಲಾದ ಗುಣಗಳಾಕರ ನೀನು ।
ಊರ್ಜಿತ ಶ್ರೀಯಿಂದ ಬಾಳಬಲ್ಲವ ನೀನು ॥ ॥ ೨ ॥

ನೀನು ನೋಡಿದಡೆಲ್ಲ ದೇವನಿವಹಕಧೀಶ ।
ಮಾನವೋತ್ತಮನ ವೇಷ ॥
ದೀನಜನಮಂದಾರ ಭೂರಿ ಮಂಗಳಭೂಷ ।
ನೀನಿನ್ನು ಸರ್ವಕಾಧಾರದ **ಚಿದಾಕಾಶ** ॥ ॥ ೩ ॥

* * *

ಭಾಗ ೬:
ಶ್ರೀ ಮಾರುತಿ ಸಂಬಂಧವಾದ ಕೀರ್ತನೆಗಳು (೮೩-೮೯)

೮೩. ನಿನ್ನ ಶೌರ್ಯವನೇನ ಹೇಳಲಿ

(ಧಾಟಿ: ಎಂತನೇರ್ಚಿನಾ ಸಫಲಮೇಮಿ)

ರಾಗ: ಸಾವೇರಿ ತಾಳ: ಆದಿತಾಳ

ನಿನ್ನ ಶೌರ್ಯವನೇ-ನ ಹೇಳಲಿ ।
ಸನ್ನುತಾಂಗನೆ ಮಾರುತಿದೇವ ॥ ॥ ಪ ॥

ಮುನ್ನ ಸಿಂಹನಾದ । ದಿಂದ ಮೂರು ಲೋಕ ।
ವನ್ನು ಗಡ ಗಡ । ನಡುಗಿಸಿದಂಥ ॥ ॥ ಅ. ಪ. ॥

ಘನವಾದ ಯುದ್ಧ । ದಲಿ ಲೀಲೆಯಿಂದ ।
ದನುಜರನೆಲ್ಲ । ಧೂಳಿಯ ಮಾಡಿ ॥
ಮೊನೆಯಾದ ಬಾ । ಲದ ಬೆಂಕಿಯಿಂದ ।
ದನುಜೇಂದ್ರನ । ಪುರವನು ಸುಟ್ಟ ॥ ॥ ೧ ॥

ಕಮಲಜಾಂಡವ । ಭೇದಿಸುತ ।
ಭ್ರಮಗೊಳಿಸುವ । ಅಟ್ಟಹಾಸದಿಂದ ॥
ಅಮಿತ ಶೌರ್ಯದಿ । ಗಗನ ಮಾರ್ಗದಿ ।
ಗಮನ ಮಾಡಿದ । ದರ್ಪವನು ನಾ ॥ ॥ ೨ ॥

ಗಿರಿಗಳನೆಲ್ಲ । ಎತ್ತಿ ಹಾಕಿದೆ ।
ಶರಧಿಯನೆ । ಹಾರಿತೋರಿದೆ ॥
ಶರಣ ಜನರಿಗೆ । ಚಿದ್ವಿನೋದದ ।
ಪರಿಯ ತೋರಬಲ್ಲ ಪರಮಪೂಜ್ಯನಾದ ॥ ॥ ೩ ॥

* * *

೮೪. ಎಷ್ಟೆಂದು ವರ್ಣಿಸಲಿ

(ಧಾಟಿ: ತರುಮಾರುಲಾಡೇ ವೇಮೇ)

ರಾಗ: ಎರುಕುಲ ಕಾಂಬೋಜಿ ತಾಳ: ಆದಿತಾಳ

ಎಷ್ಟೆಂದು ವರ್ಣಿಸಲಿ । ಮಾರುತಿ ॥ ॥ ಪ ॥

ದುಷ್ಟ ಶಿಕ್ಷಕನೆ । ಶಿಷ್ಟರಕ್ಷನೆ ॥ ॥ ಅ.ಪ. ॥

ವಾಯುಪುತ್ರನಾಗಿ । ಭೀಮಸೇನನಿಗೆ ।
ದಾಯವರಿತು ಸಹಾಯ ಗೈದ ನಿನ್ನ ॥ ॥ ೧ ॥

ಶ್ವೇತವಾಹನನ । ಧ್ವಜದಲ್ಲಿ ನಿಂತು ।
ಪ್ರೀತಿಯನ್ನು ತೋರಿ । ಖ್ಯಾತನಾದ ನಿನ್ನ ॥ ॥ ೨ ॥

ಬಾಲ ಬ್ರಹ್ಮಚಾರಿ । ಯಾಗಿ ಪೂರ್ಣಕೃಪಾ ।
ಶೀಲನಾಗಿ ಚಿತ್ಸ್ವ । ಭಾವನಾದ ನಿನ್ನ ॥ ॥ ೩ ॥

* * *

೮೫. ಯಾಕೆ ನಿರ್ದಯನಾದೆ ಮಾರುತಿ

(ಧಾಟಿ: ಯಾಲ ಈಚಲ ಮೇಲ ಶ್ರೀಲೋಲ)

ರಾಗ: ಕಾಂಭೋಜಿ ತಾಳ: ಏಕತಾಳ

ಯಾಕೆ ನಿರ್ದಯನಾದೆ ಮಾರುತಿ ।
ಗುಣಮೂರ್ತಿ । ಬಹು ಪುಣ್ಯಕೀರ್ತಿ ॥ ॥ ಪ ॥

ದೀನತನದಿ ನಿನ್ನ ನಾನು ಬೇಡಿಕೊಂಬೆ ಭಕ್ತಿಯ ।
ದಾನ ಮಾಡಿ ನಿನ್ನ ಪಾದಸೇವೆಗೊಟ್ಟು ಕರುಣದೋರು ॥ ॥ ಅ.ಪ.॥

ಮನಸಿನಂತೆ ಓಡಬಲ್ಲ ವನಚರನು ನೀನು ನನ್ನ ।
ಮನವನೊಲಿಸಿಕೊಂಡು ನಿನ್ನ ವಶದಲ್ಲಿಟ್ಟುಕೋ ॥
ವನಜಸಂಭವಾಸ್ತ್ರವನ್ನು ಹರಿದು ಬಿಟ್ಟ ತೆರದಿ ।
ನನ್ನ ಮನದ ದುರಭಿಮಾನ ಗ್ರಂಥಿಯನ್ನು ಹರಿದು
ಪೊರೆಯೋ ಬೇಗ ॥ ॥ ೧ ॥

ಬಲ್ಲವನು ನೋಡೆ ನೀನೊಂಬತ್ತು ಶಬ್ದಶಾಸ್ತ್ರಗಳ ।
ಬಲ್ಲವರ ಬಲ್ಲಿದನು ಮೂರು ಲೋಕದಿ ॥
ಎಲ್ಲವನ್ನು ಬಲ್ಲೆ ನೀನು ಫುಲ್ಲನಾಭ ತತ್ತ್ವದಿರವ ।
ನೆಲ್ಲ ನನಗೆ ತಿಳಿಸಿ ಮೋಹವೆಲ್ಲ ಹೋಗುವಂತೆ ಮಾಡು ॥ ॥ ೨ ॥

ರಾಮನನ್ನು ಹೃದಯದಲ್ಲಿ ಕ್ಷೇಮದಿಂದ ಇರಿಸಿಕೊಂಡು ।
ಕ್ಷೇಮದಿಂದ ಮೂರು ಲೋಕಗಳನು ಸುತ್ತುವೆ ॥
ಸ್ವಾಮಿ ನೀನೇ ನನಗೆ ಜೀಯ ನೇಮದಿಂದ ಎರಗುವೆನು ॥
ಆ ಮಹಾತ್ಮನನ್ನು ತೋರು ದೇವದೇವ **ಚಿತ್ಸುಭಾವ** ॥ ॥ ೩ ॥

* * *

೮೬. ಮಾರುತೀ ಪೊರೆ ನೀಂ

(ಧಾಟಿ: ಪಾರಿಪೋವಲರಾ)

ರಾಗ: ಬಿಲಹರಿ ತಾಳ: ಏಕತಾಳ

ಮಾರುತೀ ಪೊರೆ ನೀಂ । ಯೋಗಿ ವಂದಿತ ಮುನಿನುತ ॥ ॥ ಪ ॥

ಧೀರ ವೀರರ ವೀರ ಗುಣಗಂಭೀರಾ ಬೇಡುವೆನು ॥ ॥ ಅ.ಪ. ॥

ರೋಗಪೀಡೆಯ ಹೋಗಲಾಡಿಸಿ ।
ಭೋಗಭಾಗ್ಯಗಳನ್ನು ನೀಡಿ ।
ಯೋಗಾರೂಢರನಾಗಿಸುವ ವಿ । ರಾಗಿ ವಿನುತನೆ ॥ ॥ ೧ ॥

ರಾಮನ ಯೋಚನೆ ಮಾಡುವ ಸೀತೆಗೆ ।
ರಾಮವಾರ್ತೆಯನೆಲ್ಲ ಹೇಳಿದೆ ।
ರಾಮ ನಾಮವನಾದರೂ ಹೇಳುತ । ಕಾಮಿತವ ಕೊಡು ॥ ೨ ॥

ನಿನ್ನಯ ಮಾನಸದಲ್ಲಿ ಶ್ರೀರಾಮನು ।
ಉಲ್ಲಾಸದೊಳು ಶೋಭಿಸುತಿರ್ಪನು ।
ಎನ್ನ ಮಾನಸದಲ್ಲಿ ನೀನೆ । ನಿಲ್ಲು ಚಿನ್ಮಯ ॥ ॥ ೩ ॥

* * *

೮೭. ನಲಿದು ಪೂಜಿಪೆ ನಾನು

(ಧಾಟಿ: ಸ್ವೀಕರಿಸೈ ಕರುಣಾಲೋಕ ಕೌಶಿಕ ಸುಗುಣ)

ರಾಗ: ಕಾಪಿ ತಾಳ: ಏಕತಾಳ

ನಲಿದು ಪೂಜಿಪೆನಾನು । ಒಲಿಯೊ ಮಾರುತಿ ನೀನು ॥ ॥ ಪ ॥

ಅಸುರೆಯ ಬಸಿರೊಳು । ನುಸಿದಾಗ ಹತ್ತಿದ ।
ಕಸವನು ತೊಳೆಯುವೆ । ಶಶಿಕೋಟಿ ತೇಜನೆ ॥ ॥ ೧ ॥

ದುರುಳನ ಗುದ್ದಲು । ಬಿರಿಮುಷ್ಟಿ ಮಾಡುತ ।
ಮೆರೆದಿಹ ಕೈಗೇಕೆ । ಸರಿಗಂಧ ಹಚ್ಚುವೆ ॥ ॥ ೨ ॥

ಗಿರಿಗಳ ಭಾರವ । ನೆರೆ ಸಹಿಸಿಹ ನಿನ್ನ ।
ಕೊರಳಿಗೆ ಹಾಕುವೆ । ಸುರಗಿಯ ಮಾಲೆಯ ॥ ॥ ೩ ॥

ನಲಿದು ರಾಮನ ಪದ । ತಲದಲಿಟ್ಟಾ ಹಣೆಗೆ ।
ನಲವಿಂದ ಕಸ್ತೂರಿ । ತಿಲಕವ ತಿದ್ದುವೆ ॥ ॥ ೪ ॥

ಅಡವಿಗಳೊಳಗೆಲ್ಲ । ಗುಡುಗಾಡಿದ ನಿನ್ನ ।
ಅಡಿಗಳೊಳೆನ್ನ ಹಣೆ । ಇಡುವೆನಾದರದಿಂದ ॥ ॥ ೫ ॥

ಭಕ್ತಿಯ ಬಂಧು ವಿ । ರಕ್ತಿಯ ಸಿಂಧುವೆ ।
ಭಕ್ತಿಯ ನೀಡು ಚಿ । ಚ್ಛಕ್ತಿಯೊಳೆಂಬುವೆ ॥ ॥ ೬ ॥

* * *

೮೮. ವಂದಿಪೆ ಮನದಲಿ

(ಧಾಟಿ: ಏಮನಿ ಪೊಗಡುದು)

ರಾಗ: ತೋಡಿ ತಾಳ: ಆದಿತಾಳ

ವಂದಿಪೆ ಮನದಲಿ । ಇಂದು ನಾ ದೈನ್ಯದಿ ।
ಪಾಲಿಸು ಜೀಯ ಆಂ–ಜ–ನೇ–ಯ ॥ ಪ ॥

ಶ್ರೀರಾಮಚಂದ್ರಗೆ । ಪ್ರಿಯನು ನೀನಲ್ಲವೆ ।
ಕಾರುಣ್ಯದಿಂದಲಿ । ಪಾ–ರು– ಮಾ–ಡೆನ್ನ ॥ ॥ ಅ.ಪ. ॥

ಚಿನ್ನದಂತೆ ಹೊಳೆ ಹೊಳೆಯುತಿರುವ ದೇಹ ।
ವನ್ನು ಪಡೆದು ಧೀರಾ । ಗ್ರೇಸರನಾಗಿರುತ ॥
ಇನ್ನು ಶರಣು ಬಂದ । ಜನಗಳ ಸರ್ವಭಯ ।
ವನ್ನು ಕಳೆಯುವಂಥ ಮಾ–ರು–ತಿ–ರಾಯ ॥ ॥ ೧ ॥

ಸುರಪನ ವಜ್ರವ । ತೃಣದಂತೆ ಕಡೆಗಂಡು
ಹರಿದಶ್ವನಂದದಿ । ಮಿರುಮಿರುಗುತ್ತಲಿ ॥
ಸುರಕಾರ್ಯಕಾಗಿಯೆ । ತನುವನೆತ್ತಿರುವಂತೆ ।
ಮೆರೆಯುತಲಿರುವಂಥ । ರಾಮ–ದೂ–ತನೆ ॥ ॥ ೨ ॥

ಸಂಗೀತ ವಿದ್ಯೆಯ । ಸಾಂಗವಾಗಿಯೇ ತಿಳಿದು ।
ಅಂಗಜಹರನವ । ತಾರವಾಗಿರುತಲಿ ॥
ಮಂಗಳಮೂರುತಿ । ಸ್ವರ್ಣಯಜ್ಞೋಪವೀ ।
ತಾಂಗ ಚಿರಂಜೀವಿ । ರಾಮ–ಸಾ–ರಥಿ ॥ ॥ ೩ ॥

ಶರಧಿಯ ಹಾರುವ । ಪರಮ ಸಮರ್ಥನಾಗಿ ।
ಶರಣರನೆಲ್ಲರ । ಕೈಹಿಡಿದು ।
ಕರುಣದೊಳಗೆ ಭವ । ಶರಧಿಯ ದಾಟಿಪ ।
ಪರಮದಯಾನಿಧಿ । ಕೇ–ಸ–ರೀ ಸುತ ॥ ೪ ॥

ಬೆಳದಿಂಗಳಂದದಿ । ಬೆಳಗುವ ಕಿರುನಗೆ ।
ಎಳೆದಳಿರಂದದಿ । ಕೋಮಲದೇಹವು ॥
ನಳಿನದಳಾಯತ । ನೇತ್ರದಿ ನನ್ನೊಳು ।
ಬೆಳಗುತಲಿರು ನೀನು । ಚಿ–ತ್ಸ್ವರೂ–ಪದಿ ॥ ॥ ೫ ॥

* * *

೮೯. ಅಂಜನಾನಂದದಾತ

(ಧಾಟಿ: ನೀನಾಮರೂಪಮುಲಕು)

ರಾಗ: ಸೌರಾಷ್ಟ್ರ ತಾಳ: ಏಕತಾಳ

ಅಂಜನಾನಂದದಾತ । ರಾಮದೂತ ಮಂಗಳಂ ॥ ॥ ಪ ॥

ಸಿಂಹಿಕಾಹರಣದಕ್ಷ । ಮಾರುತಿ ಪಿಂಗಳಾಕ್ಷ ॥ ॥ ಅ.ಪ. ॥

ರವಿಯನೆ ಹಣ್ಣೆನುತ್ತ ।
ತವಕಿಸಿ ಹೋದ ಧೀರ ॥ ॥ ೧ ॥

ಕೇಸರೀತನಯ ಮೈನಾ ।
ಕೇಶತೋಷಿತ ಹೃದಯ ॥ ॥ ೨ ॥

ಸಂಜೀವನವನು ಬಲ್ಲ ।
ಮಂಜುಭಾಷಣ ಚತುರ ॥ ॥ ೩ ॥

ಭಕ್ತಿದಾಯಕದೇವ ।
ಭಕ್ತರ ಚಿತ್ಸ್ವಭಾವ ॥ ॥ ೪ ॥

* * *

ಭಾಗ ೮:
ಶ್ರೀ ಶಿವ ಸಂಬಂಧವಾದ ಕೀರ್ತನೆಗಳು (೯೦-೧೧೫)

೯೦. ಜನ್ಮಗಳನೆನಗೆ ಕೊಡು

(ಧಾಟಿ: ಏನ ಬೇಡಲಿ ನಿನ್ನ ಬಳಿಗೆ ಬಂದು)

ರಾಗ: ಎದುಕುಲ ಕಾಂಬೋಜಿ ತಾಳ: ಝುಂಪೆತಾಳ

ಜನ್ಮಗಳನೆನಗೆ ಕೊಡು ತಿರುಶಂಭುನೀನು ।
ಜನ್ಮವೀವಾಟದಿ ವಿನೋದವನು ಪಡುತ ॥ ॥ ಪ ॥

ಕಾಶಿಯೊಳಗಿದ್ದು ಗಂಗೆಯಲಿ ಸ್ನಾನವ ಮಾಡಿ ।
ಆಶೆಗಳ ತೊರೆದು ನಿರ್ಮಲ ಹೃದಯದಿ ॥
ಈಶ ಶಂಕರ ಚಂದ್ರಚೂಡ ಎಂದೆನುತ ವಿ ।
ಶ್ವೇಶನನು ಭಕ್ತಿಯಲಿ ಭಜಿಸುತಿರುವಂಥ ॥ ॥ ೧ ॥

ಹಿಮಗಿರಿ ಗುಹಾಂತರಾಳದಿ ಸಮಾಧಿಯೊಳಿದ್ದು ।
ಕ್ರಮದಿಂ ಸಮಾಧಿತಾನಿಳಿದ ಮೇಲೆ ॥
ಹಿಮಕರನ ಬೆಳಕಿನೊಳು ಹೊರಬಿದ್ದು ಹಿಂದಿನಾ ।
ಭ್ರಮೆಗಳನು ನೆನೆನೆನೆದು ನಗುತಲಿರುವಂಥ ॥ ॥ ೨ ॥

ಹೊರಗೆ ಪರಿಪರಿಯ ವಿಷಯಗಳೆಲ್ಲ ಇದ್ದರೂ ।
ಹೊರಗೆ ಬಿಡುತವುಗಳನ್ನು ಮನಕೆ ತರದೆ ॥
ತಿರುತಿರುಗಿ ನೋಡಲಲ್ಲೆಲ್ಲಿಯೂ ಚಿದ್ರೂಪ ।
ದರಿವಿನೊಳಗೇ ಮುಳುಗಿ ತೇಲುತಿರುವಂಥ ॥ ॥ ೩ ॥

* * *

೯೧. ಮನುಜ ಜನ್ಮದಲಿ ಹಾಕಿದ ಮಾತ್ರಕೆ

(ಧಾಟಿ: ಕರುಣಾಕರ ನೀನೆಂಬುದೇಕೋ)

ರಾಗ: ಧನಾಸರಿ ತಾಳ: ಛಾಪು

ಮನುಜಜನ್ಮದಲಿ ಹಾಕಿದಮಾತ್ರಕೆ ।
ಘನತೆಯೇನೋ ಕಾಣೆ ॥ ॥ ಪ ॥

ರವಿಶಶಿವೈಶ್ವಾನರನಯನನೆ ನೀ । ಮನದೊಳಗಿದ ।
ವಿವೇಚನೆ ಮಾಡಿ ನೋಡೋ ॥ ॥ ಅ.ಪ. ॥

ಕರಚರಣಾದೀಂದ್ರಿಯವಿಹುದೆಂಬೆಯ ।
ಧರಣಿಯೊಳೆಲ್ಲಿಲ್ಲಿಯೂ ನಿನ್ನ ॥
ಇರುವಿಕೆಯನುಭವವನೆ ಕೊಳಲಾರದ ।
ಕರಚರಣಗಳಿಂದೇನು ಪ್ರಯೋಜನ ॥ ॥ ೧ ॥

ಮನಸನು ಕೊಟ್ಟಿಹೆನೆಂದು ಪೇಳ್ವೆಯ ।
ಅನಿಶವು ಮನಸಿಜನಿಗೆ ತಾನು ॥
ಮನೆಯಾಗಿ ನಿನ್ನನು ನೆನೆಯದೆ ಇರುವಂಥ ।
ಮನಸನಿಟ್ಟುಕೊಂಡೇನು ಪ್ರಯೋಜನ ॥ ॥ ೨ ॥

ಬುದ್ಧಿ ಇಹುದೆ ಒಂದು ಹೆಚ್ಚಿನದೆಂಬೆಯ ।
ಬುದ್ಧಿಗೂ ನೀನೇಕೆ ದೂರನಾದೆ ॥
ಶುದ್ಧ **ಚಿದ್ರೂಪವ** ಗ್ರಹಿಸಲಾರದಂಥ ।
ಬುದ್ಧಿಯನೆನಗಿತ್ತೇನು ಪ್ರಯೋಜನ ॥ ॥ ೩ ॥

* * *

೯೨. ಪ್ರಮಥ ಗಣೇಶ್ವರ ಮಹೇಶ

(ಧಾಟಿ: ರಘುಕುಲ ನಾಯಕಾ-ನತೇಪ್ಸಿತಾರ್ಥಿದಾಯಕ)

ರಾಗ: ಮೋಹನ ತಾಳ: ಆದಿತಾಳ

ಪ್ರಮಥಗಣೇಶ್ವರ ಮಹೇಶ ಚಂದ್ರಶೇಖರ ।
ಈಶ ಚಂದ್ರಶೇಖರ ಮಹೇಶ ಚಂದ್ರಶೇಖರ ॥ ॥ ಪ ॥

ಹರಿಮೃದಂಗ ಹಿಡಿದಿರೆ ಭೂ ।
ಸುರನು ತಾಳ ಹಾಕಲು ॥
ಸರಸತಿ ವೀಣೆಯನು ನುಡಿಸೆ ।
ಭರದಿ ತಾಂಡವವಾಡಿದ ॥ ॥ ೧ ॥

ಸುರಪನು ಕೊಳಲೂದುತಿರಲು ।
ಶರಧಿಸುತೆಯು ಹಾಡುತಿರೆ ॥
ಸುರರಸಂಘ ನೋಡುತಿರಲು ।
ಭರದಿ ತಾಂಡವವಾಡಿದ ॥ ॥ ೨ ॥

ಗಿರಿಯ ಕೊನೆಯ ಶಿಖರದಲ್ಲಿ ।
ಸುರಚಿರ ರತ್ನಾಸನದಲಿ ॥
ಗಿರಿಜೆಯಿರಲು ಚಿದ್ವಿನೋದದ ।
ಭರದಿ ತಾಂಡವವಾಡಿದ ॥ ॥ ೩ ॥

* * *

೯೩. ತ್ರಿಪುರದಾಹಕವೇಷವ

(ಧಾಟಿ: ಕಮಲನಾಭನ ಸುಂದರಿ)

ರಾಗ: ಮೋಹನ ತಾಳ: ಆದಿತಾಳ

ತ್ರಿಪುರದಾಹಕವೇಷವ । ನೀ ತೋರಿಸು ॥ ॥ ಪ ॥

ಧರಣಿಯೆ ರಥವಾಗಿ । ಪರಿಣಮಿಸಲು ಅದಕೆ ।
ತರಣಿ ಚಂದ್ರಮರನ್ನ । ಗಾಲಿಯಮಾಡಿಕೊಂಡ ॥ ॥ ೧ ॥

ಕನಕಗಿರಿಯೆ ಬಿಲ್ಲು । ಕನಕನಾಭನೆ ಬಾಣ ।
ಕನಕಗರ್ಭ ಸಾರಥಿ । ಎನಿಸಿ ಮೆರೆದ ನಿನ್ನ ॥ ॥ ೨ ॥

ಶರಧಿ ತೂಣೀರವು । ವರವೇದಗಳೆ ಕುದುರೆ ।
ಉರುಗೇಶನೇ ಹೆದೆ । ಅರಿಯೆ ಚಿದ್ರೂಪವಾದ ॥ ॥ ೩ ॥

* * *

೯೪. ಶಂಕರಾ ನಿನ್ನ ಸೋಂಕಿನ

(ಧಾಟಿ: ಇಂದಿರೇಮಾಮಕಿನ ಮಂದಿರೇ)

ರಾಗ: ಜುಂಜೋಟಿ ತಾಳ: ರೂಪಕ

ಶಂಕರಾ ನಿನ್ನ ಸೋಂಕಿನ ।
ಬಿಂಕವೆಂದು ದೊರೆವುದೊ ॥ ॥ ಪ ॥

ವಿಧಿಯ ರುಂಡವನ್ನು ನೀನು ।
ಮುದದಿ ಹಿಡಿದ ಕಾರಣದಿ ॥
ಅದನು ಕನಕಪಾತ್ರೆಯೆಂದು ।
ಬುಧರು ಸ್ತುತಿಸುವಂತೆ ಎನಗೆ ॥ ॥ ೧ ॥

ಮಸಣದ ಬಿಸಿಬೂದಿಯನ್ನು ।
ವಸನದಂತೆ ನೀನು ಧರಿಸೆ ।
ರಸೆಯೊಳದು ವಿಭೂತಿಯೆನಿಸಿ ।
ಹೆಸರ ಹೊಂದಿದಂತೆ ಎನಗೆ ॥ ೨ ॥

ಹರಿಯು ಕಣ್ಣಕಳಚಿ ನಿನ್ನ ।
ಚರಣಯುಗದೊಳಿಡಲದನ್ನು ॥
ಸರಸಿಜವಂ ಮಾಡಿದಂಥ ।
ಪರಮಚಿದ್ವಿಶೇಷನೆ ಎನಗೆ ॥ ॥ ೩ ॥

* * *

೯೫. ಗಿರಿಶಾ ಗೌರೀಪ್ರಾಣಾಧೀಶ

(ಧಾಟಿ: ಹರಿಹಾ ಆನಂದಾಚಾಕಂದ ಉಭಾಪುಡೆ)

ರಾಗ: ಮುಖಾರಿ ತಾಳ: ಏಕತಾಳ

ಗಿರಿಶಾ ಗೌರೀಪ್ರಾಣಾಧೀಶ ಜಯ ಜಯ ।
ದುರಿತವಿನಾಶ ಮಹೇಶ ॥ ॥ ಪ ॥

ದಕ್ಷ ಯಜ್ಞ ವಿಧ್ವಂಸಕಾರಿ ಸುರ ।
ಪಕ್ಷಪಾತಿ ಕಾಮಾರಿದುಃಖಕರ ॥ ॥ ೧ ॥

ಘೋರಪಾಪಸಂದೋಹ ನಾಶನ ।
ಭೂರಿದಯಾಳೋ ಭೋಗಿಭೂಷಣ ॥ ॥ ೨ ॥

ಈಶ ಗಿರೀಶ ಧನೇಶ್ವರ ಮಿತ್ರ ।
ಕಾಶೀಶ್ವರ ಸುರಸನ್ನುತಿಪಾತ್ರ ॥ ॥ ೩ ॥

ವಾಸವಾದಿನುತ ದುಷ್ಟ ಭಯಂಕರ ।
ವೇಷ ಜಟಾಧರ ಚಂದ್ರಶೇಖರ ॥ ॥ ೪ ॥

ಕಲಭಪ್ರೌಢ ಮಹಾನಾಟ್ಯೇಶ್ವರ ।
ಅವಿಮುಕ್ತೇಶ್ವರ ಪ್ರಮಥಗಣೇಶ್ವರ ॥ ॥ ೫ ॥

ಕಾಳಿಂದೀಪ್ರಿಯ ಕಮಲನಯನ ಸಖ ।
ಕಾಲಕಾಲಕಾಲಾಗ್ನಿ ಪಂಚಮುಖ ॥ ॥ ೬ ॥

ನೀಲಕಂಠ ನಿಖಿಲಾಮರರಕ್ಷಕ ।
ಫಾಲಚಂದ್ರ ಸಂಸೃತಿವಿಷಭಕ್ಷಕ ॥ ॥ ೭ ॥

ಶಾಂತಮೂರ್ತಿ ವರಶಾಂತಿ ಗುಣಪ್ರಿಯ ।
ಶಾಂತಿದಾಯಕಾ ಶಾಂತಸಂಶಯ ॥ ॥ ೮ ॥

ಕುಂಭಜಾತನುತ ನಟನವಿಲಾಸ ।
ಶಂಭು ಹರ **ಚಿದಾಕಾಶ** ನಿವಾಸ ॥ ॥ ೯ ॥

* * *

೯೬. ಪೊರೆ ಬೇಗ ಹರ ಈಗ

(ಧಾಟಿ: ರಘುವೀರ ರಣಧೀರ)

ರಾಗ: ಭೈರವಿ ತಾಳ: ರೂಪಕತಾಳ

ಪೊರೆ ಬೇಗ ಹರ ಈಗ ।
ಬರಿದೇ ಕಾಲವು ಹೋಯಿತು ॥ ॥ ಪ ॥

ಶರಣಾರ್ಥಿಗಳನು ಕಾವ ।
ಕರುಣಾಳು ಶ್ರೀ ಶಿವ ॥ ॥ ಅ.ಪ. ॥

ಜನನಿಯ ಗರ್ಭಾಶಯದಲಿ ।
ನೆನೆಯಬಾರದ ಹೊಲಸಿನಲ್ಲಿ ॥
ಕೊನೆಮೊದಲನು ಕಾಣದೆಷ್ಟೊ ।
ದಿನಗಳ ನಾ ಕಳೆದೆನಲ್ಲ ॥ ॥ ೧ ॥

ಹುಡುಗತನದಿ ತಾಯಮೊಲೆಯ ।
ಕುಡಿಯುತಾಟಪಾಟದಲ್ಲಿ ॥
ಜಡತನದೊಳು ದಿನವ ಕಳೆವ ।
ಸಡಗರದೊಳಗಿದ್ದೆನಲ್ಲ ॥ ॥ ೨ ॥

ಹರೆಯದಲ್ಲಿ *ಸತಿಸುತರೊಳು ।
ಬೆರೆತು ಮುಂದುಗಾಣದೆ ॥
ಮೆರೆದು ನಿನ್ನ ಚಿತ್ಸ್ವರೂಪವ ।
ಮರೆತು ಮದದಿ ಕೆಟ್ಟೆನಲ್ಲ ॥ ॥ ೩ ॥

* * *

---

* ಸ್ತ್ರೀಯರು 'ಸುತಹಿತರೊಳು' ಎಂದು ಹೇಳಿಕೊಳ್ಳಬೇಕು.

೯೭. ಬಹುಚಿತ್ರವೀ ನಿನ್ನ ಮಹಿಮೆ

(ಧಾಟಿ: ತನವಾರಿತನಮು ಲೇದಾಯ)

ರಾಗ: ಬೇಗಡೆ ತಾಳ: ಆದಿತಾಳ

ಬಹುಚಿತ್ರವೀ । ನಿನ್ನ ಮಹಿಮೆ । ಚಂದ್ರಶೇಖರಾ ।
ಮಹಾದೇವಾ ॥ ॥ ಪ ॥

ವಿಷವೆ ನಿನ್ನಯ । ಅಶನವಾದರೂ ।
ವಿಷಮನೇತ್ರನೀ । ನಮೃತ ಸ್ವರೂಪ ॥ ॥ ೧ ॥

ತಲೆಯ ಬುರುಡೆಯ । ತಳೆವನಾದರೂ ।
ತಿಳಿದು ನೋಡೆ ನೀ । ನಿಳೆಗೆ ಪಾವನ ॥ ॥ ೨ ॥

ವಿಷಮದೃಷ್ಟಿ ನೀ । ನಾಗಿಕಂಡರೂ ।
ಅಸಮ ಮಹಿಮನೆ । ಸಮದರ್ಶಿ ನೀನು ॥ ॥ ೩ ॥

ತಿರುದುತಿಂಬುದು । ತಪ್ಪದಿದ್ದರೂ ।
ಅರಿಯೆ ನೀನೆ ಬ್ರ । ಹ್ಮಾಂಡದೀಶ್ವರನು ॥ ॥ ೪ ॥

ಭವನಾಗಿ ನೀನಭವನಾಗಿರುವೆ ।
ಭವವ ಕಳೆವ ಚಿ । ತ್ಕಳೆಯು ಆಗಿರುವೆ ॥ ॥ ೫ ॥

* * *

೯೮. ಶ್ರೀ ಶಂಕರಾ ಕರುಣಾಶರಧೆ

(ಧಾಟಿ: ಆನಂದಸಾಗರ ಮೀದನಿದೇಹ)

ರಾಗ: ಗರುಡಧ್ವನಿ ತಾಳ: ಆದಿತಾಳ

ಶ್ರೀ ಶಂಕರಾ ಕರುಣಾಶರಧೆ ।
ಶರಣಾಗತಾವಳಿ ರಕ್ಷಕನೆ ॥ ॥ ಪ ॥

ಭಕ್ತಿಪ್ರಿಯಾ ಭವನಾಶಕಾ
ಭಕ್ತಾಭೀಷ್ಟವರಪ್ರದಾತ ॥ ॥ ಅ.ಪ. ॥

ದೇವಾಸುರರರು ಕ್ಷೀ । ರಾಬ್ಧಿಯ ಕಡೆಯ ।
ಲ್ಕಾವಿರ್ಭವಿಸಿದ । ವಿಷವನ್ನು ನೀನು
ಸೇವಿಸುತ । ಕಾಪಾಡಿದೆ ।
ದೇವಾಸುರರ । ಸಂದೋಹವನು ॥ ॥ ೧ ॥

ಬುಸುಬುಸುಗುಟ್ಟುತೆ । ಭೋರ್ಗರೆಯುತ್ತ ।
ಬಿಸಿಯುಸಿರಿಡುವಾ । ಹಾವನು ನೀನು ।
ಹೊಸ ಹೂವಿನ । ಮಾಲೆಯಂತೆ ।
ಅಸಮಾಕ್ಷನೆ ಧರಿಸಿದೆ ನೀನು ॥ ॥ ೨ ॥

ಹುಲಿದೊಗಲುಟ್ಟು । ಜಟೆಯನ್ನು ಬಿಟ್ಟು ।
ತಲೆ ಬುರುಡೆಗಳನು । ಕೊರಳಿಗೆ ಕಟ್ಟಿ ।
ತಿರಿದುಂಬುವಾ । ಪರಿಯೇನಿದು ।
ಪರಿಪೂರ್ಣ ಚಿ । ನ್ಮಯ ಮೂರುತಿ ॥ ॥ ೩ ॥

* * *

೯೯. ಎಂಥ ದಯಾವಂತನೊ

(ಧಾಟಿ: ರಾಮಭಕ್ತಿ ಸಾಮ್ರಾಜ್ಯ)

ರಾಗ: ಬಂಗಾಳ ತಾಳ: ಆದಿತಾಳ

ಎಂಥ ದಯಾವಂತನೊ ನೀ ।
ಗಂಗಾಧರನೆ ಕಾಣೆನಾನಿದನು ॥ ॥ ಪ ॥

ದೇವಾದಿಗಳು । ತಿಳಿಯಲಿಂದು ।
ಶ್ರೀ ಶಂಕರಾ । ಗೌರೀವರ ॥ ॥ ಅ.ಪ. ॥

ಸುರನರವರರು । ಕಾದು ನಿನ್ನ ।
ಚರಣಸೇವೆಯ । ಮಾಳ್ಪರು ॥
ಮರೆಯುತಂಥ । ಘನತೆಯನ್ನು ।
ನೀನಾಗಿಯೇ । ಭಕ್ತಜನಕಧೀನ ॥ ॥ ೧ ॥

ದುರಿತಗಳೆಲ್ಲಾ । ಮಾಡಿದವರೂ ।
ಹರ ಹರ ಶಿವ । ಶಿವ ಎಂದರೆ ॥
ನರಕಬಾಧೆಯ । ಪರಿಹರಿಸುತ್ತ ।
ಕರುಣದಿಂದಲಿ । ಮೋಕ್ಷವನ್ನು ಕೊಡುವೆ ॥ ॥ ೨ ॥

ಬೇಡುತ ನಿನ್ನನು । ಪೂಜಿಸಿದರೆ ।
ಬೇಡಿದಷ್ಟು । ನೀಡುವೆ ॥
ಬೇಡದೆ ನಿನ್ನನು । ಪೂಜಿಸಿದವರ ।
ಮಾಡುವೆಯ್ಯೆ ಚಿ । ತ್ಸ್ವರೂಪರನು ನೀಂ ॥ ॥ ೩ ॥

* * *

೧೦೦. ನೀನೆಂದು ನನ್ನ ಮುಂದೆ

(ಧಾಟಿ: ಶ್ರೀ ರಘು ಕುಲಮುಂದುಬುಟ್ಟಿ ನೀವು)

ರಾಗ: ಹಂಸಧ್ವನಿ ತಾಳ: ಆದಿತಾಳ

ನೀನೆಂದು ನನ್ನ ಮುಂದೆ ಕಾಣುವೆಯೊ ।
ಜ್ಞಾನಿಗಳ ಒಡೆಯ ಚಂದ್ರಚೂಡ ॥ ॥ ಪ ॥

ಕಾಣಿಸದೆ ಭಕ್ತರನು । ದೀನರಾಗಿ ಮಾಡುವರೆ ॥ ॥ ಅ.ಪ. ॥

ಕುಂದೇಂದು ಶಂಖ–ಸ್ಫಟಿಕಂಗಳಂತೆ ।
ಬಂಧುರಶುಭ್ರ–ದೇಹವನ್ನು ತಾಳಿ ।
ಅಂದವಾದ ರು– ದ್ರಾಕ್ಷಮಾಲೆಯನ್ನು ।
ಚಂದದಿಂದ ಹಾಕಿ–ಕೊಂಡ ರೂಪಿನಿಂದ ॥ ॥ ೧ ॥

ಸರ್ವಮಂಗಳೆಯ–ತೊಡೆಯೊಳಿಟ್ಟುಕೊಂಡು ।
ಶರ್ವರೀಶನ– ಜಟೆಗೆ ಸೆಕ್ಕಿಕೊಂಡು ।
ಸರ್ವದೇವರ– ಸೇವೆಗೊಳ್ಳುತ ।
ಸರ್ವಜ್ಞನಾಗಿ– ಸರ್ವಶಕ್ತನಾದ ॥ ॥ ೨ ॥

ವರದ ಹಸ್ತವನು । ಮುಂದುಮಾಡಲಿ ।
ಕಿರುನಗೆಯ ಪರಿ । ಯ ಬೀರುತಲಿ ।
ಕರುಣಾಕಟಾಕ್ಷವ । ತೋರುತಲಿ ।
ಭರದಿ **ಚಿತ್ಕಳೆಯ**–ಅರಿವನೀಯುತಲಿ ॥ ॥ ೩ ॥

* * *

೧೦೧. ತಿಳಿವೆನೆಂತು ನಾ ಚಂದ್ರಚೂಡ

(ಧಾಟಿ: ಸಂಗೀತಶಾಸ್ತ್ರಜ್ಞಾನಮು)

ರಾಗ: ಕಾನಡಾ ತಾಳ: ಏಕತಾಳ

ತಿಳಿವೆನೆಂತು ನಾ- ಚಂದ್ರಚೂಡ ನಿನ್ನ ।
ಸುಲಭವಾಗಿ ನೀ-ನೊಲಿಯದಿದ್ದರೆ ॥ ॥ ಪ ॥

ಕಲಿಕಲ್ಮಷಾ-ವಿಷ್ಟವಾಗಿದ್ದು ।
ನೆಲೆಗೆನಿಲ್ಲದ-ಮನದಿಂದಲಿ ॥ ॥ ಅ.ಪ. ॥

ಸ್ಥೂಲದೇಹವನ್ನು । ತಾಳಿ ನಿನ್ನ ಬಹು ।
ಲೀಲೆಗಳನು । ಹೊರಗೆ ಹಾಕದಿರೆ ॥
ಬಾಲತನದ ನಾನು । ಹೃದಯದೊಳಗಣ ।
ಕೀಲನೆಲೆಯನು । ಅರಿಯಲಾರೆನು ॥ ॥ ೧ ॥

ಆದಿಯಿಲ್ಲದೆ । ಅಂತ್ಯವಿಲ್ಲದೆ ।
ಹೋದರೆ ನನ್ನ । ಇಂದ್ರಿಯಂಗಳು ॥
ಆದರದಿಂ । ದರಿವುದಕೆ ।
ಸಾಧ್ಯವೆಪೇ । ಳೈ ದೇವ ನಿನ್ನ ॥ ॥ ೨ ॥

ಅತಿ ದೊಡ್ಡದಕಿಂ । ತತಿದೊಡ್ಡವನು ।
ಅತಿ ಚಿಕ್ಕದಕಿಂ । ತತಿ ಚಿಕ್ಕವನು ॥
ಅತಿಯನು ನೀ । ಬಿಡದಿರೆ ಮಂದ ।
ಮತಿಯಿಂದ ಚಿ । ತ್ಸ್ಥಿತಿಯಂದವನು ॥ ॥ ೩ ॥

* * *

೧೦೨. ನಿನ್ನ ಬಿಟ್ಟು

(ಧಾಟಿ: ಮತಿಲೋನ ಯೋಚನಪುಟ್ಟಲೇದ)

ರಾಗ: ಕೋಲಾಹಲ ತಾಳ: ಆದಿತಾಳ

ನಿನ್ನ ಬಿಟ್ಟು ಮತ್ತನ್ಯದೇವರಿ ।
ಗಿನ್ನೇಕೆ ನಾ ಶರಣೆನ್ನಲಿ ॥ ॥ ಪ ॥

ನನ್ನ ಕಷ್ಟವ ಕಳಿಯುವದ ।
ಕಿನ್ನು ನೋಡಲು ನೀನೇ ಸಮರ್ಥ ॥ ॥ ಅ.ಪ. ॥

ಭರದಿಂದಲಿ–ವಿಷವನ್ನು ಕುಡಿ ।
ದರಗಿಸಿಕೊಂಡ–ನಿನ್ನ ಬಿಟ್ಟಮೇಲೆ ॥
ದುರಿತಗಳನ್ನು – ಹೊಟ್ಟೆಯೊಳು ।
ನೆರೆ ಹಾಕಿಕೊಂಡು – ಪೊರೆವರಾರಯ್ಯ ॥ ॥ ೧ ॥

ತ್ರಿಪುರದಾಹಕ–ನಾದ ನಿನ್ನಯ ।
ಕೃಪೆಗೆ ಪಾತ್ರನಾ–ಗದಿದ್ದರೆ ॥
ವಿಪುಲ ಕಾಮಕ್ರೋಧಲೋಭಂಗಳನು ।
ಕೃಪೆಯಿಂದನೀ–ಗುವರಿನ್ನಾರಯ್ಯ ॥ ॥ ೨ ॥

ಗಿರಿಯನ್ನು ಬಿ–ಲ್ಲಾಗಿ ಮಾಡಿಕೊಂ ।
ಡಿರುತಿಹನಿ–ನ್ನನ್ನು ಬಿಟ್ಟಮೇಲೆ ॥
ದುರುಳಚಿತ್ತವ ಚಿತ್ಸ್ವರೂಪದ ।
ಪರಿಯ ನೋಡಲು ತಿರುಗಿಪರಾರೈ ॥ ॥ ೩ ॥

* * *

೧೦೩. ವರವನೆನಗಿದೊಂದ ನೀ

(ಧಾಟಿ: ಮನಸು ಕರಗದೇ ಶ್ರೀ)

ರಾಗ: ಹಂಸಧ್ವನಿ ತಾಳ: ರೂಪಕತಾಳ

ವರವನೆನಗಿದೊಂದ ನೀ । ಕರುಣಿಸೈ ಸದಾ । ಶಿವನೇ ॥ ॥ ಪ ॥

ದುರುಳಜನರ ಶಿಕ್ಷಕನೆ । ಶರಣಜನರ ರಕ್ಷಕನೆ ॥ ॥ ಅ.ಪ. ॥

ಪರಿಪರಿವಿಷಯಂಗಳನನು । ಭವಿಸುವ ಸಡಗರದಲಿ ।
ಮರೆತು ನಿನ್ನ ನೆನಪುಗಳೊಡನೆ ।
ಬೆರೆತು ದುಃಖಿಯಾದೆನಲ್ಲ ॥
ಪರಿಪರಿಯಾ ವಿಷಯಸುಖ
ಸ್ಫುರಣೆಯಲ್ಲಿ ನಿನ್ನ ನಾನು ।
ಮರೆಯದಂತೆ ನಿನ್ನ ನಾಮ
ಸ್ಮರಣೆ ಇತ್ತು ಕಾಯ್ವುದೆನ್ನ ॥ ॥ ೧ ॥

ಧರಣಿಯೆಂಬ ನಾಟ್ಯದ ಮಂ । ದಿರದೊಳಾಡಲೆಂದು ನೀ ।
ಪರಿಪರಿವೇಷಗಳೊಳೆನ್ನ ।
ಕಳುಹು ನಿನಗೆ ತೋರಿದಂತೆ ॥
ಪರಶಿವನೇ ಆ ನಾಟ್ಯದ ।
ಭರದಿ ನನ್ನ ನಿಜವ ನಾನು ।
ಮರೆಯದಂತೆ ಮಾಡು ನಿನ್ನ ।
ಚರಣ ಯುಗಳದನುಗ್ರಹದಿ ॥ ॥ ೨ ॥

ನನಗಿರಲಿದು ನನಗಿದು ಬೇ । ಕೆನುತವಿವಿಧ ವಿಷಯವ ।
ನೆನೆದು ನೆನೆದು ನಿನ್ನ ಭಕ್ತಿ ।
ಯನುವನರಿಯದಾದೆನಲ್ಲ ।
ನನಗಿದನು ಸಾಕೆನಿಸಿ ।
ಮನದಿ ಸಾಕು ಬೇಕುಗಳ ।
ನೆನಯದಂತೆ ಮಾಡು ನಿನ್ನ ।
ಚಿನುಮಯರೂಪವನು ತೋರಿ ॥ ॥ ೩ ॥

* * *

೧೦೪. ತಿಳಿಯುವದಾಗದೊ

(ಧಾಟಿ: ಪಲುಕುವದೇಮಿನಾ)

ರಾಗ: ಪೂರ್ಣಚಂದ್ರಿಕಾ ತಾಳ: ಆದಿತಾಳ

ತಿಳಿಯುವದಾಗದೊ । ನಿನ್ನ ಲೀಲೆಯ ।
ಕುಲಶೈಲಜಾ । ಧವನೇ ಇದ ॥ ॥ ಪ ॥

ತಿಳಿವ ಸಾಧನ । ವೆನಗೇನಿದೆ ।
ತಿಳಿಯೆ ನಿನ್ನದೊಂ । ದೊಲುಮೆಯಲ್ಲದೆ ॥ ॥ ಅ.ಪ. ॥

ಧನರಾಶಿಗೆಲ್ಲ ಅಧಿರಾಜನಾದ ।
ಧನದನೆ ನಿನ್ನ ಸಖನಾಗಿದ್ದರೂ ॥
ಅನುದಿನವೂ ಪಿತೃಭೂಮಿಯನ್ನೆ ।
ಮನೆಮಾಡಿಕೊಂಡು ತಿರಿದು ತಿನ್ನುತಿರುವೆ ॥ ॥ ೧ ॥

ಮಡದಿ ಮಕ್ಕಳ- ಕೂಡಿಕೊಂಡ ನಿ ।
ನ್ನಡಿಯೊಳಗೆ ಅಷ್ಟ ಸಿದ್ಧಿಯಿರೆ ॥
ಸುಡುಗಾಡ ಸಿ-ದ್ಧವಿರಕ್ತರ ।
ಪಡೆಗೆಲ್ಲ ನೀನೊಡೆಯನಾಗಿಹೆ ॥ ೨ ॥

ರುಂಡಮಾಲೆ ಮೇಣ್ ಕೆಂಡದ ಕಣ್ಣು ।
ಚಂಡವ್ಯಾಘ್ರ ಚರ್ಮದತ್ಯುಗ್ರವೇಷ ॥
ಖಂಡಿತವಾಗಿ ನೋಡಲು ಬ್ರ ।
ಹ್ಮಾಂಡರೂಪಾ-ಖಂಡಚಿದ್ವಿಶೇಷ ॥ ॥ ೩ ॥

* * *

೧೦೫. ಕರುಣದಿಂದೆನ್ನ

(ಧಾಟಿ: ಇಕನ್ನೈನ ನಾಮೊರವಿನರಾದ)

ರಾಗ: ಪುಷ್ಪತಿಲಕ ತಾಳ: ಆದಿತಾಳ

ಕರುಣದಿಂದೆನ್ನ । ಪೊರೆಯದಿದ್ದರೆ ।
ನೆರೆ ಮಹೇಶನೆಂ । ದೆನಿಸಲಾರೆ ನೀಂ ॥ ಪ ॥

ದುರಿತಬಾಧೆಯ । ಭರವ ತಾಳದೆ ।
ಸೆರಗೊಡ್ಡಿ ನಾ । ಬೇಡಿಕೊಳ್ಳುವೆನು ॥ ॥ ಅ.ಪ. ॥

ನೆರೆ ಮೃತ್ಯುವ– ಹಿಂದಟ್ಟಿದ ।
ಧುರಧೀರನೇ– ಆ ಮೃತ್ಯುವೀಗ ॥
ಶರಿರವೆನಾ–ನೆಂಬ ರೂಪದಿ ।
ಸ್ಥಿರಮೃತ್ಯುವಾ–ಗಿರುವದು ನೋಡು ॥ ॥ ೧ ॥

ನಿನ್ನ ಬಿಟ್ಟ– ಆ ದಕ್ಷಯಜ್ಞವ ।
ಮುನ್ನ ಕೆಡಿಸಿದೆ– ನೀನೀಗ ನೋಡು ॥
ನಿನ್ನ ಬಿಟ್ಟತಿ– ಸ್ವಾರ್ಥ ಯಜ್ಞವ ।
ನೆನ್ನಮನವು ತಾ– ಮಾಡುತಿರುವದು ॥ ॥ ೨ ॥

ವಸುಧೆಯೊಳಗೆ– ನೋಡೆ ನಿನಗೆ ।
ಪಶುಪತಿಯೆಂಬ– ಹೆಸರುಸಲ್ಲುವದೇ ॥
ಅಸಮಚಿತ್ಸ್ವರೂ–ಪವನು ಕಾಣದ ।
ಪಶುವಾದೆನ್ನ ನೀಂ– ಮರೆತುಬಿಟ್ಟರೆ ॥ ॥ ೩ ॥

* * *

೧೦೬. ಸೆರಗನೊಡ್ಡಿ ನಾನು ಬೇಡಿಕೊಳ್ಳುವೆನು

(ಧಾಟಿ: ಸರಸಸಾಮದಾನ ಭೇದದಂಡ ಚತುರ)

ರಾಗ: ಕಾಪೀ ನಾರಾಯಣಿ ತಾಳ: ಆದಿತಾಳ

ಸೆರಗನೊಡ್ಡಿ ನಾನು ಬೇಡಿಕೊಳ್ಳುವೆನು ।
ಹರನೆ ನನ್ನ ಸೇವೆ ಕೈಕೊಳ್ಳೊ ನೀಂ ॥ ॥ ಪ ॥

ಶರಣು ಬಂದ ನನ್ನ ಹೃದಯಕಮಲದಿ ।
ಹರುಷದಿಂದ ನೀನು ಕುಳ್ಳಿರೆನ್ನುತಲಿ ॥ ॥ ಅ.ಪ. ॥

ಅತಿ ಸಂಭ್ರಮವಪಡುತಲಿ ನನ್ನ ।
ಮತಿಯೆಂಬುವಾ ಕನ್ಯಕೆಯನ್ನು ॥
ಸತಿಯಾಗಿ ನಿನಗೀಯುವೆನು ।
ಹಿತದಿಂದ ಕೈ ಹಿಡಿಯೊ ದೇವ ಎಂದು ॥ ॥ ೧ ॥

ಆದರದಿಂದ ನಿನ ಸೇವೆಗೆಂದು ।
ಐದು ಪ್ರಾಣಗಳ ನೇಮಿಸುವೆನು ॥
ಮೋಹದಿಂದಲಾ ಸೇವಕರಿಂದ ।
ಆದ ಸೇವೆಯನು ಸ್ವೀಕರಿಸೆಂದು ॥ ॥ ೨ ॥

ನಿನಗೆಂದು ನಾನು ವಿಷಯಂಗಳನು ।
ಅನವರತವು ಭೋಗಿಸುವೆನು ॥
ಚಿನುಮಯನೆ ಅದನೆಲ್ಲವನು ।
ನಿನಗೊಪ್ಪಿಸಿಕೊಳ್ಳೆನ್ನುತ ॥ ॥ ೩ ॥

* * *

೧೦೭. ಬೇಗ ನನ್ನ ಬಳಿಗೆ ಬಾರೊ

(ಧಾಟಿ: ಇತರ ದೈವಮೂಲವಲ್ಲ)

ರಾಗ: ಕೇದಾರಗೌಳ ತಾಳ: ರೂಪಕತಾಳ

ಬೇಗ ನನ್ನ ಬಳಿಗೆ ಬಾರೊ ।
ಭೋಗಿಭೂಷನೆ ಕರುಣದಿ ॥ ॥ ಪ ॥

ಈಗ ಬಾ ನೋಡು ನಿನಗನು ।
ರಾಗದಾಟದ ತೋರಿಕೊಡುವೆ ॥ ॥ ಅ.ಪ. ॥

ನಿನ್ನ ಹಣೆಯ ಕಣ್ಣಿನಿಂದ ।
ಮುನ್ನ ಸುಟ್ಟಕಾಮನೀಗ ॥
ಎನ್ನ ಮನದೊಳಡಗಿಹನವ ।
ನನ್ನು ನೋಡದಿಹರೆ ನೀನು ॥ ॥ ೧ ॥

ಬೇಟೆಗಾಗಿ ಹುಡುಕಿಕೊಂಡು ।
ಕೋಟೆಕಾಡ ಸುತ್ತಲೇಕೆ ॥
ಬೇಟೆಯಾಡು ನನ್ನ ಮನದಿ ।
ಬೇಟೆಗೊಡುವ ಕಲ್ಪನೆಗಳ ॥ ॥ ೨ ॥

ಹಿಡಿಗೆ ಮೃಗವು ಬೇಕೆ ನಿನಗೆ ।
ಹಿಡಿಯೊ ಎನ್ನ ಮನೋಮೃಗವ ॥
ಬಿಡದೆ ಹಿಡಿದು ಚಿದ್ವಿಲಾಸದ ।
ಬೆಡಗತೋರು ಮೃಡನೆ ನೀನು ॥ ॥ ೩ ॥

* * *

೧೦೮. ನಿನ್ನನೇನೂ ಬೇಡುವದಿಲ್ಲ

(ಧಾಟಿ: ವೇಣುಗಾನಲೋಲುನಿಗನ)

ರಾಗ: ಕೇದಾರಗೌಳ   ತಾಳ: ರೂಪಕ ತಾಳ

ನಿನ್ನನೇನೂ ಬೇಡುವುದಿಲ್ಲ ।
ನಾನೇ ನಿನಗೆ ನೀಡುವೆನೋ ॥ ॥ ಪ ॥

ಎನಗೇನು ಬೇಕೊ ಚಂದ್ರಚೂಡನೆ ।
ನಿನ್ನಯ ಕರುಣವೆ ಸಾಕೊ ॥ ॥ ಅ.ಪ. ॥

ಕೊರಳಿಗೊಂದು ಹಾರವಾಗಿ ।
ಉರಗವನ್ನು ಬೇಡುವೆಯೊ ॥
ದುರಿತಕಲ್ಪನೆಯಿಂದಲಿ ಭೋ ।
ರ್ಗರೆವ ಮನವ ನೋಡಿದೆಯೊ ॥
ಉರಗವೆಂದದ ತೆಗೆದುಕೊಂಡು ।
ಮರುಕದಿಂದಲೆನ್ನ ಕಾಯೊ ॥ ॥ ೧ ॥

ಹೊದಿಯುವದಕೆ ಗಜದ ಚರ್ಮ ।
ವಿದೆಯೆ ಎಂದು ಕೇಳುವೆಯೊ ॥
ಮದಿಸಿ ಮೆರೆವ ಎನ್ನ ಮನದ ।
ಹದನ ನೀನು ನೋಡಿದೆಯೊ ॥
ಅದನು ಕೊಂದು ಸುಲಿದು ಧರಿಸಿ ।
ಮುದವತಾಳುತೆನ್ನ ಕಾಯೊ ॥ ॥ ೨ ॥

ಬಳಿದುಕೊಳ್ಳುವದಕೆನುತ್ತ ।
ಬಿಳಿಯ ಬೂದಿಯ ಬಯಸುವೆಯೊ ॥
ಕಳವಳದಿಂದ ಸುಕ್ಕಿ ಮನವು ।
ತಳಮಳಿಪುದ ನೋಡಿದೆಯೊ ॥
ಘಳಿಲನೆ **ಚಿಜ್ಜ್ಯೋತಿ**ದೋರಿ ।
ಬಳಿದುಕೋ ಅದ ಬೂದಿಮಾಡಿ ॥ ॥ ೩ ॥

* * *

೧೦೯. ಶಂಕರಚಂದ್ರಚೂಡ

(ಧಾಟಿ: ನಾರದ ಗುರುಸಾಮಿ)

ರಾಗ: ದರ್ಬಾರು ತಾಳ: ಆದಿತಾಳ

ಶಂಕರಚಂದ್ರಚೂಡ । ತಡಮಾಡದೆನ್ನ ।
ಕಾಪಾಡುವದಕೆ ಈಗಲೆ ಸಮಯ ॥ ॥ ಪ ॥

ಕಿಂಕರಭಾವದಿ ಬೇಡುವೆ ಭವದಾ ।
ತಂಕವ ಕಳೆದುದ್ಧರಿಸು ಕೃಪಾಮಯ ॥ ॥ ಅ.ಪ. ॥

ಭವಕೂಪದಿ ದುಃ । ಖೋರಗಬಾಧೆಯ । ಬವಣೆಗೆ ಸಿಕ್ಕಿಹೆನೊ ।
ಭವಜಲಧಿಯೊಳಿರ್ಪಾಶಾನಕ್ರನ । ಹಿಡಿತಕೆ ದಕ್ಕಿತೆನೊ ।
ಭವತರುವೆಂಬಾ । ಬೆಂಡಿನ ಮರದಿಂ ನರಕಕೆ ಬೀಳುವೆನೊ ।
ಭವದಾವನಿಗಾಹುತಿಯಾಗಿಹ । ಸಂಕಟದಿಂ ।
ನರಳುತ್ತಿರುವೆನೊ ನಾನು ॥ ॥ ೧ ॥

ಬಲಶಾಲಿಗಳಾದೈದಿಂದ್ರಿಯಗಳು । ಮೋಸವ ಮಾಡುವವು ।
ಬಲದಿಂದೆನ್ನ ವಿವೇಕದ್ರವ್ಯದ ಸುಲಿಗೆಯ ಮಾಡುವವು ।
ಹಲವು ಕಡೆಗೆ ಸೆಳೆದೊಯ್ಯುತ್ತೆನ್ನನು ಕುರುಡನ ಮಾಡುವವು ।
ತಳಮಳಗುಟ್ಟಿಸಿ ಮೋಹವೆಂಬ ಕೊರಕಲಿ ।
ಗೆಳೆಯುತ್ತಿರ್ಪವು ಭರದಿಂದಲಿ ॥ ॥ ೨ ॥

ಬಹುಜನ್ಮಗಳೊಳು ಬಂದೂಬಂದೂ ಬೇಸತ್ತಿರುತಿಹೆನೊ ।
ಬಹುಪಾಪವ ಮಾಡುತ್ತಿನ್ನೆಂಥ ನರಕಕೆ ಬೀಳುವೆನೊ ।
ಬಹುಜನ್ಮದ ಪುಣ್ಯದಿ ಈ ದಿನ ನಾ ಶಿವಶಿವ ಎನ್ನುವೆನೊ ।
ಬಹುಕಷ್ಟವೊ ಮುಂದೆನ್ನುದ್ಧಾರವು ।
ಈಗಲೆ ಚಿದ್ರೂಪವ ತೋರದಿರಲು ॥ ॥ ೩ ॥

* * *

೧೧೦. ಕ್ಷಮಿಸೆನ್ನಯ ಅಪರಾಧವನೀಗ

(ಧಾಟಿ: ಕನುಗೊಂಟಿನಿ ಶ್ರೀರಾಮುಲನೇನು)

ರಾಗ: ಕಾನಡಾ ತಾಳ: ಏಕತಾಳ

ಕ್ಷಮಿಸೆನ್ನಯ ಅಪರಾಧವನೀಗ ॥ ॥ ಪ ॥

ಬಹುಗರ್ಭ ವಾ–ಸವಮಾಡುತ ।
ಬಹುದುಃಖದಿ ಮರೆತೆನೊ ಶಿವ ॥ ॥ ಅ.ಪ. ॥

ಬೆಳಗಾಗುತಲೆ ಎದ್ದು ಬಂದು ಗಂಗಾ ।
ಜಲದಲ್ಲಿ ಸ್ನಾನವನ್ನು ಮಾಡಿಕೊಂಡು ॥
ಬಲು ಶುದ್ಧವಾ–ದಾ ನೀರ ತಂದು ।
ನಲವಿಂದ ನಿನ್ನ ತೊಳೆಯಲಿಲ್ಲ ನಾನು ॥ ॥ ೧ ॥

ಮುದದಿಂದ ಪಂಚಾ–ಮೃತವನ್ನು ತಂದು ।
ಸದಯನಿಗಭಿ–ಷೇಕ ಮಾಡಲಿಲ್ಲ ॥
ಒದಗಿಸುತ ಶ್ರೀಗಂಧವ ।
ಪದಗಳಿಗೆ । ತೊಡೆಯಲಿಲ್ಲ ನಾನು ॥ ॥ ೨ ॥

ಬಿಲ್ವ ಮೊದಲಾದ ಪತ್ರೆಗಳಿಗಾಗಿ ।
ಮೊಲ್ಲೆ ಮೊದಲಾದ ಹೂಗಳಿಗಾಗಿ ॥
ಎಲ್ಲೆಲ್ಲಿಯೂ ತಿರುಗಲಿಲ್ಲ ಮೇಣ್ ।
ಸೊಲ್ಲಿನಲ್ಲಿಯೂ ಪೂಜಿಸಲಿಲ್ಲ ॥ ॥ ೩ ॥

ಜಪತಪನೇಮನಿಷ್ಠೆಯಿಂದ ನಿನ್ನ ।
ಕೃಪೆಯನ್ನು ಸಂ–ಪಾದಿಸಲಿಲ್ಲ ॥ ॥
ಅಪರೋಕ್ಷನೆಂ–ದಾದೀಯೆಂಬ ।
ಚಪಲವನ್ನೇ ತಂದುಕೊಳ್ಳಲಿಲ್ಲ ॥ ॥ ೪ ॥

ಧೂಪದೀಪ ನೈವೇದ್ಯವನ್ನು ಮಾಡಿ ।
ಪಾಪವನ್ನು ನಾ ಕಳೆದುಕೊಳ್ಳಲಿಲ್ಲ ॥
ತಾಪತ್ರಯಾ–ಪಹವಾದ ಚಿ ।
ದ್ರೂಪವನ್ನು ನಾ ಸ್ಮರಣೆ ಮಾಡಲಿಲ್ಲ ॥ ॥ ೫ ॥

* * *

೧೧೧. ಗಂಗಾಧರ ಶಂಕರ ಹರ

(ಧಾಟಿ: ಶ್ರೀ ನಾರದ ನಾಥರಾ)

ರಾಗ: ಕಾನಡಾ ತಾಳ: ರೂಪಕತಾಳ

ಗಂಗಾಧರ ಶಂಕರ । ಹರ ।
ಗೌರೀವರ ಪ್ರಮಥೇಶ್ವರ ॥ ॥ ಪ ॥

ಅಂಗಜಹರ ನಿನ್ನನೆಂತು ।
ಕಂಗಳಿಂದ ಕಾಣುವೆನೊ ॥ ॥ ಅ.ಪ. ॥

ತರಣೀಚಂದ್ರ ಹುತಾಶರು– ನಿನ್ನ ಕಣ್ಗಳೆಂಬರು ।
ಇರುವ ಗ್ರಹಗಳೆಲ್ಲ ನಿನ್ನ–ಕೊರಳ ಮಾಲೆಯಂಬರು ॥
ಧರೆ ಜಲ ಮೊದಲಾದ ಪಂಚಭೂತಗಳೂ ನಿನ್ನಯ ।
ಶರಿರದೊಂದು ಮೂಲೆಯಲ್ಲಿ ಅಡಗಿರ್ತೋರ್ಪವೆಂಬರು ॥ ॥ ೧ ॥

ಬೆಳ್ಳಿಯಪರ್ವತದ ನಡುವೆ–ನಿನ್ನವಾಸವೆಂಬರು ।
ಒಳ್ಳೆಯ ಕನಕಾದ್ರಿ ನಿನ್ನ ಬಿಲ್ಲೆನುತ್ತ ಪೇಳ್ವರು ॥
ಮೆಲ್ಲನೆ ನೀ ಒಲಿಯನ್ನುತೆ ನಿಲ್ಲಲು ನಾನೆಂಬುದನೇ ।
ಇಲ್ಲದಂತೆ ಮಾಳ್ಪನೆಂದು । ಬಲ್ಲವರಾಡುತ್ತಿರ್ಪರು ॥ ॥ ೨ ॥

ನಿನ್ನ ಚರಣವರಿತವನು ಹರಿಯೆ ಒಬ್ಬನೆಂಬರು ।
ನಿನ್ನ ತಲೆಯ ಕಂಡವನು ಬ್ರಹ್ಮನೊಬ್ಬನೆಂಬರು ॥
ಇನ್ನುಳಿದವರಲ್ಲೊಬ್ಬರೂ । ನಿನ್ನ ಸೆಲೆಯನರಿಯದಿರಲು ।
ಇನ್ನು ನನ್ನ ಪಾಡೇನು ಚಿನ್ಮಯ ಸ್ವರೂಪದೇವ ॥ ॥ ೩ ॥

* * *

೧೧೨. ಶಿವ ಶಿವ ಗಿರಿಜಾಸಹಾಯ

(ಧಾಟಿ: ಶರಶರ ಸುಮರೈಕಶೂರ)

ರಾಗ: ಕುಂತಲವರಾಳಿ ತಾಳ: ಆದಿತಾಳ

ಶಿವ ಶಿವ ಗಿರಿಜಾಸಹಾಯ ।
ಭವಭಯಹರ ಜೀಯ ॥ ॥ ಪ ॥

ಅವಿನಯಹರಣ–ಕರುಣಾಪೂರ್ಣ ।
ಸುವಿಮಲತೇಜ ಕಾಪಾಡೆನ್ನ ॥ ॥ ಅ.ಪ. ॥

ಬಹು ವಿಷಯಗಳನು ಬಯಸುವ ಜನಕೆ ।
ಬಹುದೂರದೊಳಿಹನೆಂದೆನಿಸಿರುವಾ ।
ಮಹಿಯಲಿ ನಿನ್ನನೆ ಬಯಸುವ ಜನಕೆ ॥
ಬಹು ಸಾಮೀಪ್ಯದೊಳಿಹನೆನಿಸಿರುವಾ ॥ ॥ ೧ ॥

ಪಾವನ ಕಾಶೀಕ್ಷೇತ್ರದಿ ಸಾಯ್ವ ।
ಜೀವರಿಗೆಲ್ಲ ಪರಮಾದರದಿ ॥
ಪಾವನತಾರಕಮಂತ್ರವನೀವ ।
ದೇವಾವಳಿಸನ್ನುತ ಭವದಾವ ॥ ॥ ೨ ॥

ಶರಣರಪಾಪವ ಕಳೆಯುವನೆಂಬಾ ।
ಬಿರುದನು ಧರಿಸಿ ಕಾಶಿಯಲ್ಲಿ ॥
ಪರಮಾದರದಿ ಗಂಗಾತಟದಿ ।
ವರಚಿನ್ಮಯನಾಗಿಹ ವಿಶ್ವೇಶಾ ॥ ॥ ೩ ॥

* * *

೧೧೩. ಈಶಾ ವಿಶ್ವೇಶಾ ಪೊರೆ

(ಧಾಟಿ: ದೇವೀ ಮೀನಾಕ್ಷೀ ಮುದಂ)

ರಾಗ: ಕಲ್ಯಾಣಿ ತಾಳ: ರೂಪಕತಾಳ

ಈಶಾ ವಿಶ್ವೇಶಾ ಪೊರೆ । ಘಾಸಿಯಾಗಿರುವೆ ॥ ॥ ಪ ॥

ಬರಿಯ ದುಃಖವೆಂಬ ಜಲದ ।
ಶರಧಿಯೊಳಗೆ ಮುಳುಗಿ ॥
ಜರೆಯು ಮರಣವಾದಿಯಾದ ।
ಹಿರಿಯ ಮೊಸಳೆಗಳಿಗೆ ಸಿಕ್ಕಿ ॥
ಅರಿಯದೆ ಅದರಾದಿಯನ್ನು ।
ಅರಿಯದೆ ಅದರಂತವನ್ನು ॥
ಅರಿಯದೆ ಅವಲಂಬನವನು ।
ಸೊರಗಿ ಕೊರಗುತಿಹೆನು ನಾನು ॥ ॥ ೧ ॥

ವಿಷಯೇಂದ್ರಿಯಜನಿತವಾದ ।
ವಿಷವನಮೃತವೆನುತ ।
ಬಿಸಿಯುಸಿರನು ಬಿಡುತಿರುತ ।
ಅಶನವಾಗಿ ಮಾಡಿಕೊಂಡು ।
ದೆಸೆದೆಸೆಗಳ ನೋಡುತಲಿ ।
ಮಸಗುವ ಬಯಕೆಯ ಗಾಳಿಯ ।
ದೆಸೆಯಿಂಕಲ್ಲೋಲವಾಗಿ ।
ಬುಸುಗುಟ್ಟುವನರ್ಥದಬಹು ।
ವಿಷಯದಲೆಯಂ ತಾಳಲಾರೆ ॥ ॥ ೨ ॥

ಪರಿಪರಿಗೋಳುಗಳು ಭೋ ।
ರ್ಗರೆಯೆ ಶರಣು ಬಂದೆ ।
ವರಗುಣಪಾಥೇಯವಿಟ್ಟು ।
ನೆರೆ ಸುಜನರ ಜೊತೆಯ ಕೊಟ್ಟು ।
ಕರುಣದಿ ಚಿನ್ಮಯ ನಾವೆಯೊ ।
ಳಿರಿಸಿ ಮೋಕ್ಷ ತೀರವನ್ನ ।
ತರುತಲಿ ಸಂಸಾರದ ಸಾ
ಗರದಿಂದಲಿ ಪಾರುಮಾಡು ॥ ॥ ೩ ॥

* * *

೧೧೪. ಶ್ರೀ ಗೌರೀ ಪ್ರಾಣನಾಥ

(ಧಾಟಿ: ನೀನಾಮ ರೂಪಮುಲಕು)

ರಾಗ: ಸೌರಾಷ್ಟ್ರ ತಾಳ: ಏಕತಾಳ

ಶ್ರೀ ಗೌರೀ– ಪ್ರಾಣನಾಥ । ಚಂದ್ರಚೂಡ– ಮಂಗಳಂ ॥ ॥ ಪ ॥

ಇಷ್ಟಾರ್ಥ–ವೀಯುವಂಥ ।
ಶ್ರೇಷ್ಠನಾ–ದಷ್ಟಮೂರ್ತಿ ॥ ॥ ೧ ॥

ವಿಷಯಕಂಠ ಭೂತನಾಥ ।
ವಿಷಮನಯನ–ಭವ್ಯಮೂರ್ತಿ ॥ ॥ ೨ ॥

ಮೃತ್ಯು ಸಂ–ಹರಣಶೀಲ ।
ಭೃತ್ಯದ–ಯಾಲವಾಲ ॥ ॥ ೩ ॥

ದುರುಳರ–ದಮನಮಾಡಿ ।
ಶರಣರ–ನೊಲಿದುಕಾಯ್ವ ॥ ॥ ೪ ॥

ಶಂಭು ಶರ್ವ ಶಂಕರಾ ಚಿ ।
ದಂಬರ ಕ್ಷೇ–ತ್ರಾಧಿನಾಥ ॥ ॥ ೫ ॥

* * *

೧೧೫. ಶಂಭೋ ಗಿರಿಜಾರಮಣ

(ಧಾಟಿ: ರಾಮಾರಮಣೀಕಾಂತ ಸುಮನೋನುತ ಮಂಗಳಂ)

ರಾಗ: ಸೌರಾಷ್ಟ್ರ ತಾಳ: ಏಕತಾಳ

ಶಂಭೋ । ಗಿರಿಜಾರಮಣ । ಪ್ರಮಥಾಧಿಪ ಮಂಗಳಂ ॥ ॥ ಪ ॥

ಸುರನರವಂದಿತ । ಮುರವೈರಿ ಸೇವಿತ ।
ಪರಿಹೃತ ದುಷ್ಕೃತ । ಹರ ಶಂಕರ ।
ಕರುಣಾಂತರಂಗ । ಸರಸಾಪಾಂಗ ॥ ॥ ೧ ॥

ಸೋಮಶೇಖರನೆ । ಸೋಮಾರ್ಧಾಲಿಂಗನೆ ।
ಸ್ವಾಮಿಯೆನ್ನನು ಕಾಯೋ । ಪ್ರೇಮಾತಿಶಯದಿ ।
ಕಾಮಿತದಾತ । ಕರಿಮುಖತಾತ ॥ ॥ ೨ ॥

ಪರಮೇಶ್ವರನ । ಪರಮಾದರದಿಂ ।
ಶರಣ **ಚಿದಂಬರ** । ವರದಾನನಿರತನೆ ।
ಗಿರಿರಾಜನಿಲಯ । ಕರುಣದಿ ಸಲಹೈ ॥ ॥ ೩ ॥

* * *

ಭಾಗ ೯:
ಶ್ರೀ ಗೌರೀ ಸಂಬಂಧವಾದ ಕೀರ್ತನೆಗಳು (೧೧೬-೧೨೬)

೧೧೬. ಪಾಲಿಸೆನ್ನನೀಗ ಪಾರ್ವತಿ

(ಧಾಟಿ: ಪೊರೆ ಶೈಲಾಧಿಪಸಂಭವೆ)

ರಾಗ: ಹಮೀರ ಕಲ್ಯಾಣಿ ತಾಳ: ಏಕತಾಳ

ಪಾಲಿಸೆನ್ನನೀಗ ಪಾರ್ವತಿ ।
ಕುಲಗಿರೀಂದ್ರಸುತೆ । ಮುನಿಸನ್ನುತೆ ॥ ॥ ಪ ॥

ದಿವಾಕರ ಕೋಟಿ । ಪ್ರಭಾಮಯಳಾದ ।
ದಿವೌಕಸ ಸಂಘ । ಪರಿಸ್ತುತೆಯೆ ॥ ॥ ೧ ॥

ಮಹೇಶ್ವರಪೂರ್ಣ । ಮನೋರಥಾಂಗಿಯೆ ।
ಮಹೇಶ್ವರಿ ಭಕ್ತ । ರಭೀಷ್ಟಕರಿ ॥ ॥ ೨ ॥

ಶರಣ್ಯೆವರಣ್ಯೆ । ಸುಕಾರುಣ್ಯಮೂರ್ತೆ ।
ಸುರೇಂದ್ರನುತೆ ಚಿ । ಚ್ಛರೀರಯುತೆ ॥ ॥ ೩ ॥

* * *

೧೧೭. ಚರಣಯುಗವ ತೋರುತೆನ್ನ

(ಧಾಟಿ: ನಗುವರಲ್ಲೋ ರಂಗಯ್ಯ ನಿನ್ನಾಟವ ಕಂಡು)

ರಾಗ: ಮುಖಾರಿ ತಾಳ: ಝಂಪೆತಾಳ

ಚರಣಯುಗವ ತೋರುತೆನ್ನ ಪೊರೆ ಶೈಲಾತ್ಮಜೆ ॥ ॥ ಪ ॥

ಕರುಣಾದೃಷ್ಟಿಯ ಬೀರು ಈಗ ಶರಣಸುರಭೂಜೆ ॥ ॥ ಅ.ಪ. ॥

ಗಿರಿಶನಂಕವನ್ನು ಬಿಟ್ಟು- ಇಳಿದುಬಾರೆಂದು ।
ಕರೆಕರೆ ಮಾಡುವದಿಲ್ಲ- ಸರಸಿಜಾನನೆ ॥
ಧರೆಯನಾರಿಯರೊಳಗೆಲ್ಲಾ ನೀ- ಮಾತೃರೂಪದಿ ।
ಸ್ಫುರಿಸೆನಗೆಂದು ಬೇಡುವೆನು- ಪರಮಪಾವನೆ ॥ ॥ ೧ ॥

ಸರ್ವಮಂಗಳಗಳ ರೂಪ-ದಿಂದ ತೋರೆಂದು ।
ಸರ್ವಮಂಗಳೆಯೆ ನಿನ್ನ ಬೇಡಿಕೊಳ್ಳೆನು ॥
ಸರ್ವಸ್ತ್ರೀಯರೂ ಎನಗೆ-ಮಾತೃರೂಪದ ।
ಪಾರ್ವತಿಯರೆಂಬಂತೆ ತೋರು-ಶರ್ವನರಾಣಿ ॥ ॥ ೨ ॥

ರೂಪರಹಿತಳಾದರೂ ನೀ- ನೀಗಲೆನಗೊಂದು ।
ರೂಪನ್ನೇ ತೋರೆಂಬುವದಿಲ್ಲ ಸರ್ವಸ್ತ್ರೀಯರ ॥
ರೂಪದಲ್ಲಿ ನೀನೇ ತುಂಬಿತೋರಿ ನಿನ್ನ ಚಿ ।
ದ್ರೂಪ ಸ್ಫೂರ್ತಿಯಾಗಿಸೆಂಬು-ದೊಂದೇ ನನ್ನಾಶೆ ॥ ॥ ೩ ॥

* * *

೧೧೮. ಪೊರೆ ಕೃಪಾಕರೆ ಪಾರ್ವತಿ

(ಧಾಟಿ: ಇಕನೇಮಂದುನೇ ಚೆಲಿಯ)

ರಾಗ: ಯದುಕುಲ ಕಾಂಬೋಜಿ ತಾಳ: ಆದಿತಾಳ

ಪೊರೆ ಕೃಪಾಕರೆ ಪಾರ್ವತಿ ।
ಬಹುದೈನ್ಯದಿ ನಿನ್ನನು ವಂದಿಸುವೆನು ॥ ॥ ಪ ॥

ಗೌರೀ ಕಾತ್ಯಾಯಿನಿ । ಶೈಲೇಂದ್ರನಂದಿನಿ ॥ ॥ ಅ.ಪ. ॥

ವಿಷವನು ಹೀರಿ ಶಿವ । ಬಸವಳಿದಿರಲಾಗ ।
ವಿಷವನು ತಡೆದೆ ನೀ । ವಸುಧೆಯರಿಯೆ ॥ ॥ ೧ ॥

ಆರು ಚಕ್ರವನು । ತೂರಿ ಕುಂಡಲಿಯೊ ।
ಳೇರಿ ಸಾಧಕರಿಗೆ । ತೋರುವ ಮಾತೆ ॥ ॥ ೨ ॥

ಶರಣರನೆಲ್ಲರ । ಪರಿಪೂರ್ಣ ಪ್ರೇಮದಿ ।
ಪೊರೆಯುತಲಿರುವಂಥ । ವರದೆ ಚಿನ್ಮಯೆ ॥ ॥ ೩ ॥

* * *

೧೧೯. ನೀನೆನ್ನ ಕಣ್ಮುಂದಿರುತ

(ಧಾಟಿ: ನೀ ಮಾಟಲೇಮಾಯನುರಾ)

ರಾಗ: ಪೂರ್ವಿ ಕಲ್ಯಾಣಿ ತಾಳ: ಮಿಶ್ರಛಾಪುತಾಳ

ನೀನೆನ್ನ ಕಣ್ಮುಂದಿರುತ । ಕಾಯೆ ಪಾರ್ವತಿ ॥ ॥ ಪ ॥

ನಾನೆಷ್ಟು ಪಾಪಿಯಾಗಿ ದೀನತೆಯಿಂದಿದ್ದರೂ ॥ ॥ ಅ.ಪ. ॥

ಗಣಪತಿಮುಖ್ಯರಾದ । ಗಣಗಳಿಂದೊಡಗೂಡಿ ।
ತ್ರಿಣಯನನಂಕದೊಳು । ಬಿನದದಿ ಕುಳ್ಳಿರುತ ॥ ॥ ೧ ॥

ನೀನು ಮಾತೆ ನೀನು । ಹಿತವಾದ ಬಂಧು ನೀನು ।
ಕ್ಷಿತಿಯೊಳೆಲ್ಲವು ನೀನು । ಗತಿ ನೀನು ನಿಜವಾಗಿ ॥ ॥ ೨ ॥

ಕನಕಸದೃಶವಾದ । ತನುವಧರಿಸಿ ಭಕ್ತ ।
ಜನರಿಗೆ ತೋರುವ । ಚಿನುಮಯಾಂಗಿಯೆ ದೇವಿ ॥ ॥ ೩ ॥

* * *

೧೨೦. ಸೆರಗೊಡ್ಡಿ ಬೇಡುವೆ

(ಧಾಟಿ: ಬಲು ಮೋಸಜೇಸೆನೆ)

ರಾಗ: ದೇಶಿ ತೋಡಿ ತಾಳ: ರೂಪಕತಾಳ

ಸೆರಗೊಡ್ಡಿ ಬೇಡುವೆ । ನಾನು ॥ ॥ ಪ ॥

ಪೊರೆಯೆನ್ನನೀ । ಗಿರಿರಾಜ ಕನ್ಯೆ ॥ ॥ ಅ.ಪ. ॥

ತರುಣೇಂದುವ ನೆರೆ ಹೋಲುವ ।
ವರವಕ್ತ್ರಕಾಂತಿಯನ್ನು ಈ ।
ಶರಣೆಂಬ ನನಗೆ ತೋರೆನ್ನುತ್ತಲೀ ॥ ॥ ೧ ॥

ಸರಸಿಜನ ನೆರೆ ಹೋಲುವ ।
ವರಹಸ್ತವನ್ನು ನನ್ನಯ ।
ಶಿರದಲ್ಲಿಡುತ್ತ ಪಾಲಿಸೆಂದು ನಾ ॥ ॥ ೨ ॥

ಸುರಪೂಜಿತ ಚರಣಂಗಳ ।
ಪರಿಪೂರ್ಣಚಿತ್ರಭಾವದ ।
ಅರಿವಿತ್ತು ಸೌಖ್ಯದೋರೆನುತ್ತಲೀ ॥ ॥ ೩ ॥

* * *

೧೨೧. ಎಂಥಾ ಮಹಿಮೆಯೇ

(ಧಾಟಿ: ಚಾಲಾಯನ ಮುದ್ದು ಗೋಪಾಲಬಾಲಾ)

ರಾಗ: ಭೈರವಿ ತಾಳ: ತ್ರಿಪುಟತಾಳ

ಎಂಥಾ ಮಹಿಮೆಯೇ । ಕಾತ್ಯಾಯನೀ ॥ ॥ ಪ ॥

ಇಂಥಾ ದುರಂತವಾದಂಥಾ (ದ್ದಿನ್ನೆಂ) ॥ ॥ ಅ.ಪ. ॥

ನಿನ್ನಯ ರೂಪಗುಣ । ವನ್ನು ಚಿಂತಿಸಿದವ ।
ರಿನ್ನು ಸಾಯುಜ್ಯಮುಕ್ತಿ । ಯನ್ನೆ ಪಡೆಯುವರು ॥ ॥ ೧ ॥

ನಿನ್ನಯ ನಾಮಾವಳಿ । ಯನ್ನು ಜಪಿಸಿದವ ।
ರನ್ನು ಪಾಪವು ಮುಟ್ಟ । ಲಿನ್ನು ಸಾಧ್ಯವೇ ಅಲ್ಲ ॥ ॥ ೨ ॥

ಅರಿಯನು ಚತುರಾನನ । ಅರಿಯನು ಪಂಚಾನನ ।
ಅರಿಯನು ಷಡಾನನ । ಗಿರಿಜೆ ನಿನ್ನಿರವನು ॥ ॥ ೩ ॥

ಧರೆಯ ಹೊತ್ತಿಹ ಫಣಾ । ಧರನು ಹೇಳುವದಕ್ಕೆ ।
ಇರುವ ಸಾವಿರಮುಖ । ನೆರೆ ಸಾಲದಾಗಿರುವ ॥ ॥ ೪ ॥

ವೇದಗಳೆಲ್ಲಾ ಮೂಕ । ವಾದವೆಂದೆನುವಾಗ ।
ಸಾಧಿಪೆನೆಂತಾ ಮಹ । ತ್ತಾದ ಚಿದ್ರೂಪವ ॥ ॥ ೫ ॥

* * *

೧೨೨. ನಿನಗೆ ಸಮಾನರುಂಟೆ

(ಧಾಟಿ: ದಾರಿಚೂಚುಚುನ್ನದಿ)

ರಾಗ: ಶಂಕರಾಭರಣ ತಾಳ: ತ್ರಿಪುಟ ತಾಳ

ನಿನಗೆ ಸಮಾನರುಂಟೆ । ಗಿರಿರಾಜಕನ್ಯೇ ॥ ಪ ॥

ಇರುವದು ಕೈಲಾಸ ಸುರಪತಿ ಸೇವಕ ।
ಪರಿಕಿಸೆ ಬ್ರಹ್ಮಾಂಡ । ವೆಲ್ಲ ನಿನ್ನ ಕುಟುಂಬ ॥ ॥ ೧ ॥

ಕರದೊಳಗಿರುವವು । ವರಸಿದ್ಧಿಗಳೆಲ್ಲಾ ।
ಗಿರಿಶನೆ ನಿನ್ನ ಪ್ರಾಣ । ದರಸನಾಗಿರುವನು ॥ ॥ ೨ ॥

ಬಿಸಜಾಕ್ಷಿ ನಿನ್ನಯ । ಅಸಮಮಹಿಮೆಯಿಂದ ।
ವಿಷಮನೇತ್ರನು ತಾನು । ವಿಷವದಕ್ಕಿಸಿಕೊಂಡ ॥ ॥ ೩ ॥

ವಾರಿಜಮುಖಿ ನಿನ್ನ ಚಾರುರೂಪವ ಕಂಡು ।
ಧೀರೆ ಗಂಗಾದೇವಿ । ನೀರಾಗಿ ಹರಿದಳು ॥ ॥ ೪ ॥

ಮುನಿಜನರೆಲ್ಲರು । ಅನುದಿನ ಹುಡುಕುತ ।
ನೆನೆಯುತಿರ್ಪರು ನಿನ್ನ । **ಚಿನುಮಯ** ರೂಪವ ॥ ॥ ೫ ॥

* * *

೧೨೩. ಪಾಲಿಸೆನ್ನ ಹಿಮಗಿರೀಂದ್ರ

(ಧಾಟಿ: ಇಂದುವದನೆ ಕುಂದರದನೆ)

ರಾಗ: ಜುಂಜೋಟಿ ತಾಳ: ಅಟತಾಳ

ಪಾಲಿಸೆನ್ನ ಹಿಮಗಿರೀಂದ್ರ । ಬಾಲೆ ಕರುಣದಿ ।
ನೀಲಕಂಠನರಸಿ ನಿನ್ನ । ಕೇಳಿಕೊಂಬೆನಾ ॥ ಪ ॥

ದಕ್ಷನುದರದಲ್ಲಿ ಹುಟ್ಟಿ- ಭಕ್ತ ಜನರಿಗೆ ।
ಅಕ್ಷಯವರವಿತ್ತು ಮುದದಿ- ರಕ್ಷಿಸುವಳೆ ॥ ೧ ॥

ಸರ್ವಮಂಗಳೆಯೆನಿಸಿಕೊಂಡು- ಸರ್ವಜನರಿಗೆ ।
ಸರ್ವಮಂಗಳಗಳನೀವ-ಶರ್ವನರಸಿಯೆ ॥ ॥ ೨ ॥

ಕನಕರುಚಿರ ದೇಹಿಯಾಗಿ-ಗಿರಿಶನಂಕದೊಳ್ ।
ಗಣಪತಿಯೊಡನಿರುತದೇವ- ಗಣವ ಪೊರೆವಳೆ ॥ ॥ ೩ ॥

ಸುರಮುನಿಜನ ಸೇವೆ ಮಾಡು-ತಿರಲು ಸಂತತ ।
ಗಿರಿಶನಿಷ್ಟವ ಪೂರ್ಣಮಾಡು- ತಿರುವಪಾರ್ವತಿ ॥ ॥ ೪ ॥

ಶರಣು ಬಂದ ಭಕ್ತಜನರ-ದುರಿತರಾಶಿಯ ।
ಪರಿಹರಿಸಿಷ್ಟಾರ್ಥವಿತ್ತು-ಪೊರೆವ ಚಿನ್ಮಯೆ ॥ ॥ ೫ ॥

* * *

೧೨೪. ಇದುಯೇನು ಮಹಿಮೆ ಮಾತೆ

(ಧಾಟಿ: ಸರಿಯೇನೊ ಸಾರಸಾಕ್ಷ)

ರಾಗ: ಕಾಂಭೋಜಿ **ತಾಳ: ರೂಪಕತಾಳ**

ಇದುಯೇನು ಮಹಿಮೆ ಮಾತೆ । ಗಿರಿಸುತೆ ॥ ಪ ॥

ಮುದದಿಂದ ತಿಳುಹಿಸೆನಗೆ ।
ಇದನೀಗ ನಮಿಪೆ ನಿನಗೆ ॥ ॥ ಅ.ಪ. ॥

ವರವನ್ನು ಬೇಡಲೊಡನೆ । ನೆರೆ ಈವೆ ಕ್ಷುದ್ರಸುಖವ
ವರವನ್ನು ಬೇಡದಿರಲು । ಕರೆದೀವೆ ನಿತ್ಯಸುಖವ ॥ ॥ ೧ ॥

ನೀನೀಗ ಕಣ್ಣಬಿಡಲು । ಕಾಣುತ್ತಲಿಹುದು ಸೃಷ್ಟಿ ॥
ನೀನೀಗ ಕಣ್ಣಮುಚ್ಚೆ । ತಾನಾಗಿ ಲಯಿಪುದೆಲ್ಲಾ ॥ ॥ ೨ ॥

ಶಿಲೆಯಲ್ಲಿ ಮಲಗಿ ಸಸ್ಯಾವಳಿಯಲ್ಲಿ ಉಸಿರಬಿಡುತ ।
ಚಲಿಸುತ್ತ ಮೃಗದಿ ನರರೊಳ್ । ನೆಲಸಿರ್ಪ **ಚಿತ್ಸ್ವರೂಪೆ** ॥ ॥ ೩ ॥

* * *

೧೨೫. ಗಿರಿರಾಜ ಪ್ರೇಮಪುತ್ರೀ

(ಧಾಟಿ: ನೀನಾಮ ರೂಪಮುಲಕು)

ರಾಗ: ಸೌರಾಷ್ಟ್ರ **ತಾಳ: ಏಕತಾಳ**

ಗಿರಿರಾಜ ಪ್ರೇಮಪುತ್ರೀ । ಗಿರಿಶನರಸಿ ಮಂಗಳಂ ॥ ಪ ॥

ದೇವಗಣಂಗಳಿಂದ । ಸೇವೆಯ–ತೆಗೆದುಕೊಂಬ ॥ ೧ ॥

ಭೃಂಗಕುಂತಳೆ ಸರ್ವ । ಮಂಗಳೆಯೆನಿಸಿಕೊಂಬ ॥ ॥ ೨ ॥

ಸತ್ಸುಖ–ರೂಪಳಾಗಿ । ಚಿತ್ಸ್ವರೂಪಿ ಎನಿಸಿಕೊಂಬ ॥ ॥ ೩ ॥

* * *

೧೨೬. ಶ್ರೀಶೈಲ ಸಂಭವೆ ಸುವೈಭವೆ

ರಾಗ: ತೋಡಿ ತಾಳ: ಆದಿತಾಳ

ಶ್ರೀಶೈಲ ಸಂಭವೆ । ಸುವೈಭವೆ
ನಮಿಸುವೆ ನಿತ್ಯೋತ್ಸವೆ, ಭವೆ ॥ ॥ ಪ ॥

ಧೀರೆ । ಧೀರಾಶ್ರಿತೆ, ಗಹನವಿಚಾರೆ ।
ಚಾರಾಳಿ ವಿನುತ ಗುಣಹಾರೆ ।
ಹಾರಾಳಿ ಸಹಿತೆ, ಭವದೂರೆ ।
ದೂರಮಾಡುತೆನ್ನಯ ದುಷ್ಕೃತಿಗಳ ।
ಪಾರುಮಾಡು ಶರಣಾಗತರನು ನೀಂ ॥ ॥ ೧ ॥

ಕಾಲೀ । ಕಾಲಾಬ್ದರುಚಿರಕೇಶಾಳೀ ।
ಆಳೀಕೃತ ಶುಭಗುಣಶಾಲೀ ।
ಸಾಲಾಯಿತ ಭುಜಶಿವಕೇಳೀ ।
ಕೇಳೀ ಶರಣಜನಜಾಲದ ಬಯಕೆಯ ।
ಪಾಲಿಸು ಕರುಣದಿ ಶ್ರೀ ಲಲಿತಾಂಬಿಕೆ ॥ ॥ ೨ ॥

ದುರ್ಗೇ । ದುರ್ಗಾಲಯೆ ನತಸುರವರ್ಗೇ ।
ವರ್ಗೀಕೃತ ನಿಜಸುಖ ಭರ್ಗೇ ।
ಭರ್ಗಾನುಗ್ರಹಕೃತ ಮಾರ್ಗೇ ।
ಮಾರ್ಗವ ತೋರಿಸಿ ಶೀಘ್ರದಿ ಮೇಣಪ ॥
ವರ್ಗವ ನೀಡುವ **ಚಿದ್ಘನಾತ್ಮಳೆ** ॥ ॥ ೩ ॥

* * *

ಭಾಗ ೧೦:
ಶ್ರೀ ಗಂಗಾ ಸಂಬಂಧವಾದ ಕೀರ್ತನೆಗಳು (೧೨೭-೧೩೧)

೧೨೭. ಗಂಗಾ ಗಂಗಾ ಎಂದು

(ಧಾಟಿ: ಬಾರೋ ಬಾ ಗೋಪಾಲಬಾಲ)

ರಾಗ: ಜುಂಜೋಟಿ **ತಾಳ: ರೂಪಕತಾಳ**

ಗಂಗಾ ಗಂಗಾ ಎಂದು ನಿನ್ನ ಸಾನ್ನಿಧ್ಯದಲ್ಲಿಯೇ
ಇರುವೆನೋ ಸುಖದಿ ಗಂಗಾ ॥ ॥ ಪ ॥

ಧರೆಗೊಪ್ಪುವ ಹಾರವಿದೆಂಬಂದದಿ ।
ಮೆರೆಯುತ್ತಿ । ರುವಾ ಪರಮ ಪಾವನೆಯೆ ॥ ॥ ೧ ॥

ಸುರಲೋಕಕೆ ಹತ್ತುವದನು ಸೂಚಿಸು
ತ್ತಿರುವ ಪತಾಕೆಯ ಪರಿಯೊಳೊಪ್ಪಿರುವ ॥ ॥ ೨ ॥

ಹರಿಚರಣಾಂಬುಜದಿಂದ ಹೊರಡುತ ।
ಹರನ ಶಿರಸ್ಸಿಂ ಹರಿಯುತಾ ಇರುವ ॥ ॥ ೩ ॥

ಮುಳುಗಿದವರ ಪಾಪಗಳನೆಲ್ಲವನು ।
ತೊಳೆಯುವ ಚಿನ್ಮಯೆ ಕಲಿಮಲಾಪಹರೆ ॥ ॥ ೪ ॥

* * *

೧೨೮. ಎಂದು ನಿನ್ನ ಪಾದವನ್ನಾ

(ಧಾಟಿ: ಪಿಬಮೌಕುಂದಂ ಪದಮಕರಂದಂ)

ರಾಗ: ಹಿಂದೂಸ್ತಾನಿ ಕಾಪಿ ತಾಳ: ಅಟತಾಳ

ಎಂದು ನಿನ್ನ ಪಾದವನ್ನಾ ।
ನಂದದಿಂದ ಸೇವಿಸುವೆನೊ ॥ ॥ ಪ ॥

ಹರಿಯ ಪಾದ ಕಮಲದೆಳೆಯ ।
ಪರಿಯಲ್ಲಿ ಶೋಭಿಸುತ ಮತ್ತೆ ॥
ಹರನ ಶಿರದ ಮಾಲತಿಯ ।
ಸರವ ಹೋಲುತಿರುವ ಗಂಗೆ ॥ ॥ ೧ ॥

ಮರಗಳಿಂದ ಸುತ್ತಿಕೊಂಡು ।
ತರಣಿಕಿರಣ ಸೋಕದಂತೆ ॥
ಇರುವ ನಿನ್ನ ಜಲದಾಶ್ರಯದಿ ।
ಇರುವ ಪುಣ್ಯವೀಯೌ ಗಂಗೆ ॥ ॥ ೨ ॥

ನಿನ್ನಲ್ಲಿಯೆ ಸ್ನಾನ ಮಾಡಿ ।
ನಿನ್ನ ನೀರ ಕುಡಿದು ಬದುಕಿ ॥
ನಿನ್ನ ನಾಮ ಸ್ಮರಿಸುವಂತೆ ।
ಎನ್ನ ಕಾಯೌ ಚಿನ್ಮಯಾಂಗಿ ॥ ॥ ೩ ॥

* * *

೧೨೯ ಭಾಗೀರಥಿಯೆ ಬಾಗಿ ವಂದಿಸುವೆ

(ಧಾಟಿ: ಕೋಪಮೇಟಲರಾ ಕಾಯುಂಡನುರಾ)

ರಾಗ: ಕೇದಾರಗೌಳ ತಾಳ: ರೂಪಕತಾಳ

ಭಾಗೀರಥಿಯೆ । ಬಾಗಿ ವಂದಿಸುವೆ ।
ಬಹು ಪುಣ್ಯದಾಯಿನಿ ॥ ॥ ಪ ॥

ಭಾಗೀರಥೀಭವ । ರೋಗವನೆಲ್ಲವ ।
ನೀಗುತ ಕಾಯುವ । ಯೋಗಿಜನಾರ್ಚಿತೆ ॥ ॥ ಅ.ಪ. ॥

ವೇಗದಿ ನುಗ್ಗಿ ಬ್ರಹ್ಮಾಂಡವ ಭೇದಿಸಿ ।
ಭೋಗಿ ವಿಭೂಷನ ಮೇಲ್ಗಡೆ ಶೋಭಿಸಿ ॥
ಬೇಗ ಭೂಮಿಯ ಪಾವನಮಾಗಿಸಿ ।
ರಾಗದಿ ಭಕ್ತರನುದ್ಧರಿಸುತ್ತಿಹ ॥ ॥ ೧ ॥

ನಿನ್ನಯ ತೀರದಿ ವಾಸಿಸಿ ಹಸ್ತಗ ।
ಳನ್ನು ಜೋಡಿಸುತೀಶ್ವರಧ್ಯಾನದಿ ॥
ಮುನ್ನ ನಿಂತಿರುತಿನ್ನೊಂದರಿಯದೆ ।
ಎನ್ನ ಜೀವಿತಕಾಲವು ಸಾಗಲಿ ॥ ॥ ೨ ॥

ನಿನ್ನಯ ನೀರೀಂ ಜೀವಿಸುತಿನ್ನೊಂ ।
ದನ್ನವ ಕೇಳದೆ ಸಂತತವೀಶ್ವರ ॥
ನನ್ನು ಚಿತ್ತದಿ ಚಿಂತಿಸುವಂದದಿ ।
ಎನ್ನೊಳು ಪ್ರೇಮವ ತೋರಿಸು ಚಿನ್ಮಯೆ ॥ ॥ ೩ ॥

* * *

೧೩೦. ಗಂಗಾದೇವಿ ನಮೋ

(ಧಾಟಿ: ಶುದ್ಧಂ ಬ್ರಹ್ಮ ಪರಂ)

ರಾಗ: ಮುಖಾರಿ ತಾಳ: ತ್ರಿಶ್ರಭಾಪುತಾಳ

ಗಂಗಾದೇವಿ ನಮೋ । ಭಕ್ತಾ-ನುಗ್ರಹಕಾರಿಣಿ ॥ ॥ ಪ ॥

ಬ್ರಹ್ಮಕಮಂಡಲುವಿಂದ ಸಂಜನಿಸಿದೆ ।
ಬ್ರಹ್ಮತ್ವಯಾಚಕವರದೆ । ಪೂರ್ಣಕರುಣಾಶರಧೆ ॥ ॥ ೧ ॥

ಬೇಗ ಭಗೀರಥ ರಥದ ಹಿಂದಿಳಿತಂದ ।
ಭಾಗೀರಥಿಯೆ ಪುಣ್ಯನಿಲಯೆ । ಪಾಪಸಂಚಯವಿಲಯೆ ॥ ॥ ೨ ॥

ಸಗರವಂಶಜರಿಗೆ ಮುಕ್ತಿಯ ಕೊಟ್ಟಂಥ ।
ಅಗಣಿತ ಗುಣಗಣಮಹಿತೆ । ಭಕ್ತಿಭಾವೈಕವಿದಿತೆ ॥ ॥ ೩ ॥

ಸುಲಲಿತೆ ಜಹ್ನುಮುನೀಶ್ವರ ನಂದಿನಿ ।
ಜಲನಿಧಿಪರ್ಯಂತಗಾಮಿನಿ । ಭಕ್ತಿವೈರಾಗ್ಯದಾಯಿನಿ ॥ ॥ ೪ ॥

ಯಮುನೆಯ ಕೂಡಿಕೊಂಡಂತೆನ್ನ ಗುರುವಿನೋಳ್ ।
ಕ್ರಮದಿ ಕೂಡಿಸು ಎನ್ನ **ಚಿನ್ಮಯೆ** । ದೇವಿ ಪರಿಹೃತಮಾಯೆ॥ ॥ ೫ ॥

* * *

೧೩೧. ಕಾಶೀಪ್ರಾಂತ ಪ್ರವಾಹೀ

(ಧಾಟಿ: ನೀನಾಮ ರೂಪಮುಲಕು)

ರಾಗ: ಸೌರಾಷ್ಟ್ರ ತಾಳ: ಏಕತಾಳ

ಕಾಶೀಪ್ರಾಂತಪ್ರವಾಹೀ ।
ದಿವ್ಯಗಂಗಾ ಮಂಗಳಂ ॥ ॥ ಪ ॥

ಹರಿಪಾದತೀರ್ಥವಾಗಿ ।
ಹರಿಯುತ್ತ-ಲಿರುವಂಥ ॥ ॥ ೧ ॥

ಹರನ ಶಿರದ-ಮೇಲೆ ಕುಳಿತು ।
ವರದೆಯಾಗಿ ಮೆರೆಯುವಂಥ ॥ ॥ ೨ ॥

ಶರಣೆನುತ್ತ-ಬಂದ ಜನರ ।
ದುರಿತವನ್ನು ಕಳೆಯುವಂಥ ॥ ॥ ೩ ॥

ಮುಳುಗಿದಂಥ-ಜನರನೆಲ್ಲ ।
ಘಳಿಲನೇ ಉದ್ಧರಿಸುವಂಥ ॥ ॥ ೪ ॥

ತಾಪಸಾಳಿ-ಗಾದರದಿ **ಚಿ** ।
ದ್ರೂಪದಲ್ಲಿ ತೋರುವಂಥ ॥ ॥ ೫ ॥

* * *

ಭಾಗ ೧೧:
ಶ್ರೀ ದತ್ತಾತ್ರೇಯ ಸಂಬಂಧವಾದ ಕೀರ್ತನೆಗಳು (೧೩೨-೧೩೬)

೧೩೨. ಬೇಡುವೆನ್ನೈ ಶಾಂತಿಯನ್ನು

(ಧಾಟಿ: ತಾಮರಸಾವಾಸಲೋಲೆ)

ರಾಗ: ಹಿಂದೂಸ್ತಾನಿ ಕಾಪಿ ತಾಳ: ಚತುರಶ್ರ ಏಕತಾಳ

ಬೇಡುವೆನ್ನೈ ಶಾಂತಿಯನ್ನು ।
ನೀಡು ದತ್ತಾತ್ರೇಯ ನೀನು ॥ ॥ ಪ ॥

ಭವಪಾಶಬಂ-ಧವ । ಜವದಿಂದ ನೀ-ಗುವ ।
ಶಿವಭೂಸುರಮಾಧವಾತ್ಮಕನೆ ನಾ ॥ ॥ ೧ ॥

ವರಶುಭ್ರಕಾ-ಯ । ಪರತತ್ತ್ವಗೇ-ಯ ।
ಪರಿಹೃತಮಾ-ಯ ಪೊರೆಯೈ ಜೀಯ ॥ ॥ ೨ ॥

ದಿವ್ಯದಿಗಂ-ಬರ । ದಿವ್ಯರೂಪಾ-ಧಾರ ।
ದಿವ್ಯ ಮೂರ್ತಿಯೆ ದಿವ್ಯ ಚಿನ್ಮಯ ॥ ॥ ೩ ॥

* * *

೧೩೩. ಭಜಿಸುವೆನು ಸಂತತ

(ಧಾಟಿ: ನಮಿಸುವೆನು ಶಂಕರ)

ರಾಗ: ಬೇಹಾಗ್ ತಾಳ: ಏಕತಾಳ

ಭಜಿಸುವೆನು ಸಂತತ । ದತ್ತಾತ್ರೇಯನ ॥ ಪ ॥

ನಿಜಸುಖದಾತಾರನನೀಗ ನಾನು ॥ ಅ.ಪ. ॥

ಕನಕಪಾತ್ರೆ–ಯಲಿ । ಮನೆಮನೆಗ–ಳಲಿ ।
ಘನಭಕ್ಷ್ಯಭೋಜ್ಯ । ಗಳ ಪಡೆವನ ॥ ॥ ೧ ॥

ವಸುಧೆಯ ಹಾ–ಸಿ । ಗಗನವ ಹೊ–ದ್ದು ।
ಅಸಮಾನಮಹಾ । ತ್ಮೆಯ ತೋರುವನ ॥ ॥ ೨ ॥

ಸ್ಮರಣೆಯ ಮಾ–ತ್ರದಿ । ಪರಿತುಷ್ಟನಾ–ಗುವ ।
ಚಿರಜೀವಿ ಪರಾ । ತ್ಪರ ವಿಗ್ರಹನ ॥ ॥ ೩ ॥

ಅನಸೂಯೆಯಿಂ–ದಲಿ । ಜನಿಸುತ–ಭಕ್ತರ ।
ಮನಸಿನಭಯ । ವನು ಕಳೆವನ ॥ ೪ ॥

ಅವಧೂತವ–ರ್ಗಕೆ । ಅರಸೆಂಬ ರೀ–ತಿಯೊಳ್ ।
ಅವನಿಯ ಚಿ । ನ್ಮಯನಾಗಿಹನ ॥ ॥ ೫ ॥

* * *

೧೩೪. ಪಾಲಿಸೆನ್ನ ದತ್ತಮುನಿಯೆ

(ಧಾಟಿ: ಓಡಿ ಬಾರೋ ವೈಕುಂಠಪತಿ ನಿನ್ನ)

ರಾಗ: ಧನಾಶ್ರೀ ತಾಳ: ಏಕತಾಳ

ಪಾ–ಲಿಸೆನ್ನ ದತ್ತ ಮುನಿಯೆ ನಿನ್ನ ।
ಕಾಲಿಗೆ ಬೀಳು–ವೆನು ನಾ ॥ ॥ ಪ ॥

ಪಾಲಿಸುಪರಮಕೃಪಾನಿಧಿ ಭಕ್ತರ ।
ಜಾಲವ ಪೊರೆಯುವ ಯೋಗಿಜನಪ್ರಿಯ ॥ ಅ.ಪ. ॥

ಬಡವರೆಂದೆ–ನ್ನದೆ । ಧನಿಕರೆಂದೆ–ನ್ನದೆ ।
ಕಡುಮೂಢರೆ–ನ್ನದೆ । ಪ್ರೀತಿಯಿಂದ
ಅಡಿಗೆರಗಿದವರಿ । ಗಭಯುವ ನೀಡುವಂಥ ।
ಬೆಡಗು ತಾನಿನ್ನೊಂ । ದೆಡೆಯೊಳಗಿಹುದುಂಟೆ ॥ ॥ ೧ ॥

ಶರಣರ ಬಂ–ಧು ಭೀ । ತರಿಗಭಯ ಪ್ರದಾತ ।
ಪರಮಪೂಜ್ಯ । ನು ಸಾಧು । ಸಂಘದಲ್ಲಿ ॥
ಸೆರಗೊಡ್ಡಿ ಬೇ–ಡುವ । ಯಾಚಕ ಜನರಿಗೆ ।
ಧರಣಿಯೊಳಿರುವಂಥ । ಸುರತರುವಾ–ಗಿಹೆ ॥ ॥ ೨ ॥

ಭೂರಿಶಾಂತಿಯ ತಾಳಿ । ವೇದವಿಧಿಗಳಿಗೆ ।
ದೂರನಾಗಿರುತಾತ್ಮಾ । ರಾಮನಾಗಿ ॥
ಧಾರಿಣಿಗೆಲ್ಲಾ ಅವಧೂತ ಸ್ಥಿತಿಯನ್ನು ।
ತೋರುತಲಿರುವಂಥ । ಚಿನ್ಮಯ ಮೂರ್ತಿಯೆ ॥ ॥ ೩ ॥

* * *

೧೩೫. ರಾಜೇಂದ್ರ ದತ್ತದೇವನಿಗೆ

(ಧಾಟಿ: ಲಾವಣ್ಯರಾಮ ಕನ್ನುಲರಜೂಜರೆ)

ರಾಗ: ಅಠಾಣ ತಾಳ: ರೂಪಕತಾಳ

ರಾ–ಜೇಂದ್ರ ದತ್ತದೇವನಿಗೆ ವಂದಿಪೆಂ । ಗುರು ॥ ॥ ಪ ॥

ನೈಜಸುಖಾಸ್ವಾದದಲ್ಲಿ (ಯೇ) ।
ಈಜಗವನು ಮರೆತಿರುವ ॥ ॥ ಅ.ಪ. ॥

ಈ ಶರೀರವೀಮನಸುಮೀ ಧರೆಯ ಎಲ್ಲಾ (ದೇವ) ।
ಆಶೆಗಳನು ತೆಗೆದುಕೊಳುತ ।
ಲೇಸಮಾಡಲರಿತಿಹ ಈ ॥ ॥ ೧ ॥

ಪಾ–ಪಗಳ ತಾಪವನು ಹೋಗಿಸುತ ಎಲ್ಲಾ (ದೇವ)
ತಾಪತ್ರಯಗಳ ಕಳೆಯುವ(ತ) ।
ಚಾಪಲ್ಯವ ಕಳಿಯುವ ಈ ॥ ॥ ೨ ॥

ಜ್ಞಾ–ನವನು ದಾನವ ಮಾಡುತಲಿ ಎಲ್ಲಾ (ದೇವ) ।
ದೀನರ ಸಂರಕ್ಷಿಸುವ (ಈ) ।
ಮಾನವರೂಪದ ಚಿನ್ಮಯ ॥ ॥ ೩ ॥

* * *

೧೩೬. ಚಿತ್ತಜಯವನೀಯುವಂಥ

(ಧಾಟಿ: ನೀನಾಮ ರೂಪಮುಲಕು)

ರಾಗ: ಸೌರಾಷ್ಟ್ರ ತಾಳ: ಏಕತಾಳ

ಚಿತ್ತಜಯವ–ನೀಯುವಂಥ । ದತ್ತದೇವ–ಮಂಗಳಂ ॥ ॥ ಪ ॥

ಯೋಗಿ–ಯಾಗಿ– ಭಕ್ತಜನರ ।
ಬೇಗದಿ ಕಾ–ಪಾಡುವಂಥ ॥ ॥ ೧ ॥

ಧರೆಯನೆಲ್ಲ–ಕನಸಿನೊಳಗ ।
ಣರಮನೆಯೆಂ–ದರಿಯುವಂಥ ॥ ॥ ೨ ॥

ಎಲ್ಲವನ್ನೂ **ಚಿತ್ಸ್ವರೂಪ** ।
ದಲ್ಲಿಯೇ ತಾ– ನೋಡುವಂಥ ॥ ॥ ೩ ॥

* * *

ಭಾಗ ೧೨:
ಶ್ರೀ ಸೂರ್ಯ ಸಂಬಂಧವಾದ ಕೀರ್ತನೆಗಳು (೧೩೭-೧೪೧)

೧೩೭. ಕರುಣದಿಂದ ಪೊರೆವುದೆನ್ನ

(ಧಾಟಿ: ಶಂಕರಿ ಮಾಂ ಪಾಲಯಾತು)

ರಾಗ: ಭೈರವಿ ತಾಳ: ರೂಪಕ

ಕರುಣದಿಂದ ಪೊರೆವುದೆನ್ನ ।
ಪರಮಪುರುಷ ಸೂರ್ಯದೇವ ॥ ॥ ಪ ॥

ಗಾಲಿಯೊಂದೆ ಇರುವ ರಥವು ।
ಕಾಲು ಕುಂಟನಾದ ಸಾರಥಿ ॥
ಏಳುಕುದುರೆ ಇರಲು ನಡೆವ ।
ಕಾಲಚಕ್ರನಿಯಂತಾರ ॥ ॥ ೧ ॥

ಲೋಕಕ್ಕೆಲ್ಲ ಕಣ್ಣೆನಿಸುತ ।
ಭೀಕರಾಂಧಕಾರವನ್ನು ॥
ನೂಕಿಜಗಕೆ ಬೆಳಕನೀವ ।
ಸಾಕಾರ ಪರಬ್ರಹ್ಮ ॥ ॥ ೨ ॥

ಸರ್ವಸೃಷ್ಟಿಕರ್ತನಾಗಿ ।
ಸರ್ವಸ್ಥಿತಿಗೆ ಕಾರಣನಾಗಿ ॥
ಉರ್ವಿಯೊಳಗೆ ಬೆಳಗುತಿರುವ ।
ಸರ್ವದೇವ ಚಿತ್ಸ್ವರೂಪ ॥ ॥ ೩ ॥

* * *

೧೩೮. ಇಷ್ಟಾರ್ಥವನು ನೀಡು

(ಧಾಟಿ: ಲಕ್ಷ್ಮೀರಮಣದೇವ)

ರಾಗ: ಖಮಾಚ್ ತಾಳ: ಚತುರಶ್ರ ಏಕತಾಳ

ಇಷ್ಟಾರ್ಥವನು ನೀಡು । ದಿವಾಕರ ॥ ॥ ಪ ॥

ಸುರವರನುತಿಪಾತ್ರ । ಶರಣಜನರ ಮಿತ್ರ ॥ ॥ ಅ.ಪ. ॥

ತಮವನು ಕಳೆಯುವ । ಕ್ರಮದಿಂದೆನ್ನಯ ।
ಭ್ರಮವನು ಕಳೆಯ್ಯೆ । ಕಮಲಸಖನೆ ನೀನು ॥ ॥ ೧ ॥

ತರಣಿ ನೀನು ಭವ । ಶರಧಿಯ ದಾಟಿಪ ।
ತರಣಿಯಾಗುತಲೆನ್ನ । ಕರವ ಹಿಡಿಯೊ ನೀನು ॥ ॥ ೨ ॥

ರೋಗಹರನೆ ನೀನು । ಬೇಗದೊಳೆನ್ನ ಭವ ।
ರೋಗವನೆಲ್ಲವ । ಹೋಗಿಸು ಚಿನ್ಮಯ ॥ ॥ ೩ ॥

* * *

೧೩೯. ಸೆರೆಗೊಡ್ಡಿನಾ ಶರಣೆಂಬುವೆ

(ಧಾಟಿ: ಕಲಯಾಮಿ ಶ್ರೀ ರಘುನಂದನಂ)

ರಾಗ: ಸಿಂಧುಮಂದಾರಿ ತಾಳ: ಆದಿತಾಳ

ಸೆರಗೊಡ್ಡಿ ನಾ ಶರಣೆಂಬುವೆ ।
ಹರಿದಶ್ವನೇ ಕರುಣಾಮಯ ॥ ॥ ಪ ॥

ಸರಸೀರುಹ ಸಂಚಯಮಿತ್ರನೆ ।
ಶುಭಗಾತ್ರನೆ ಸುಪವಿತ್ರನೆ ॥ ॥ ಅ.ಪ. ॥

ಗ್ರಹರಾಶಿಗಳಾನಾಕರ್ಷಿಪ ।
ಮಹನೀಯನೇ ನೀನೆನ್ನನು ।
ಬಹುಪುಣ್ಯದ ನಿನ್ನಯ ಪಾದವ ।
ಬಹುಭಕ್ತಿಯಿಂದ ಭಜಿಪಂತೆ ಗೈ ॥ ॥ ೧ ॥

ಧರೆಗೆಲ್ಲ ಕರ್ಮದ ಸಾಕ್ಷಿಯಾ ।
ಗಿರುತಿರ್ಪೆಯಲ್ಲವೆ ದೇವನೀಂ ।
ದುರಿತಂಗಳ ದೂರವ ಮಾಡುತ ।
ವರಕರ್ಮವ ನೆರೆಮಾಡಿಸೈ ॥ ॥ ೨ ॥

ಬೆಳಕನ್ನು ನೀಡುವ ದೇವನೆ ।
ಒಲಿಯುತ್ತ ನೀನೆನಗೀಗಲೆ ।
ನಲವಿಂದಲಿ ಚಿನ್ಮಯರೂಪದ ।
ಬೆಳಕನ್ನು ತೋರಿಸು ಬೇಗಲೆ ॥ ॥ ೩ ॥

* * *

೧೪೦. ಆದಿತ್ಯನೆ ನಮಿಪೆ

(ಧಾಟಿ: ಜೋಜೋಜೋ ರಾಮ)

ರಾಗ: ಕಮಾಚ್ ತಾಳ: ಮಿಶ್ರಭಾಪುತಾಳ

ಆದಿತ್ಯನೆ ನಮಿಪೆ । ಮೋದದಿ ನಾನು ॥ ॥ ಪ ॥

ಪಾಪದೂರನೆ ನಿ । ರ್ಲೇಪಸ್ವಭಾವನೆ ।
ಪಾಪಕಳೆದು ನಿ। ರ್ಲೇಪನ ಮಾಡೆನ್ನ ॥ ॥ ೧ ॥

ನಿತ್ಯಪ್ರಕಾಶನೆ । ನಿತ್ಯಸ್ವರೂಪನೆ ।
ಭೃತ್ಯನಾಗಿಹೆ ಕೃತ । ಕೃತ್ಯನ ಮಾಡೆನ್ನ ॥ ॥ ೨ ॥

ಕಳ್ಳರ ಹಗೆ ನೀನು । ಎನ್ನ ಹೃದಯದಲ್ಲಿ
ಕಳ್ಳನಾಗಿಹ ಕಾಮನ । ಸೊಲ್ಲಡಗಿಸು ನೀನು ॥ ॥ ೩ ॥

ಧರೆಗೆಲ್ಲ ನೀನೆ ಎ । ಚ್ಚರವನೀಯುವೆ ಎನ್ನ ॥
ಮರವೆಂಬ ನಿದ್ರೆಯ । ಹರಿಸಿ ಎಬ್ಬಿಸು ಬೇಗ ॥ ॥ ೪ ॥

ಮೂಡಲ ಗಿರಿಯಲ್ಲಿ । ಮೂಡುವಂತೆನ್ನಯ ।
ಮೂಢ ಹೃದಯದಲ್ಲಿ । ಮೂಡು **ಚಿದ್ರೂಪದಿ** ॥ ॥ ೫ ॥

* * *

೧೪೧. ಶರಣರ ಕಾಮಧೇನು

(ಧಾಟಿ: ನೀನಾಮ ರೂಪಮುಲಕು)

ರಾಗ: ಸೌರಾಷ್ಟ್ರ ತಾಳ: ಏಕತಾಳ

ಶರಣರ- ಕಾಮಧೇನು । ಚಿತ್ರಭಾನು–ಮಂಗಳಂ ॥ ॥ ಪ ॥

ಹಗಲಿಗೆ–ಒಡೆಯನಾಗಿ ।
ಹಗರಣವ–ನೀಗುವಂಥ ॥ ॥ ೧ ॥

ಮಾರ್ತಾಂಡ–ನಾ ಜನರ ।
ಆರ್ತಿಯ–ಕಳೆಯುವಂಥ ॥ ॥ ೨ ॥

ಕಾಶ್ಯಪ- ಕುಲವನು ಪ್ರ ।
ಕಾಶವ–ಮಾಡುವಂಥ ॥ ॥ ೩ ॥

ಧರೆಗೆಲ್ಲ–ತೋರ್ಪ ಸ್ಥೂಲ ।
ಪರಮಾತ್ಮ–ನೆನಿಸುವಂಥ ॥ ॥ ೪ ॥

ಪ್ರೀತಿಯಿಂ–ಭಕ್ತರೊಳ್ಗಿ ।
ಜ್ಯೋತಿಯ ತೋರುವಂಥ ॥ ॥ ೫ ॥

* * *

ಭಾಗ ೧೩:
ಮನಸ್ಸಿಗೆ ಉಪದೇಶ ಸಂಬಂಧವಾದ ಕೀರ್ತನೆಗಳು (೧೪೨-೧೫೨)

೧೪೨. ಮನವೇ ಮನವೇ

(ಧಾಟಿ: ಅಪರಾಧಮುಲನ್ನಿಯು ಮನ್ನಿಂಚಿ)

ರಾಗ: ಲತಾಂಗಿ ತಾಳ: ಆದಿತಾಳ

ಮನವೇ ಮನವೇ ಬೆಸಗೊಳ್ಳುವೆ ನಾ ।
ಅನುವಿಂದಲಿ ಲಾಲಿಸು ನೀನೀಗ ॥ ॥ ಪ ॥

ಅನಿಮಿತ್ತದಿಂದ । ಮುನಿದೆನ್ನನೊಯ್ದು ।
ಜನಿಮೃತ್ಯು ವಿ । ನೊಳು ಹಾಕಬೇಕೆ ॥ ॥ ಅ.ಪ. ॥

ಬಗೆಬಗೆಯಾದ । ದುಃಖಗಳ ನಿತ್ತು ।
ಹಗರಣಕೇ । ಗುರಿಮಾಡುವಂಥ ॥
ಜಗದೊಳಗಣ ವಿಷಯಂಗಳ ।
ಸೊಗಸಿಗೆ ನೀ ಬೆರಗಾಗಬೇಡ ॥ ॥ ೧ ॥

ಧರೆಯಲ್ಲಿ ಮಾಡಿ ಮುಗಿಸಲಾರದಷ್ಟು ।
ಪರಿಪರಿ ಪುಣ್ಯಕರ್ಮವಿರುವಾಗ ॥
ತೊರೆದವುಗಳ ಪಾಪವನ್ನೆ ಮಾಡಿ ।
ಬರಿಕಷ್ಟಕೇ ಗುರಿಯಾಗಬೇಡ ॥ ॥ ೨ ॥

ತಿಳಿದಿರ್ಪ ಧರ್ಮಮಾರ್ಗವನ್ನು ತಪ್ಪಿ ।
ಬಳಲುತ್ತ ಚಿದ್ರೂಪವನರಿಯದೆ ॥
ಬಲು ಕಷ್ಟವಾದ ಸಂಸಾರವೆಂಬ ।
ಬಲೆಯಲ್ಲಿ ಸಿಕ್ಕಿ ಬಲಿಯಾಗಬೇಡ ॥ ॥ ೩ ॥

* * *

೧೪೩. ಇದು ನನ್ನದೆಂದು ನಂಬಿ

(ಧಾಟಿ: ಇಕನನು ಬ್ರೋವಕುನ್ನಾ)

ರಾಗ: ಭೈರವಿ ತಾಳ: ಆದಿತಾಳ

ಇದು ನನ್ನದೆಂದು ನಂಬಿ । ಮದಿಸುವದೇಕೆ ಮನವೆ ।
ಇದರಿಂದ ಫಲವೇನಿದೆ । ನಿಜವಾಗಿ ನೋಡೆ ॥ ॥ ಪ ॥

ಇದು ನನ್ನದೆಂದು ವಿಷ । ಯದ ತೊಡಕಿಗೆ ಬಿದ್ದು ।
ಹೃದಯದೊಳಗೆ ಹರಿಯ । ಪದಗಳ ನೆನೆಯದೆ ॥ ॥ ಅ.ಪ. ॥

ಹೊಲ ಮನೆ ನನ್ನದೆಂದು । ತಲೆಯ ತಿರುಗಿಸುತ್ತ ।
ಬಲು ಗರ್ವದಿಂದಲಿ । ಮೆರೆಯುವದೇಕೆ? ॥
ಇಳೆಯನೆಲ್ಲವ ಗೆದ್ದ । ರಾವಣನಾಸ್ತಿಯು ।
ತೊಲಗಿದುದನು ಕಂಡು । ಹಲುಬುವದಿನ್ನು ಸರಿಯೆ ॥ ॥ ೧ ॥

ತನುವಿದು ನನ್ನದೆಂದು । ಎಣಿಸುತದಕೆ ನೀನು ।
ಎಣಿಕೆ ಇಲ್ಲದ ಸೌಖ್ಯ । ಪಡಿಸುವದೇಕೆ ॥
ತನುವು ಶಾಶ್ವತವಾಗಿ । ಇರುವುದೆಂಬುವುದುಂಟೆ ।
ಜನಿಮೃತ್ಯುಗಳಿಗಿದು । ಮನೆಯಾಗಿ ಇರುವಾಗ ॥ ॥ ೨ ॥

ಸತಿಸುತರೇ ನಿನ್ನ । ಗತಿಯೆಂದು ತಿಳಿಯುತ ।
ಮತಿಯೊಳು **ಚಿನ್ಮಯನ** । ಮರೆಯುವದೇಕೆ ॥
ಕ್ಷಿತಿಯೊಳು ಕರ್ಮದ । ಸ್ಥಿತಿಗತಿಯಂತೆ ದೊರೆವ ।
ಸತಿಸುತಾದಿಗಳ ಮೇಲೆ । ಅತಿಹಿತ ಮಾಡಬಹುದೇ ॥ ॥ ೩ ॥

* * *

೧೪೪. ಮನವೆ ನೀನು ಹೆದರಬೇಡ

(ಧಾಟಿ: ವೆಡಲೆನುಕೋ ದಂಡಪಾಣಿ)

ರಾಗ: ತೋಡಿ ತಾಳ: ರೂಪಕ ತಾಳ

ಮನವೆ ನೀನು ಹೆದರಬೇಡ । ಜನಕಜೇಶನು ಕಾಪಾಡುವನು॥ ॥ ಪ ॥

ನಿನಗೆ ಶರಣು ಬಂದೆನೆಂದರೆ ।
ಅನುವಿಂ ನಾಂ ಪೊರೆವೆನೆಂಬನು ॥ ॥ ಅ.ಪ. ॥

ಶರಣು ಶರಣೆನುತ್ತ ಬಂದು ।
ಚರಣಯುಗಳದಲ್ಲಿ ತಮ್ಮ ।
ಶಿರಗಳನ್ನಿಟ್ಟವರನೆಲ್ಲ ಪೊರೆವುದಕೆಂದು ।
ಪುರವನೆ ನಿಮಿಷಾರ್ಧದಲ್ಲಿ ।
ಸುರನಾಥನ ಲೋಕಕೊಯ್ದು ।
ಪರಮಪುರುಷ ಪತಿತಪಾವನ ।
ಕರುಣಾನಿಧಿ ನಿನ್ನ ಬಿಡನು ॥ ॥ ೧ ॥

ಶಿಲೆಯ ರೂಪವನ್ನು ತಾಳಿ ।
ದಲಘುದೋಷಿಯಾದ ಸ್ತ್ರೀಯನು ।
ಜಲಜ ಸದೃಶವಾದ ಪಾದ । ತಲದಲಿ ಮುಟ್ಟಿ ।
ಲಲನೆಯ ಮಾಡುತ್ತ ಭೂ ।
ವಲಯದಿಂದ ಸ್ತುತಿಸಿಕೊಂಡ ।
ಕಲಿ ಮಲಾಪಹ ಜಲದಾಮಿತ್ರ ।
ಕುಲಲಲಾಮನು ನಿನ್ನ ಬಿಡನು ॥ ॥ ೨ ॥

ಪರಿಪರಿ ಸೇವೆಯ ಗೈದ ।
ಹರಿನಾಯಕಗೊಲಿಯುತವನ ।
ಚಿರಂಜೀವಿಯ ಮಾಡಿ ಮತ್ತೆ ಪರಮಾದರದಿ ।
ಸುರನರರಿಗಸಾಧ್ಯವಾದ ।
ಪರತರವಹ **ಚಿದ್ರೂಪದ** ।
ಪರಿಯತೋರಿ ಪೊರೆದ ಸೀತಾ ।
ವರಮೂರುತಿ ನಿನ್ನ ಬಿಡನು ॥ ॥ ೩ ॥

* * *

೧೪೫. ಹೀಗಿರು ನೀನೀಗ ಮನವೆ

(ಧಾಟಿ: ಕೋರಿನವರ ಮೊಸಗುಮಯ್ಯಾ)

ರಾಗ: ರಾಮಪ್ರಿಯಾ ತಾಳ: ರೂಪಕತಾಳ

ಹೀಗಿರು ನೀನೀಗ ಮನವೆ । ಈ ಮಾತ ಕೇಳಿ ॥ ॥ ೧ ॥

ರಾಗಲೋಭಗಳನು ನೀ ವಿ ।
ರಾಗಕಾಗಿ ಮಾಡಿಕೊಂಡು ॥ ॥ ಅ.ಪ. ॥

ಸಾಧುಸಂತರಾದವರ ಪಾದಸೇವೆ ದೊರೆಯಲೆಂದು ।
ಆದರದಿಂದಾಸೆಯನ್ನು ಮಾಡು ನೀನು ಸಂತತ ॥
ಮೇದಿನಿಯೊಳಗೊಳ್ಳೆಯವು ಗ । ಳಾದ ಗುಣಗಳುಳ್ಳರೊಳು ।
ಮೋದದಿಂದ ಪ್ರೀತಿ ಮಾಡು ಭೇದಬುದ್ಧಿಯನ್ನು ಬಿಟ್ಟು ॥ ॥ ೧ ॥

ನಿನ್ನ ನೀನು ಬಿಗಿ ಹಿಡಿಯುತ ಅನ್ಯವನು ಬಯಸದಿರುತ ।
ಅನ್ಯಾಯಕೆ ಹೋಗದಿರುತ ಮಾನ್ಯತೆಗಧಿಕಾರಿಯಾಗುತ ॥
ಚನ್ನಾಗಿರುವಂದದೊಳುವದಾನ್ಯಗುಣವ ಬೆಳೆಸಿಕೊಳುತ ।
ನಿನ್ನ ನೀನು ತಿಳಿದು ನೀನೆ ಧನ್ಯನೆಂದು ಭಾವಿಸುತಿರುತ ॥ ॥ ೨ ॥

ಗುರುಜನಂಗಳೆದುರಿನಲ್ಲಿ ಶಿರವ ಬಾಗಿ ನಡೆಯುತಿರುತ ।
ನಿರುತವು ವಿದ್ಯಾವ್ಯಸನದ ಭರವ ಹೆಚ್ಚು ಮಾಡಿಕೊಂಡು ॥
ಹೊರಗಣಿಂದ ದೂರುಗಳನು ಬರಮಾಡಿಕೊಳ್ಳದಿರುತ ।
ನೆರೆ **ಚಿನ್ಮಯ**ನಲ್ಲಿ ಮನವನಿರಿಸಿ ನಿತ್ಯಸುಖವ ಪಡುತ ॥ ॥ ೩ ॥

* * *

೧೪೬. ಕೇಳೈ ನಾ ಹೇಳುವೆ

(ಧಾಟಿ: ನೀವೇ ಪಾಲಿಂಚರ)

ರಾಗ: ಚಕ್ರವಾಕ ತಾಳ: ರೂಪಕ ತಾಳ

ಕೇಳೈ ನಾ ಹೇಳುವೆ । ನೀನೆ ಧನ್ಯನಾಗುವೆ ॥ ॥ ಪ ॥

ನೇಮನಿಷ್ಠೆಯಪ್ಪುದ । ಓ ಮನವೇ ನೀನಿದ ॥ ॥ ಅ.ಪ. ॥

ಹರಿರೂಪವ ಧ್ಯಾನಿಸುತಲಿ ಹರಿಕಥೆಯನ್ನೇ ಕೇಳುತಲಿ ।
ಹರಿಸೇವೆಗಾಗಿ ಈ ಶರೀರವ ದುಡಿಸುತಲಿರು ನೀಂ ॥ ॥ ೧ ॥

ಅಡಿಗಡಿಗಾ ಹರಿನಾಮವ ನುಡಿಯತಲಿರುತ ಸಂತತ ।
ಜಡವಿಷಯಗಳಿಂ ವಿಕಾರವ ಪಡೆಯದೆ ನಿನ್ನೊಳು ನೀನು ॥ ॥ ೨ ॥

ಇತರರನ್ನು ನೋಯಿಸದೆ ಇತರರಿಂದ ನೊಂದುಕೊಳ್ಳದೆ ।
ಸತತವು ಚಿದ್ರೂಪದೊಳ್ ಮತಿಯನು ಸ್ಥಿರವಾಗಿರಿಸು ॥ ॥ ೩ ॥

* * *

೧೪೭. ಹರಿಶರಣೆಂದೆನು ಮನವೆ

(ಧಾಟಿ: ಮನಸುವ ನೆರೆ ನಮ್ಮಿತಿನೀ)

ರಾಗ: ಬೇಗಡೆ **ತಾಳ: ರೂಪಕ ತಾಳ**

ಹರಿಶರಣೆಂದೆನು ಮನವೇ ।
ಪೊರೆವನು ಹರಿಯೇ ನಿನ್ನನು ॥ ॥ ಪ ॥

ಹರಿ ಚರಣವ ನಂಬಿದರೆ ।
ಪರಮ ಪದವಿ ಸಿದ್ಧಿಸುವುದು ॥ ॥ ಅ.ಪ. ॥

ಬಾಲನಾದ ಧ್ರುವನು ಬಾಲ । ಲೀಲೆಯಲಿ ತಾಯನುಡಿಯ ।
ಕೇಳಿ ಮನದಿ ತಪ್ತನಾಗಿ । ಶ್ರೀಲೋಲನು ನೆನೆಯಲಾಗ ।
ಬಾಲನೆಂದುಪೇಕ್ಷಿಸದೆ । ಪಾಲಿಸಲಿಲ್ಲವೆ ಅವನ ॥ ॥ ೧ ॥

ಸರಸಿಯಲ್ಲಿ ಮೊಸಳೆಯೊಂದು । ಕರಿರಾಜನ ಕಾಲಹಿಡಿದು ।
ಭರದಿಂದ ಜಗ್ಗಲಾಗ । ಕರಿರಾಜನು ಘೀಳಿಡಲಾ ।
ಮೊರೆಯ ಕೇಳಿದಾಕ್ಷಣವೇ । ಪೊರೆಯಲಿಲ್ಲವೇ ಅವನ ॥ ॥ ೨ ॥

ಪರತರ **ಚಿನ್ಮಯ** ರೂಪವ । ನರಿಯದೆ ಸುತವಾತ್ಸಲ್ಯದಿ ।
ನಾರಾಯಣನೆಂದು ಸುತನ । ಕರೆಯೆ ಸಾಯುವಾಗಲವನ ॥
ದುರಿತಗಳೆಲ್ಲವನು ಕಳೆದು । ಪೊರೆಯಲಿಲ್ಲವೇ ಮುರಾರಿ ॥ ॥ ೩ ॥

* * *

೧೪೮. ನೀನೇತಕೆ ನಾನೆಂಬುವೆ

(ಧಾಟಿ: ವೇ ರೆವ್ವರೇ ನೀವೇಗತಿ)

ರಾಗ: ಸುರಟಿ ತಾಳ: ಆದಿತಾಳ

ನೀನೇತಕೆ ನಾನೆಂಬುವೆ । ಜ್ಞಾನವಿಲ್ಲದೆ ಹೀನನಾಗಿ ॥ ॥ ಪ ॥

ನಾನೆಂದು ನೀ ನಿರೆ ದೇವನು ಕಾಣಿಸನ್ಯೆ । ಎಲೆಮಾನಸ ॥ ॥ ಅ.ಪ. ॥

ವೇದಶಾಸ್ತ್ರಗಳು ಸಾರಿ ಹೇಳುವಂಥ ।
ಹಾದಿಯಲ್ಲಿ ಹೋಗಿ ಕೊನೆಮುಟ್ಟದೆ ॥
ಈ ದೇಹವೇ ನಾನೆಂದರೆ ।
ಆ ದೇವನು ಕಾಣಿಸುವನೆ ॥ ॥ ೧ ॥

ಸಾಧು ಸಂತಜನರ ಪಾದಸೇವೆಯನ್ನು ।
ಮೋದದಿಂದ ನೀನು ಸಾಧಿಸದೆ ॥
ಭೇದಬುದ್ಧಿಯಿಂದ ವಾದ ಮಾಡಿದರೆ ।
ಮಾಧವನು ನಿನಗೊಲಿಯುವನೆ ॥ ॥ ೨ ॥

ಗುಣಗಳು ಗೈವ ಕಾರ್ಯಗಳನೆಲ್ಲ ।
ತನ್ನದೆಂದು ತನ್ನಮೇಲೆ ಹಾಕಿಕೊಂಡು ॥
ತನ್ನ ತತ್ವವ ಮರೆತುಬಿಟ್ಟರೆ ।
ಚಿನ್ಮಯಾತ್ಮನ ಪಡೆಯಲಪ್ಪುದೆ ॥ ॥ ೩ ॥

* * *

೧೪೯. ಹುಡುಕಬಾರದೆ ಮೃಡನ ಪಾದವ

(ಧಾಟಿ: ಶಾರದಾಂಬ ನಿನ್ನ ನಂಬಿದೆನಮ್ಮ)

ರಾಗ: ನಾಟಕುರಂಜಿ ತಾಳ: ಆದಿತಾಳ

ಹುಡುಕಬಾರದೆ ಮೃಡನಪಾದವ ।
ಸಡಗರದಲಿ ಮನವೇ ಈಗ ॥ ॥ ಪ ॥

ಕೆಡುವ ವಿಷಯಗಳಿಗೆ ಬಾಯನು ।
ಬಿಡವುದೇತಕೆ ಪೊಡವಿಯೊಳಗೆ ॥ ॥ ಅ.ಪ. ॥

ವೇದಶಾಸ್ತ್ರಗಳು ಸಾಧಿಸಲಾಗದ ।
ಭೇದ ಬುದ್ಧಿಯಿಂದ ತಿಳಿಯಲು ಬರದ ।
ಸಾಧಕ ಜನರಿಗೆ ಹರ್ಷವನೀವುದ ।
ಮೇದಿನಿಗೆಲ್ಲ ಆಧಾರವಾಗಿಹುದ ॥ ॥ ೧ ॥

ತಿಳಿಯದ ಜನರಿಗೆ ದೂರವಾಗಿಹುದ ।
ತಿಳಿದವರಿಗೆ ತಮ್ಮಾತ್ಮವಾಗಿಹುದ ।
ಬಲಿದ ವಿವೇಕಕೆ ಗೋಚರವಪ್ಪುದ ।
ಸಲೆ ಗುರುಕರುಣದಿ ಸುಲಭವಾಗುವದ ॥ ॥ ೨ ॥

ಧರೆಜಲ ಮೊದಲಾಗಿಹ ಬಹುರೂಪದಿ ।
ಪರಿಪರಿಯಲಿ ತಾ ತೋರಿದರೂ ।
ಅರಿಯೆ ವಿಕಾರವನೆಂದಿಗೂ ಪಡೆಯದೆ ।
ಪರತರವಹ ಚಿದ್ರೂಪದೊಳಿರ್ಪುದ ॥ ॥ ೩ ॥

* * *

೧೫೦. ಸಾಧಿಸು ಮನವೇ ನೀ

(ಧಾಟಿ: ಎವುಡುಕೃಪಾಗಲ್ಲು)

ರಾಗ: ಮುಖಾರಿ ತಾಳ: ಆದಿತಾಳ

ಸಾಧಿಸು ಮನವೇ ನೀ । ಸಾಧುಸಂಗತಿಯ ॥ ॥ ಪ ॥

ಮೇದಿನಿಯೊಳು ನೋಡೆ ಸಾಧುಜನರ ದಿವ್ಯ ।
ಪಾದಸೇವೆಗೆ ಸರಿ । ಯಾದುದಿನ್ನೊಂದಿಲ್ಲ ॥ ॥ ಅ.ಪ. ॥

ಮೂರುದಿನಕೆ ಮುಗಿವ ಬಾಳಿನ ದೇಹದಲ್ಲಿ ।
ಸೇರಿಕೊಂಡಿರುವಭಿಮಾನವು ಹೋಗಿ ಮತ್ತೆ ॥
ವಾರಿಜನಾಭನಾದ ವಸುದೇವ ತನುಜನ ।
ಭೂರಿಕೃಪೆಗೆ ಪಾತ್ರನಾಗಬೇಕಾದರೆ ॥ ॥ ೧ ॥

ಸತಿಸುತ ಹಿತರೆನಗೆ ಗತಿಯೆಂಬ ಭಾವವು ।
ಮತಿಯಿಂದ ದೂರವಾಗಿ ಹೋಗಿಬಿಟ್ಟಾ ಮುಂದೆ ॥
ಕ್ಷಿತಿಯೊಳು ಸರ್ವಕ್ಕೂ ಅತಿಶಯವಾದ ಶ್ರೀ ।
ಪತಿಯೆ ಗತಿಯೆಂದೆಂಬ ಸ್ಥಿತಿಬರಬೇಕಾದರೆ ॥ ॥ ೨ ॥

ಅನುದಿನವೂ ಬಂದು ಕುಣಿವ ಕಲ್ಪನೆಗಳು ।
ತನತನಗೇನಾಚೆ ಹಿಂದೆ ನಿಂತಾ ಮೇಲೆ ॥
ಮುನಿನುತವಾದ **ಚಿ** । **ದ್ಘನದ** ಸಾಕ್ಷಾತ್ಕಾರ ।
ವನು ಪಡೆಯುವದಕೆ ಅನುನಯದಿಂದಲಿ ॥ ॥ ೩ ॥

* * *

೧೫೧. ಯಾರಿಗೆ ಹೇಳಲಿ ಗೋಳ

ರಾಗ: ಆನಂದಭೈರವಿ ತಾಳ: ಅಟ್ಟತಾಳ

ಯಾರಿಗೆ ಹೇಳಲಿ ಗೋಳ । ಬಹು ।
ಗಾರುಗೆಡಿಸುವೆನ್ನ ದೈವದ ಕಾಳ ॥ ॥ ಪ ॥

ಪಾರುಗಾಣಿಸುವವರ ಕಾಣದೆ
ಭೂರಿ ಭಯಕೊಳಗಾದೆ ಮೂಳ ॥ ॥ ಅ.ಪ. ॥

ಸುತರಿಲ್ಲದುದರಿಂದ ಎನಗೆ ।
ಅತಿಶಯಸುಖದೋರದು ಕೊನೆಗೆ ।
ಕ್ಷಿತಿಯಾಧಿಪತ್ಯದ ಬಿನುಗೆ । ಬಹು ।
ಮತವಲ್ಲ ನೋಡಲು ನನ್ನಯ ಮನೆಗೆ

ಸುತರಿರದೆ ಪುನ್ನಾಮನರಕದೊ ।
ಳತಿಶಯದ ದುಃಖವನು ತಾಳುವ ।
ಗತಿಯ ನೆನೆದೊಡನೆದೆಯೊಡೆಯುವುದು
ಸತತವೀ ಸನ್ಮಾರ್ಗರತಗೆ ॥ ॥ ೧ ॥

ಧರೆಯ ನಿನ್ನಾರು ರಕ್ಷಿಪರು? ಬಹು ।
ಪರಿ ಕುಲಧರ್ಮವ ನಡೆಸುವವರಾರು? ।
ವರಧರ್ಮಗಳಿಗಿದು ಬೇರು । ಇದ ।
ಹೊರತುಳಿದೆಲ್ಲವು ತಲೆಗೊಂದು ಹೇರು ।

ಮೆರೆವ ರಘುವರ ವಂಶವೃಕ್ಷನ ।
ನೆರೆ ಚಿಗುರಿಸದೆ ಒಣಗಿಸದ ದು ।
ರ್ಧರದ ಪ್ರಖ್ಯಾತಿಯ ವಿಶೇಷಕೆ ।
ಗುರಿಯೆ ನಾ ದುರ್ದೈವನಕಟಾ ॥ ॥ ೨ ॥

ಸುಡಲೆನ್ನ ಬಾಳನಿನ್ನೇಕೆ । ಬಹು ।
ಸಡಗರಪಡುವುದು ತನಗಿನ್ನು ಬೇಕೆ ॥
ಒಡಲ ಸೌಭಾಗ್ಯವಿನ್ನೇಕೆ । ಈ ।
ಗಡಿಬಿಡಿಯೊಳಗಾನು ಇರಬೇಕು ಜೋಕೆ

ಪೊಡವಿಯೊಳು ಚಿನ್ಮಯನನುಗ್ರಹ ।
ಪಡೆಯದೀ ಸಂಸಾರದಲಿ । ಮುಂ ॥
ದಡಿಯನಿಡಲಾರದೆ ಭವಾಬ್ಧಿಯ ।
ತಡಿಯ ಕಾಣದೆ ತೊಳಲ್ವೆನಕಟಾ ॥ ॥ ೩ ॥

* * *

ಭಾಗ ೧೪:
೧೫೧. ಸಪ್ತರಾಗಮಾಲಿಕೆ

ರಾಗ: ಕಲ್ಯಾಣಿ–೧ ತಾಳ: ರೂಪಕ

ನಿತ್ಯಾನಂದವ ಪಡೆ ನೀನು ಕಲ್ಯಾಣಿಯೊ ॥
ಛತ್ಯಾನಂದದಿ ಮನವೆ ಪರಮಪುರುಷನ ಹಾಡಿಹೊಗಳುತ ॥ ೧ ॥

ಸಾನಿಧಮಪ ಪಮಗರಿಸಾ, ಸರಿಗಮ–ನಿಧಮಧನಿ ।
ಸರೀಗರಿಸ–ನಿಸಾರಿಸನಿ ಧನೀಧಪಮ–ಗಮಾಪಧನಿ ॥
ಸರಿಸಸಾನಿ–ಧನಿಧಪಾಮ–ಗಧಮಗರಿಸ–ರಿಗಮಪಧನಿ ॥

ರಾಗ: ಶಂಕರಾಭರಣ–೨ ತಾಳ: ರೂಪಕ

ಶರಣಾಗತರನ್ನು ಕಾಯ್ವ–ದೇವೇಶನು ಲೋಕಕ್ಕೆ ।
ಚಿರಸೌಖ್ಯವ ಕೊಡಲು ಹಾಡು ಶಂಕರಾಭರಣದಿಂದ ॥ ॥ ೨ ॥

ಸಾರಿಸನಿಧನಿಧಾಪಮ–ಧಪಾಧಪಮ–ರಿಗಮಪಧನಿ ।
ಸಾರಿನಿಸಧಾ–ನಿಪಧಮಾ– ಪಗಮರಿಗಮಪಧನಿ ॥
ಸರಿಸಸಾನಿ–ಧನಿಧಪಾಮ–ಗಧಮಗರಿಸ–ರಿಗಮಪಧನಿ ॥

ರಾಗ: ತೋಡಿ–೩ ತಾಳ: ರೂಪಕ

ಮಳೆಬೆಳೆಗಳು ಕಾಲಕಾಲಕೆ–ಮನುಜರ್ಗೆಸೌಖ್ಯವೀಯೆ ।
ಒಲಿದು ತೋಡಿರಾಗದಿಂದ ಜಲಜನೇತ್ರನನ್ನು ಸ್ತುತಿಸು ॥ ॥ ೩ ॥

ಸಾರಿನಿಧ–ನಿಧ ಮಗರಿನಿಸಾ, ರಿಗಮ ನಿಧಗಮಧನಿ ।
ಸರಿನಿಸಾನಿ ಧನಿನಿಧಮಗ–ಮಧಮಗರಿನಿ ಸರಿಗಮನಿಸಧ ॥
ನಿಸರಿಸಸಾನಿ ಧನಿಧಪಾಮ ಗಧಮಗರಿಸ–ರಿಗಮಪಧನಿ ॥

ರಾಗ: ಕಾಂಬೋಧಿ–೪ ತಾಳ: ರೂಪಕ

ಜಂಭಾರಿವಿನುತನ–ಚರ–ಣಾಂಬುಜಯುಗಳವ– ।
ಕಾಂಬೋಜಿರಾಗದಿ ಸಂಭ್ರಮಾತಿಶಯದಿ ಹಾಡುತ ॥

ಸಾ, ನಿಧಪಧಪಾಮಗಮಪಾ, ಮಗರಿ ಸರಿಗಮಪಧ ।
ಸಾರಿಗಮಗರಿಸನಿಧಪಧಾರಿಸನಿಧಪಮಗಪಧ ।
ಸರಿಸಸಾನಿ ಧನಿಧಪಾಮ–ಗಧಮಗರಿಸ–ರಿಗಮಪಧನಿ ॥ ॥ ೪ ॥

ರಾಗ: ನಾಯಕಿ–೫ ತಾಳ: ರೂಪಕ

ಭೂಮಿಯನಾಳೀರಾಜರ–ಕ್ಷೇಮವ ನೋಡೆನುತೀಗ
ಪ್ರೇಮದಿ ನೀ ಕೇಳ್ಳೈ–ಶ್ರೀನಾಯಕಿ ರಾಗದಿ ॥ ೫ ॥

ಪದಪಸಾಸ–ಪಧನಿನಿಧಪ–ಮಧಪಮರಿಗರಿಸ ರಿಮಪದ–
ಪಪಮರಿ–ಗಗರಿಸ–ರಿಮಪದ–ನಿನಿಧಪ ಮಪಧಪ–
ಸನಿಸರಿ–ಸಸಸಾನಿ–ಧನಿಧಪಾಮ–ಗಧಮಗರಿಸ–ರಿಗಮಪದನಿ

ರಾಗ: ಭೈರವಿ–೬ ತಾಳ: ರೂಪಕ

ಜನರೆಲ್ಲ ಪರಾರ್ಥವನೆ ಬಯಸುವಂತಾಗಲೆಂದು ।
ಮುನಿವಂದ್ಯನಭೈರವಿಯೊಳು ನೆನೆಸಂತತ ಹೇ ಮನವೆ ॥ ೬ ॥

ಸಾ, ರಿಸರಿನಿಧಪಮಗರಿಸಾ ರಿನಿಸರಿಗಮಪದನಿ ಸರ್ರಿಗರಿಸ
ನಿರಿನೀಧಪ–ಮಪಮಗರಿಸ–ರಿಗಮಪಧನಿ
ಸರಿಸಸಾನಿ–ಧನಿಧಪಾಮ–ಗಧಮಗರಿಸ–ರಿಗಮಪಧನಿ ॥

ರಾಗ: ಮೋಹನ–೭ ತಾಳ: ರೂಪಕ

ಮೋಹವೆಲ್ಲಹೋಗುತ ಸುವಿವೇಕೋದಯವಾಗಲು ।
ಶ್ರೀಹರಿಚಿದ್ವೈಭವವನು ಮೋಹನರಾಗದಿಂದ ಹಾಡಿ ॥ ॥ ೭ ॥

ಸಾಸಧಪ ಧಪಗರಿಸಧಸಾ, ಪಧಸರಿಗ ಗಪಧ
ಸರಿಧ ಸಪಧಗಪರಿಗಸರಿ–ಸಧಪಧಸರಿಗಪಧಸಧಪ

ರಾಗಗಳ ಆರೋಹಣ–ಅವರೋಹಣ

ಕಲ್ಯಾಣಿ: ಮಪಧಪಮಗ–ರಿಗಮಪಧನಿ–ಸರಿಸಸಾನಿ–
ಧನಿಧ ಪಾಮ–ಗಧಮಗರಿಸ–ರಿಗಮಪಧನಿ

ಶಂಕರಾಭರಣ: ಪಮಗರಿಸನಿ–ಸರಿಗಮರಿಗ

ತೋಡಿ: ರಿಗರಿನಿಸರಿ–ನಿಧಮಗರಿಸ

ಕಾಂಬೋಧಿ: ಸರಿಗಮಪಧ ರಿಸನಿಪಧಸ

ನಾಯಕಿ: ರಿಮಪಧ–ನಿನಿಧಪ–ಮರಿಗರಿ

ಭೈರವಿ: ಮಪಧನಿ ಸನಿಧಪಮಗರಿಸ

ಮೋಹನ: ಸದಪಗರಿಸ – ರಿಗಪದಸದ

* * *

ಅನುಬಂಧ-೧

ಹೊಸಕೆರೆ ಚಿದಂಬರಯ್ಯ ಕೃತಿ ಸೂಚಿ

೧. ಅನುಭವಾಮೃತ

೨. ಆತ್ಮಶಕ್ತಿಯ ತೇಜಸ್ಸು

೩. ಆರ್ಯಧರ್ಮಪ್ರದೀಪ

೪. ಆರ್ಯಮತ ಸಾರ

೫. ಈಶಸಾರ

೬. ಉಪದೇಶ ಪಂಚಕ

೭. ಉಪಾಧ್ಯಾಯರ ಯೊಗ್ಯತೆಗಳು

೮. ಕಲಿಸಂತರಣ (ನಾಟಕ)

೯. ಕಾಲಾಂತಕ(ಕಾದಂಬರಿ)

೧೦ ಕೀರ್ತನ ಕಂಠಾಭರಣ (ಐದು ಭಾಗಗಳು)
ಕೆಲವು ಉಪಾಖ್ಯಾನಗಳು (೧೯೩೧)
ಕೆಲವು ಸತ್ಪುರುಷರ ಕಥೆಗಳು (೧೯೩೧)
ಭಾಗವತದ ಕೆಲವು ಕಥೆಗಳು (೧೯೩೧)
ಭಾರತದ ಕೆಲವು ಕಥೆಗಳು(೧೯೩೦)
ರಾಮಾಯಣ(೧೯೨೮)

೧೧ ಕೃಷ್ಣ ಮಾಹೇಶ್ವರಿ (೧೯೧೦) (ನಾಟಕ)(ಪದ್ಯಗಳಿವೆ.)

೧೨ ಗಣಿತಾಬ್ಜ ಭಾಸ್ಕರ(ಶಿಕ್ಷಣ ಗ್ರಂಥ)

೧೩ ಗೀತಾರ್ಥ ವಿವರಣೆ

೧೪ ಗೀತಾರ್ಥಚಂದ್ರಿಕೆ(೧೯೨೯)

೧೫ ಗೀತೆಯ ಕೈಗನ್ನಡಿ(೧೯೮೮) ೧೫೮ನೆಯ ಮುದ್ರಣ

೧೬ ಗೀತೆಯ ತಿರುಳು(೧೯೪೯) ಎ.ಮುದ್ರಣ

೧೭ ಗುಣನಿರೂಪಣೆ(೧೯೨೬) ಎ.ಮು.

೧೮ ಗುರುಸ್ತುತಿ ಕುಸುಮಾಜಲಿ

೧೯ ಚರಿತ್ರ ಚಿಂತಾಮಣಿ

೨೦ ಚರಿತ್ರ ಚೂಡಾಮಣಿ

೨೧ ಚೂಡಾಲೆ (೧೯೨೯) (ನಾಟಕ)

೨೨ ಜೀವನ್ಮುಕ್ತಿ ವಿವೇಕ(೧೯೧೮)(೧೯೬೩ ಎ. ನಮುದ್ರಣ)
೨೩ ಝೂನ್ಸಿ ಲಕ್ಷ್ಮೀ ಬಾಯಿ(೧೯೬೫ ಮೂ. ಮುದ್ರಣ)
೨೪ ತಾರಾನಾಥ ತರ್ಕ ವಾಚಸ್ಪತಿ(೧೯೨೭)
೨೫ ನವೀನ ಕಲ್ಪ(ನಾಟಕ)
೨೬ ನೀತಿ ಸಾರ (೧೯೦೬)
೨೭ ನೀತಿಗಳ ನೆಲೆಗಟ್ಟು ಭಾಗ ೧ (೧೯೫೪ ಎ.ಮು.)
೨೮ ನೀತಿಗಳ ನೆಲೆಗಟ್ಟು ಭಾಗ ೨
೨೯ ನೀತಿಗಳ ನೆಲೆಗಟ್ಟು ಭಾಗ ೩
೩೦ ಪಂಚದಶೀ ತತ್ತ್ವಾರ್ಥ
೩೧ ಪರಮಾತ್ಮ ಸ್ತುತಿ
೩೨ ಬೋಧನ ಕ್ರಮ
೩೩ ಬೋಧನೆಯ ಸ್ವಭಾವ
೩೪ ಬ್ರಹ್ಮ ಸೂತ್ರಗಳ ಬೆಳಕು(೧೯೩೭)
೩೫ ಬ್ರಹ್ಮಾನಂದರು
೩೬ ಭಕ್ತಿಗೀತಾವಳಿ
೩೭ ಭಕ್ತಿದೀಪಿಕೆ(೧೯೧೦) (ಕವಿತಾ ಸಂಗ್ರಹ)
೩೮ ಭಗವದ್ಗೀತಾ ಸಾರ ವಿಚಾರ
(೧೯೦೮ ಮೊದಲ ಮುದ್ರಣ, ೧೯೨೬ ಎ.ಮುದ್ರಣ
೩೯ ಭರತಖಂಡದ ಜೀವನಜ್ಯೋತಿಗಳು (ಭಾಗ ೧)
೪೦ ಭರತಖಂಡದ ಜೀವನಜ್ಯೋತಿಗಳು (ಭಾಗ ೨)(೧೯೨೩)
೪೧ ಭರತನ ಬಂಧು ಪ್ರೇಮ (ಕತೆ)
೪೨ ಮಕ್ಕಳ ಕೈಗೀತೆ
೪೩ ಮನಶ್ಶಿಕ್ಷಣ (ಶಿಕ್ಷಣ)
೪೪ ಮನಸ್ಸಿಗುಪದೇಶ (೧೯೧೯)(ಪದ್ಯ)
೪೫ ಮಲ್ಲಾರಿ ಮಹಾತ್ಮೆ (೧೯೩೫)
೪೬ ಮಾಂಡೂಕ್ಯ ಸಂವಾದ (ಉಪನಿಷತ್ತು)
೪೭ ಮಾಧವರಾವ್ ಸಿಂಧ್ಯ
೪೮ ಮಾರುತಿಯ ಚರಿತ್ರೆ

೪೯ ಮೈತ್ರೇಯಿ (ಕಾದಂಬರಿ)
೫೦ ರಾಜಭಕ್ತಿ
೫೧ ರಾಮನಾಮದ ಮಹಿಮೆ
೫೨ ರಾಸಕ್ರೀಡೆ
೫೩ ವಸ್ತು ಪ್ರದರ್ಶನ
೫೪ ವಾಲ್ಮೀಕಿಯ ಜಯ (ಕಾದಂಬರಿ)
(ಅನುವಾದ: ಬಂಗಾಲಿಯಿಂದ) (೧೯೨೬)
೫೫ ವಿದ್ಯಾರಣ್ಯ ಕಾವ್ಯಂ (೧೯೨೪)
೫೬ ವೇದಾಂತ ಜೀವಾಳ (೧೯೩೪) ಶಂಕರ ಕಥಾಮೃತ
೫೭ ವೇದಾಂತ ವಿಚಾರದ ಗುಟ್ಟುಗಳು
೫೮ ವೇದಾಂತದ ರೂಪುರೇಖೆ (೧೯೩೫)
೫೯ ಶಂಕರ ಸ್ತೋತ್ರ ಮಾಲೆ
೬೦ ಶಾಂತಾದೇವಿಯ ಸಂಸಾರ (ನಾಟಕ) (೧೯೩೨)
೬೧ ಶ್ರೀ ಶಂಕರ ಸ್ತೋತ್ರ ಮಾಲೆ (ಪದ್ಯ)
೬೨ ಶ್ರೀ ಶಂಕರಾಚಾರ್ಯ ಆಖ್ಯಾನ
೬೩ ಷಟ್ಪದಿ ಝೇಂಕಾರ (ಶಂಕರ ಸ್ತೋತ್ರ)
೬೪ ಸುಧರ್ಮ ಪ್ರಭಾವ (ನಾಟಕ)
೬೫ ಸುಶೀಲಾ ಪರಿಣಯ (ನಾಟಕ) (೧೮೯೯)
೬೬ ಸೂಕ್ತಿಮಾಲೆ
೬೭ ಸ್ತ್ರೀಧರ್ಮ ಸಂಗ್ರಹ (೧೯೦೬) (ಪದ್ಯ)
೬೮ ಹಣ್ಣಾದ ಹಂಬಲಿಕೆ
೬೯ ಹರೇ ರಾಮ ಮಂತ್ರ ಪ್ರಶಂಸೆ (ಸಮರ್ಥ ರಾಮದಾಸರು) ಸ್ತೋತ್ರ

ಮುದ್ರಣಶಾಲೆಯಲ್ಲಿಯೇ ಕಳೆದು ಹೋದವು:

೭೦. ದೌರ್ಭಾಗ್ಯ ದಾಂಪತ್ಯ (ನಾಟಕ)
೭೧. ದುರ್ಗಾವತಿ (ನಾಟಕ)

* * *

ಅಕಾರಾದಿ ಕೀರ್ತನೆಗಳ ಪಟ್ಟಿ

ಅಂಜನಾನಂದದಾತ ೯೫
ಅವತರಿಸುವನು ೫೧
ಆ ರಮಣೀಯ ರೂಪ ೮೦
ಆಟಪಾಟಂಗಳ ತೋರಿಸೋ ೩೪
ಆದಿತ್ಯನೆ ನಮಿಪೆ ೧೪೬
ಆರೆನ್ನರಕ್ಷಿಸುವರು ೭
ಇದಕೀಗ ನಾನೇನ ಮಾಡಲಯ್ಯ ೮೧
ಇದಕೆ ಸಂಶಯವಿಲ್ಲ ೭೧
ಇದು ಚಿತ್ರವೇ ಸರಿ ೪೧
ಇದು ನನ್ನದೆಂದು ನಂಬಿ ೧೪೯
ಇದು ನಿನಗುಚಿತವೆ ೭೦
ಇದುಯೇನು ಮಹಿಮೆ ಮಾತೆ ೧೩೯
ಇನ್ನೆಂತು ನಾ ಪಾರಾಗುವೆ ೪೯
ಇನ್ಯಾರಿಗೆ ನಾ ಶರಣೆನ್ನಲಿ ೨೫
ಇಷ್ಟಾರ್ಥವನು ನೀಡು ೧೪೪
ಈಗೆನಗೆ ಕಾಣಿಸು ನೀ ೨೮
ಈಶಾ ವಿಶ್ವೇಶ ಪೊರೆ ೧೧೯
ಎಂಥಾ ದಯಾವಂತನೊ ನೀ ೧೦೫
ಎಂಥಾ ಮಹಿಮೆಯೇ ೧೨೭
ಎಂದಿಗೆ ತೋರುವೆಯೋ ೨೭
ಎಂದಿಗೆ ನಾನೀ ಸುಖವನನುಭವಿಸುವೆನೊ ೪೨
ಎಂದು ನಿನ್ನ ಪಾದವನ್ನಾ ೧೩೪
ಎನಗೆ ನೀ ಗತಿ ೩೦
ಎಷ್ಟು ದಯಾಳುವೋ ನೀನು ೬೫
ಎಷ್ಟು ಸುಂದರ ಎಷ್ಟು ಮಧುರ ೮೭
ಎಷ್ಟು ಹೇಳಲಿ ಕೃಷ್ಣ ನಿನ್ನಯ ೩೧
ಎಷ್ಟೆಂದು ವರ್ಣಿಸಲಿ ೯೦
ಏನಿದಚ್ಚರಿಯೋ ಶ್ರೀ ಹರಿ ೫೩
ಏನಿದು ಪೇಳ್ಭಕ್ತಪರಾಧೀನತೆ ೪೦

ಏನೆಂದು ವರ್ಣಿಸಲಿ ಸದ್ಗುರು ೧೭
ಒಮ್ಮೆಯಾದರೂ ಆ ಕುಡಿ ನೋಟವು ೩೩
ಕಮಲನಯನೆ ಕಮಲಸದನೆ ೬೩
ಕಮಲಾಕ್ಷಿ ಪಾಲಿಸೆನ್ನನು ೬೨
ಕಮಲಾನಾಥ ಹರಿಗೋವಿಂದ ೪೫
ಕರುಣದಿಂದ ಪೊರೆವುದೆನ್ನ ೧೪೩
ಕರುಣದಿಂದೆನ್ನ ೧೧೧
ಕಾಯ್ಯೆ ಕರುಣಾಕರ ೬೯
ಕಾಶೀಪ್ರಾಂತ ಪ್ರವಾಹೀ ೧೩೭
ಕೇಶವಾ ಮಾಧವಾ ಪಾಲಿಸೈ ೫೬
ಕೇಳೈ ನಾ ಹೇಳುವೆ ೧೫೨
ಕ್ಷಮಿಸೆನ್ನಯ ಅಪರಾಧವನೀಗ ೧೧೬
ಗಂಗಾ ಗಂಗಾ ಎಂದು ೧೩೩
ಗಂಗಾದೇವಿ ನಮೋ ೧೩೬
ಗಂಗಾಧರ ಶಂಕರಹರ ೧೧೭
ಗಣಪತಿಗೆರಗುವೆ ೩
ಗರುಡಗಮನ ೫೪
ಗಿರಿಜಾತನಯ ಪರಿಹೃತಮಾಯ ೪
ಗಿರಿರಾಜ ಪ್ರೇಮಪುತ್ರೀ ೧೩೧
ಗಿರೀಶಾ ಗೌರೀ ಪ್ರಾಣಾಧೀಶ ೧೦೧
ಗುರುಚರಣಕೇಸರಿ ೧೫
ಗುರುದೇವ ನಿನ್ನ ೧೬
ಗುರುರಾಜ ಎನ್ನಯ ೨೨
ಗುರುರಾಜ ಬ್ರಹ್ಮರೂಪ ೨೪
ಗುರುವರ ನಿನ್ನಡಿಗಳಿಗೆ ೨೩
ಚರಣಯುಗವ ತೋರು ನನಗೆ ೬೭
ಚರಣಯುಗವ ೧೨೩
ಚಿತ್ತ ಜಯವನೀಯವಂಥ ೧೪೨
ಚಿತ್ತದಲ್ಲಿ ನೀ ೮೪
ಜನಕಜಾವರಾ ೭೭
ಜನ್ಮಗಳನೆನಗೆ ಕೊಡು ೯೬
ಜಯಜಯ ದೇವಾಧಿದೇವ ೫೫

ಜೋಜೋಜೋ ನೀಲಮೇಘ ಸಂಕಾಶ	....	೮೮
ತಿಳಿಯುವದಾಗದೋ	....	೧೧೦
ತಿಳಿವೆನೆಂತು ನಾ- ಚಂದ್ರಚೂಡ ನಿನ್ನ	....	೧೦೭
ತೋರಬಾರದೆ ಚಾರುಮುಖವ	....	೩೯
ತ್ರಿಪುರದಾಹಕವೇಷವ	....	೯೯
ದಯಮಾಡಿ ಕೊಡೊ ಎನ್ನಿಷ್ಟವ	....	೮೨
ದಾಶರಥೆ ದಯೆ ತೋರಿಸು	....	೬೬
ದಾಶರಥೆ ರಾಮಚಂದ್ರ	....	೬೮
ದಾಸ್ಯವನೇ ಬೇಡುವೆ ನಿನ್ನ	....	೮೩
ದೇವಿ ಶಾರದೆ	....	೧೧
ನಲಿದು ಪೂಜಿಪೆ ನಾನು	....	೯೩
ನಾಮಭಿಕ್ಷವೀಯೋ	....	೭೮
ನಿನಗಾರು ಸರಿಯೋ	....	೧೮
ನಿನಗೆ ಸಮಾನರುಂಟೆ	....	೧೨೮
ನಿನ್ನ ನಂಬಿದೆ ಶಾರದೆ	....	೧೦
ನಿನ್ನ ಬಿಟ್ಟು	....	೧೦೮
ನಿನ್ನ ಶೌರ್ಯವನೇ-ನ ಹೇಳಲಿ	....	೮೯
ನಿನ್ನನಾಶ್ರಯಿಸುವೆ ಗೋಕುಲೇಶ	....	೩೨
ನಿನ್ನನೇನೂ ಬೇಡುವುದಿಲ್ಲ	....	೧೧೪
ನಿನ್ನನೊಲಿಸಿಕೊಳ್ಳಲಾರೆನೊ	....	೪೩
ನೀ ಕೈಬಿಡೆ ಕಾಯುವರಾರು	....	೨೬
ನೀನೆಂದು ನನ್ನ ಮುಂದೆ	....	೧೦೬
ನೀನೆನಗಿದನರುಹಯ್ಯ	....	೫೦
ನೀನೆನ್ನ ಕಣ್ಮುಂದಿರುತ	....	೧೨೫
ನೀನೇ ತಾಯಿ ಎನಗೆ	....	೬೧
ನೀನೇತಕೆ ನಾನೆಂಬುವೆ	....	೧೫೪
ಪರಿಪಾಲಿಪುದೆನ್ನನು	....	೫೭
ಪರಿಪೂರ್ಣವಾದ ಪ್ರೇಮದಿಂದ	....	೫೯
ಪಾಲಿಸೆನ್ನ ದತ್ತಮುನಿಯೆ	....	೧೪೦
ಪಾಲಿಸೆನ್ನ ಹಿಮಗಿರೀಂದ್ರ	....	೧೨೯
ಪಾಲಿಸೆನ್ನನೀಗ ಪಾರ್ವತಿ	....	೧೨೨
ಪೂಜಿಸುವೆನು ನಿನ್ನ	....	೫


ಪೊರೆ ಕೃಪಾಕರೆ ಪಾರ್ವತಿ	....	೧೨೪
ಪೊರೆ ಬೇಗ ಹರ ಈಗ	....	೧೦೨
ಪೊರೆವುದೆನ್ನ	....	೬
ಪ್ರಮಥ ಗಣೇಶ್ವರ ಮಹೇಶ	....	೯೮
ಬಂದನೇ ಭಗವಂತನು	....	೫೨
ಬಹುಚಿತ್ರವೀ ನಿನ್ನ ಮಹಿಮೆ	....	೧೦೩
ಬೇಗ ನನ್ನ ಬಳಿಗೆ ಬಾರೊ	....	೧೧೩
ಬೇಡುವೆನ್ನೈ ಶಾಂತಿಯನ್ನು	....	೧೩೮
ಭಕ್ತಿಭಿಕ್ಷವ ಕೊಡೊ	....	೨೦
ಭಜಿಸುವೆನು ಸಂತತ	....	೧೩೯
ಭಾಗೀರಥಿಯೆ ಬಾಗಿ ವಂದಿಸುವೆ	....	೧೩೫
ಭಾರತೀದೇವಿಗೆರಗುವೆನು	....	೯
ಮಂತ್ರವೆಂದು ಸಿದ್ಧಿಸುವದೊ	....	೭೯
ಮನವೆ ನೀನು ಹೆದರಬೇಡ	....	೧೫೦
ಮನವೇ ಮನವೇ	....	೧೪೮
ಮನುಜನ್ಮದಲಿ ಹಾಕಿದ ಮಾತ್ರಕೇ	....	೯೭
ಮರೆಯದೆ ಇರುವಂತೆ ಮಾಡೊ	....	೬೪
ಮಾತೇ ಮಂಗಳಾಂಗಿ	....	೬೦
ಮಾರುತೀ ಪೊರೆ ನೀಂ	....	೯೨
ಯಾಕೆ ನಿರ್ದಯನಾದೆ ಮಾರುತಿ	....	೯೧
ಯಾತಕುಪೇಕ್ಷೆಯ ಮಾಡುವೆ	....	೭೫
ಯಾರಿಗೆ ಹೇಳಲಿ ಗೋಳ	....	೧೫೭
ರಾಜೇಂದ್ರ ದತ್ತದೇವನಿಗೆ	....	೧೪೧
ರಾಧಿಕಾ ಮನೋವಲ್ಲಭ	....	೨೯
ರಾಮ ಬಾರೋ ರಘುನಂದನ	....	೭೩
ಲಂಬೋದರ ಅಂಬಿಕಾಕುಮಾರ	....	೨
ವಂದಿಪೆ ಮನದಲಿ	....	೯೪
ವರವನನುಗ್ರಹಿಸೋ	....	೩೫
ವರವನೆನಗಿದೊಂದನೀ	....	೧೦೯
ವಿಘ್ನೇಶ ವಿಘ್ನರಾಜ	....	೮
ಶಂಕರ ಚಂದ್ರಚೂಡ	....	೧೧೫
ಶಂಕರಾ ನಿನ್ನ ಸೋಂಕಿನ	....	೧೦೦

ಶಂಭೋ ಗಿರಿಜಾರಮಣ	....	೧೨೧
ಶರಣರ ಕಾಮಧೇನು	....	೧೪೭
ಶರಣಾಗತ ಪರಿಪಾಲಕ	....	೮೫
ಶರಣು ಶರಣು ಶರಣು ಪರಮ	....	೩೬
ಶರಣು ಶಾರದೆ	....	೧೨
ಶಾರದಾದೇವಿ	....	೧೩
ಶಿವ ಶಿವ ಗಿರಿಜಾ ಸಹಾಯ	....	೧೧೮
ಶ್ರೀ ಗಿರಿಜಾತನಯಾ	....	೧
ಶ್ರೀ ಗೌರೀ ಪ್ರಾಣನಾಥ	....	೧೨೦
ಶ್ರೀ ಶಂಕರಾ ಕರುಣಾಶರಧೆ	....	೧೦೪
ಶ್ರೀಪತಿ ನೀ ಗತಿ	....	೪೭
ಶ್ರೀರಾಮ ರಾಕ್ಷಸ	....	೭೬
ಶ್ರೀರಾಮ ರಾಮಭದ್ರ	....	೮೬
ಶ್ರೀರಾಮಚಂದ್ರ ದೇವ	....	೭೪
ಶ್ರೀಶೈಲ ಸಂಭವೆ ಸುವೈಭವೆ	....	೧೩೨
ಸಪ್ತರಾಗಮಾಲಿಕೆ	....	೧೫೯
ಸರಸಿಜಾಸನನ ರಾಣಿ	....	೧೪
ಸರಿಯಲ್ಲವೊ ಕಣ್ಣಾಮುಚ್ಚಾಲೆಯು	....	೪೪
ಸಾಧಿಸು ಮನವೇ ನೀ	....	೧೫೬
ಸೆರಗನೊಡ್ಡಿ ನಾನು ಬೇಡಕೊಳ್ಳುವೆನು	....	೧೧೨
ಸೆರಗೊಡ್ಡಿ ಬೇಡುವೆನು	....	೧೨೬
ಸೆರೆಗೊಡ್ಡಿ ನಾ ಶರಣೆಂಬುವೆ	....	೧೪೫
ಹರಿಶರಣೆಂದೆನು ಮನವೆ	....	೧೫೩
ಹಾಡಿ ಹೊಗಳಲೆಷ್ಟೋ ಸುಖವದು	....	೩೭
ಹೀಗಿರು ನೀನೀಗ ಮನವೆ	....	೧೫೧
ಹುಡುಕಬಾರದೆ ಮೃಡನ ಪಾದವ	....	೧೫೫
ಹೊಗಳಬಲ್ಲೆನೆ ಶ್ರೀ ಕೃಷ್ಣ ನಿನ್ನ	....	೪೮

* * *

ಹೊಸಕೆರೆ ಚಿದಂಬರಯ್ಯ ನವೋದಯ ಕನ್ನಡ ಸಾಹಿತ್ಯದಲ್ಲಿ ಕಂಡುಬರುವ ಅದ್ವೈತ ವಿದ್ವಾಂಸರು ಮತ್ತು ಕಾವ್ಯ, ನಾಟಕ, ಪ್ರಬಂಧ, ಜೀವನಚರಿತ್ರೆ, ಕೀರ್ತನೆ, ಹರಿಕಥೆ ಮೊದಲಾದ ನಾನಾ ಸಾಹಿತ್ಯ ಪ್ರಕಾರಗಳಲ್ಲಿ ನೂರಕ್ಕೂ ಹೆಚ್ಚಿನ ಕೃತಿಗಳನ್ನು ಶ್ರೇಷ್ಠ ಕೃತಿಗಳನ್ನು 20ನೇ ಶತಮಾನದ ಪ್ರಾರಂಭದಲ್ಲಿ ರಚಿಸಿರುವ ಬಹುಮುಖಿ ಸಾಹಿತಿಗಳು. 'ಕರ್ಣಾಟಕ ಕವಿರತ್ನ' ಬಿರುದಾಂಕಿತರು. ಆಧುನಿಕ ಕನ್ನಡ ಗದ್ಯ ಸಾಹಿತ್ಯ ನಿರ್ಮಾಪಕರಲ್ಲಿ ಒಬ್ಬರಾದ ಹೊಸಕೆರೆ ಚಿದಂಬರಯ್ಯ, ಕನ್ನಡ ಕೀರ್ತನ ಸಾಹಿತ್ಯಕ್ಕೆ ನೀಡಿರುವ ಕೊಡುಗೆ ಅಪೂರ್ವ. ಕೀರ್ತನಕಂಠಾಭರಣ. ಭಕ್ತಿಗೀತಾವಳಿ-ಕೀರ್ತನೆ ಸಂಗ್ರಹ ಅವರ ಅದ್ವಿತೀಯ ಗ್ರಂಥಗಳಾಗಿವೆ. ಕೀರ್ತನ ಸಾಹಿತ್ಯಕ್ಕೆ ಚಿದಂಬರಯ್ಯ ನೀಡಿರುವ ನೂತನ ಕೊಡುಗೆಯಾಗಿದೆ.

"ಕರ್ನಾಟಕದಲ್ಲಿ ನಾನು ಕಂಡ ಪವಿತ್ರ ಜೀವಿಗಳಲ್ಲಿ ಇವರೊಬ್ಬರು" ಎಂದು ಪಂಡಿತ ತಾರಾನಾಥರಿಂದ ಹೊಸಕೆರೆ ಚಿದಂಬರಯ್ಯ ಪ್ರಶಂಸೆಗೆ ಒಳಗಾದರು.



ಸರ್ಕಾರಿ ಶಾಲಾ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ ಹೊಸಕೆರೆ ಚಿದಂಬರಯ್ಯ ಗೀತಾ ಗ್ರಂಥರಚನೆ, ಗೀತಾಪ್ರಚಾರ, ಗೀತೋಪನ್ಯಾಸಗಳ ಮೂಲಕ ಅದ್ವೈತ ಹರಿದಾಸ ಸಾಹಿತ್ಯಕ್ಕೆ ಅನುಪಮ ಸೇವೆ ನೀಡಿದ್ದಾರೆ.

ಕೀರ್ತನ ಕಲೆಯಿಂದ ಪ್ರಭಾವಿತರಾಗಿ ಹರಿಕಥೆ, ಹರಿಕೀರ್ತನೆ ರಚಿಸಿದರು. 'ಭಕ್ತ ಬಂಧು' ಮಾಸಿಕ ಆರಂಭಿಸಿದರು. ಬಹುತೇಕ ಕೃತಿಗಳನ್ನು ಜನಸಾಮಾನ್ಯರಿಗಾಗಿಯೇ ರಚಿಸಿದರು.

ಪ್ರೊ|| ಜಿ. ಅಶ್ವತ್ಥನಾರಾಯಣ

ಪ್ರಕಾಶಕರು
ಹೊಸಕೆರೆ ಚಿದಂಬರಯ್ಯ ಸಂಸ್ಮರಣ ಸಮಿತಿ ಟ್ರಸ್ಟ್
ಬೆಂಗಳೂರು